ಪ್ರಜಾವಾಣಿ ಭಾನುವಾರ • ಜುಲೈ 28, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

AVAILABLE FOR RENT



8925sqft New RCC Building Rent

Ground, 1st & 2nd Floor, Suitable for CORPORATE OFFICE, BANKS, EDUCATION INSTITUTIONS

At GKR Complex, Gopalapura Hesaragatta Main Road Very Close to BGS Campuse, 5 Kms from Hesaragatta town

Cantact: 97396 74879/94810 84571

REAL ESTATE SELLING

Sites

SALE BDA Site 30x40 BSK 6th Phase 7th Block North facing direct registration No agreement No broker owner 9844270806

BANASHANKARI 6TH Stage 4th Block, BDA Site Sale, 30X40 South Facing Contact: 9844216344 9448508410

Arkavathi Layout

55X100 PROPERTY For Sale at Arkavathi Latout, Srirampura (Revenue Title). Contact: 7676900174 6363496142

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

"SALE COMMERCIAL Site's Banashankari 2nd Stage 50x80, J.P.Nagar 60x90, 40x60, Jayanagar 40x60, For more details. 9845286505

Hebbal

SANJAYNAGAR 30X40 SAHAKARNAGAR 30X40 JUDICIAL-LAYOUT 40X60 NTI-LAYOUT 40X60 CANARA BANK-LAYOUT 40X70 MANYATA RESIDENCY 45X60 DETAILS 'MAHAKAAL PROPERTIES' 9900001973

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call: 9341260828

HRBR Layout

HRBR 2ND Block BDA Sale 30x40 House Ground and First each 2 BHK 2.85 Crores. HRBR BDA Sale 3rd Block 30x40 North Facing 2 BHK House 2.9 Crores. Kammanahalli near Empire Hotel Ground, first, second each 2 BHK, 'A' Katha, Rental Income 60,000 for P.G Income 1.5 lakhs Negotiable: 73493-22223

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

Kempegowda Layout

NADA PRABHU Kempegowda Layout Site No. 1691 South face 40x60 8th Block 'E' Sector sqft 6500/ negotiable. 9980339217, 9448709882

"KEMPEGOWDA LAYOUT 3rd Block L Sector West facing 40X60 total Square feet 2400, Price ₹6000/-. Call: 9035277788"

Mysore Road

RERA-BMRDA APPROVED Sites
Rs. 2 Lakh Discount
ON SPOT BOOKING
Mysore Road, Near Big Banyan Tree, Bank Loan Avbl, Ready for Regist ration & Construction. Call for Site Visit: 9606940714

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Mysore

SITE FOR sale 30 x 50 E/F Hanchaya Village, Mysore. MUDA approved just 7.5km from Suburban Bus Stand. Rate : Rs. 5000/-sqft. Owner 9481067944 / 7892798276

Nagarabhavi

50X80 EAST FACING CORNER SITE Sale Nagarabhavi 2nd Stage, Near Swathi Hotel. Genuine Buyers Call: 9964358675.

"NAGARABHAVI BDA Complex 30x45 North, 30x50 East facing BDA Site, Full white, Immediate Registration. 9448432633"

Rajarajeshwari Nagar

SITE FOR SALE KANAKAPURA ROAD & RR NAGAR 5th STAGE 30x45 CALL: 8951748434/ 9986401915

Yelahanka

SALE 7000 square feet land near Yelahanka Aradeshnahalli toll gate. Contact 9632691412

Vidyaranyapura

VIDYARANYAPURA HMT Layout 40X60 BDA APPROVED Site Excellent Location 40 Feet Road For Sale, 9341260828

Vishweshwariah Layout

AVAILABLE 30X40 BDA Site Vishweshwariah Layout 2nd Block 40ft Road Good Location Genuine Buyers: 9844603127

SMV LAYOUT 8th Block 20x30 BDA Semi-Commercial East Face SITE With Office SALE. 9164089633, 9663226688.

"SITE FOR-SALE Praghathi Nesara BDA Layout Komghatta 40x90 East and 40x60 East. Contact: 9632788913"

SALE, BDA 60X40 Adjacent 3 sites, S/f @ SMV Layout, 3rd block, 11000/ sqft. 7411255535

DIRECT OWNER 40x60 BDA Site-Sale VISHVESWARAIAH LAYOUT BLOCK-7,near KLE Law College,Adjacent to Nagarabhavi. Call:9742681666

'A' KHATA Plot for Sale, 18500 sqft Vishweshwariah Layout 6th block, Ullal Upanagara. 7022573176/ 8308173176.

Yeshwanthpur

SALE TUMKUR Road, BDA 112x125 Commercial Site, West facing 200ft road, Near Orion Mall, Metro cash and'carry, Yeshwantpur Railway station. Contact Owner 9900276199.

Mysore

INVEST ON Chance Property just 100 meters to Infosys Mysore East Gate 40x60 West Facing Site, E Khata @ 5300/- Psqft. Chandru: 9844754873

Magadi Road

30*50 PLOT for sale WF 40 ft road 'A' Khata Rs 11750/- BEL Layout 2nd Stage Magadi Road Contact: 9916826976.

40*60 SALE SF 40 ft road 'A' khata Rs 10000/- BEL Layout 2nd Stage Magadi Road Contact: 9916826976.



RESERVE BANK Employees Housing Society (Regd) Approved Layout Magadi Road Tavarekere 30×50 site sale. 9611988112

House

Basaweshwaranagar

SALE BUILDING 2500 SQUARE FEET TWO FLOORS A KHATHA RS.1 CRORE 90 LAKHS: 9035883017

Jayanagar

SALE 30X50 Jayanagar 9th Block With old House East Facing Excellent Location Contact: 9066399102 9844134068

JAYANAGAR 4TH 'T' Block Corner 3BHK Duplex House 60feet and 40feet Road Call:9844134068 9066399102

JAYANAGAR 7TH Block Duplex 4 BHK House on 40 feet Road Excellent Location Call:9844134068 9066399102

Vidyaranyapura

VIDYARANYAPURA-60'X40'-BEL layout- 2 Block, 4 BHK Indpendent Duplex, Ready to move House:: 9449059015.

J P Nagar

J.P.NAGAR RBI Layout 30x50 North, 4BHK Duplex well maintained house, 26,500/- sft. Mahalakshmi Enterprise- 9845144365

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

House

R T Nagar

R.T.NAGAR HMT Layout 40X60 5-BHK Duplex-House, Lift, N/W Corner Teak, Italian Marble 4-Carparking 9845378269 7829203369

General

North

KRISHNAMURTHY PURAM, house on 46x61.5 site, north facing, prime location. Agents excuse. Contact 9945689540, 8105689819.

Flat

Bannerghatta Road

3 BHK Flat North Facing for Sale near Vijaya Bank Layout, Bannerghatta Road. Contact:- 8123541901

Malleshwaram

MALLESHWARAM 1611SFT 3.5BHK 3bath GF Apartment with 270Sft backyard and covered CP for SALE. 2.25Crores. UDS 847Sft . Call Estatespoint 98450-33443

Rajarajeshwari Nagar

FOR SALE- 3BHK spacious flat at Ideal Gagan Vihar call- 9986507655, 7349613954 www.chekkeraproperties.com

R T Nagar

R.T.NAGAR AMARJOTHI Layout 3-BHK Duplex Flat 2200 Sqft N/F Gated Community 1.80Cr, Call: 9986356467 9880997608

Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

Devanahalli

SALE 9250 Sqft half KM from KIADB, Aerospace INDUSTRIAL CONVERTED Land at Manchappanahalli, Cargo road, Devanahalli Rate Rs 3000/- Contact 9845048193

Mysore Road

ONE & Half Acres Converted land with petrol bunk, choultry UPCOMING GAS. Unit 60km from Bangalore towards mysore Brokers excuse 3000 sq.ft Contact: 9945231730

Commerical

J P Nagar

COMMERCIAL SITE 60x90 J.P.Nagar Ring Road, 50x85 off Bannerghatta Road, 50x80 J.P.Nagar 80ft Road -Murali 9845232711

Nagarabhavi

SALE NAGARABHAVI 80 Feet Road Commercial Corner Building, 4400sqft Area (Ground+ Four Floor) Kumar: 9945928994

North

FOR SALE: Hotel Property in Suratkal, Mangalore 4-storey building 20,000 square feet total area 40 rooms Located in the center of Suratkal market Freehold ownership Interested buyers should contact: Email: fazalnazirahmed@gmail.com WhatsApp: 9867554555

Villas/Bunglows

Mysore Road

40X60 VILLA Duplex House for sale at Mysore,near Devegowda circle ring road,3.50cr negotiable, genuine buyers. Contact:9900265678

Agricultural Land

Bannerghatta Road

BANNERGHATTA ROAD Kohli Param Road Sigapalya 100x100, 5-5 Gunta Separate Pani 1100000/- Gunta Negotiable 9844155175

Mysore Road

"MADDUR 25 GUNTAS COCONUT TREES BOREWELL CLOSE TO VILLAGE AND BUS ROUTE 33 LAKHS. 9845178335"

REAL ESTATE BUYING

Sites

Anjanapura

WANTED BDA SITE ANJANAPURA JP NAGAR 8TH 9TH PHASE ROYAL PARK BCC LAYOUT CONTACT: 9880776950

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact: 9902038118, 9449060605

WANTED BDA & BBMP SITES Anjanapura Banashankari 6th Stage, BCC & BCMC Layout, JP.Nagar 8th 9th Phase, Vishweshwaraiah Layout, Contact: 9845297419

WANTED BDA SITES ANJANAPURA , JP.Nagar 20x30,30x40, 40x60, 50x80,Immediate Settlement Sellers Contact : 9008844447

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

URGENT REQUIREMENT 30x40,`40x60, 50x80 BDA Commercial &.Residential for genuine buyers`in Vishveshwaraiya Layout,`BSK 6th`Stage, Vakhil's,`Narayan Nagar,`Judicial Layout and other areas`also, (Brokers excuse) Krishna- 9845059328

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

WANTED SITE in R.T.Nagar, Atmananda Colony, Sultanpalya, Kanakanagar in and around, immediately. Ph: 9591675731

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Agricultural Land Converted

Devanahalli

WANTED LAND: In and around Nandi Hills- Chikaballpura, Devanahalli we are looking for 2 to 15 acres of top-notch property for school with at least 40 feet wide attractive access road and frontage of at least 400 feet. Clear Titles & Real Owners. Contact SUMANTH NARAYAN. Email: info@eduweft.com /9606353036

Industrial & Factory

Peenya

WANTED INDUSTRIAL Area or shed of 2500 sq.Feet in & around peenya. Contact owners only.9113057549

Joint Development

Joint Venture

"URGENTLY REQUIRED- PROPERTY any dimensions in &`around Bangalore for Builders (Joint Venture or Individual). genuine Parties-Call: 9019533999/ 9731379933"

BUILDERS ESSENTIAL

Painting Contractors

PAINTERS! YOU want to become Contractors? We support you with High Quality Paints/Reasonable rates. Mock up Area Paint Free on Bulk orders. Dr.Vivekanandaswamy PRK Paints- 9342247637

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES


Accommodation Available

Industrial And Factory

FOR RENT, OPEN Area 5900 sq.ft. KSSIDC Industrial Site, 1st Phase Kanakapura 40 HP Power, Facing Highway, Opp Maruti Showroom. 9620869322

KIADB 18500 Rcc, 14500 sqft, 160 KVA, Industry, Godown Office Space for Rent Bommasandra- Jigani Owner: 9036765555

Commercial



Long Term Lease Rental
7447 Sft Fitted Out Office
with 96 Work Stations, 5 Cabins, 3 Meeting Rooms, 1Board,1MD Cabin, Cafeteria.
ON OLD AIRPORT ROAD NEXT TO HAL MUSEUM.
Whatsapp 98450 31550
For More Details. **Brokers Excuse !**

Flats

FLAT FOR SENIOR LIVING. ALL FACILITIES. NEAR BIAL. CALL SMS 9900103481

MATRIMONIAL

Grooms Wanted

Muslim

GROOM WANTED
Sunni Muslim Girl MA, BEd. Well settled working in a Reputed School as Teacher 28 Yrs 5'3". Seeking alliance from Muslim boy working in Bengaluru.
What's App/ call
9845076871
8762402525

Christian

GROOM WANTED
We are searching for good boy for our daughter who is 28 years old, working as Manager in MNC at Bengaluru, Salary: Rs.1.20 lakh / month. Annual Salary: Rs.20.00 Lakh. We are Tamil Nadar and CSI Christian. She is B.Tech. - Computer Science and MBA (Finance & Marketing), Fair, Height: 5'3", Expert in Cooking. Having our own houses in Tirunelveli and Bilaspur.
Contact Mobile No:
9893392905
eMail: gjas1968@gmail.com

Brides Wanted

Hindu

LOCALLY BASED employed employable girls for boy 32 Be mech employed 40000 caste no bar. Contact: 98458 91227

Muslim

THE AFFLUENT Family of Bangalore is looking for a suitable match for their Only Son 1993 Born 5'11' MBBS MD Doctor (080-69075204)

MUSLIM BOY 1996 Born 5'10' MS In Engineering/ Working in Texas is looking for a match (080-69075204)

JOB OPPORTUNITIES

Accounts & Finance

WANTED ACCOUNTANTS B.Com/ M.Com for Reputed Printing Industry Located in Majestic, Accommodation Provided, Send Resume: bangaloreoffset@yahoo.co.in . 9845151730/ 9900691118.

General

REQUIRED ANY Graduate for Marketing & Diploma in Electricals for Technical Support. Age Limit:- 30- 35 Years, with 3 years experience in scientific field. Contact:- The Industrial & Laboratory Equipment Co., 9448039931

EARN MORE than Rs:50000 in a month part/ Full time Age above 30 years Call:9343616020

JOB VACANCY
(CONTRACTUAL) AT URC 515 ARMY BASE WORKSHOP, Ulsoor, Bangalore-08
BILLING CLERK - 02
(Minimum 12th pass & Good Computer Knowledge)
SALE ATTENDANT - 01
(Minimum 10th pass)
(a) Eligible category as par preference for the above posts: (i) War Widows/Widows of Defence pers, (ii) Disabled Soldier, (iii) Ex Servicemen, (iv) Spouse Widows of ex- serviceman, (v) Others.
Last date of application: 10-08-2024
EMail: bangmweagle@gmail.com

COUNSELLORS NEEDED for Students of CHITRAKOOTA CBSE SCHOOL in Nagarbhavi, KENGERI RING ROAD, Immediately. Females to apply. CONTACT: 7829647333.

JYOTI NIVAS College
Autonomous
HOSUR ROAD, BANGALORE – 560095
Ph: 25530137
E-Mail Id: info@jyotinivas.org
Requires:
Female Assistant Professors in Computer Science and Hindi
Qualification:
PG first Class with NET/KSET. Ph.D. Preferred.
Non-Teaching:
Male Supervisor
Graduation with experience in Housekeeping
Apply to the principal on or before 29.07.2024

Hospital & Medical Jobs

DHANWANTARI HOSPITALS
15, Vinayaka Nagar, Chikkabanavara, Bengaluru-560090, Mob: +91 9606654149

REQUIREMENT OF HOSPITAL STAFF
- General Physician
- General Surgeon
- OBG Specialist
- Pediatrician
- Anesthetists
- Duty Doctors
- Nursing Officers
- Pharmacist
- MRD Supervisor
- Stores in Charge
- Tech Admin Maintenance Supervisor
- Lab & X Ray Technician
- Drivers

Qualification: (KPME Norms) Salary: as per Norms
Interested candidates shall mail the CV to info@dhanwantarihospitals.com by 05-08-2024

SVR DEGREE COLLEGE
HSR Layout, Bangalore 560102
www.svrinstitutions.com
Requires
ASST. PROFESSOR in English
9886461664 / 9743018787
Mail: svrfaculty@gmail.com

WANTED TEACHERS Part-time MATHEMATICS, Full-time SOCIAL FOR HIGH SCHOOL Near Coles Park, Frazer Town. 9353111888

Engg/ Production Technical

REQUIRED: JUNIOR & Senior SITE ENGINEERS for Installing & Commissioning of Aluminum Façade Systems and Apartments with Autocad Knowledge and Production Supervisor for the factory. Contact: ALTECH ENTERPRISES, Yeshwanthpur, Bangalore-22. Mob-9611053444.

CIVIL ENGINEERS with 1-5 years experience to work at our Bangalore project. interested send resumes to gvrconst@gmail.com

Wanted

ESTATE MANAGER
Pocket3 VVARWA, Vidhyanagar, 562157.
Salary: 25000.00 pm.
Contact: 9632407579
msb.estatemgr@gmail.com

Teachers/ Professors

EUROKIDS SCHOOL, Laggere, Bengaluru requires Trained TEACHERS for pre-primary. Contact: 9513333186 eurokids.laggere@gmail.com

St. Benedict's Academy Nursing College
Asirvanam, Anchepalya, Kengeri, Mysore Road, Bangalore-74
REQUIRES TRAINED
NURSING TUTORS
B.Sc / M.Sc in Psychiatric & Pediatric
TUTORS
MCA /M.sc /BE CSE.
Min 1 or 2 years of ga teaching experience.
Ct: 9886812398/ 9148326177
Mail your resume to: jeromeosb@gmail.com

WANTED BE / Diploma / ITI in Electrical, Electronics Mechanical to take part time / Full time Diploma Day & Evening classes and M.A, B.A, B.Ed, for English and Social for High school classes. Contact personally with resume, original documents. Nadgir Institute Near Modi Hospital Rajajinagar Bangalore – 560010. Ph: 23387333, 8867065525, 9731721446

HERITAGE PUBLIC SCHOOL, Konanakunte, Bengaluru-62. Requires: KINDERGARTEN COORDINATOR immediately, Attractive Salary. Call: 080- 26322111, 9901733776.

Marketing & Sales

WANTED FOR SALES & MARKETING Experience 2-3`Years. Precision Bright Steel Industry. Address: Janatha Colony Renuka`Home app, 1st.Floor, Bommasandra, Bangalore. 6379647337, 9448225483.

THOD MARKETING, a leading company in textile industry based in Mauritius, is looking for a skilled Digital Marketing Officer to join our team remotely. Interested candidates should send their resume and a cover letter to thodmk@intnet.mu

BUSINESS

Business to Business

Business

WANTED BUSINESS PARTNER HOTEL BUSINESS CONTACT: 8892501007/ 9606701007

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

Shares

WE ARE providing PMS Service with good returns in Short Term Equity for HNI Investors, Whatsapp 9003489155

Business Offers

Distributors

DISTRIBUTORS WANTED for a Furniture Manufacturing Industry. for all over KARNATAKA. Please WhatsApp: 9019585095.

Finance

WEARE DOING Education/ Purchase/ Mortgage and Home loan, From financial Institutions, Contact Mrs. Jyothi 8971132289/ 9380509779.

General

REQUIRED TRADING FIRMS FOR TAKE OVERS. Interested Genuine Person Kindly Contact: WhatsApp 9019585095

SOCIAL SERVICES

Others

GUARANTEED LIFETIME Income Plan. Secure Your Future With Guaranteed Lifetime Regular Income Plan. Pay Premium for just 15 years and enjoy a guaranteed lifetime of regular income starting from 16th year with many benefits. Shrinivas: 9980814884

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಯೋಜನೆಗೆ ಸುಮಾರು ₹12 ಸಾವಿರ ಕೋಟಿ ವೆಚ್ಚ ● ಸಂಚಾರ ದಟ್ಟಣೆ ನಿಯಂತ್ರಿಸಲು ಕ್ರಮ – ಡಿ.ಕೆ.ಶಿವಕುಮಾರ್

‘100 ಕಿ.ಮೀ.ಸಿಗ್ನಲ್ ಮುಕ್ತ ಕಾರಿಡಾರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಚಾರದಟ್ಟಣೆ ನಿಯಂತ್ರಿಸಲು ನಗರದ 18 ಕಡೆ ಒಟ್ಟು 100 ಕಿಲೋ ಮೀಟರ್ ಉದ್ದದ ಸಿಗ್ನಲ್ ಮುಕ್ತ ಕಾರಿಡಾರ್ (ಮೇಲ್ಸೇತುವೆ) ನಿರ್ಮಿಸಲು ಉದ್ದೇಶಿಸಲಾಗಿದೆ’ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೆಂಗಳೂರು ನಗರದ ಶಾಸಕರ ಜೊತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, ‘ಈ ಯೋಜನೆಗೆ ಸುಮಾರು ₹12 ಸಾವಿರ ಕೋಟಿ ವೆಚ್ಚವಾಗ ಬಹುದು. ಸಂಚಾರದಟ್ಟಣೆ ಸಾಂದ್ರತೆಯ ಆಧಾರದಲ್ಲಿ ಬಿಬಿಎಂಪಿ ಈ ಸ್ಥಳಗಳನ್ನು ಗುರುತಿಸಿದೆ. ಟೆಂಡರ್ ಕರೆಯಲು ಸಿದ್ಧತೆ ಮಾಡಲಾಗುತ್ತಿದೆ’ ಎಂದು ವಿವರಿಸಿದರು.

‘ರಾಗಿಗುಡ್ಡದ ಬಳಿ ಈಗಾಗಲೇ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಿಸಿದ್ದು, ಅಲ್ಲಿ ಒಂದು ಭಾಗದ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಕೆಲವೆಡೆ ಕೆಳಸೇತುವೆ ನಿರ್ಮಿಸಲು ಸಚಿವರಾದ ರಾಮಲಿಂಗಾರೆಡ್ಡಿ ಸೇರಿದಂತೆ ಕೆಲವು ಶಾಸಕರು ಸಲಹೆ ನೀಡಿದ್ದಾರೆ. ಆ ಬಗ್ಗೆ ಪ್ರಸ್ತಾವ ನೀಡುವಂತೆ ಸೂಚಿಸಿದ್ದೇನೆ’ ಎಂದರು.

ನೈಸ್ ರಸ್ತೆ ಬಳಿ ಸ್ಕೈಡೆಕ್: ‘ನೈಸ್ ರಸ್ತೆಯ ಬಳಿ 250 ಮೀಟರ್ ಎತ್ತರದ ಸ್ಕೈಡೆಕ್ ನಿರ್ಮಿಸಲು ನಿರ್ಧರಿಸಿದ್ದು, ಸರ್ಕಾರಿ–ಖಾಸಗಿ ಸಹಭಾಗಿತ್ವ (ಪಿಪಿಪಿ) ಬದಲು ಸರ್ಕಾರದ ವೆಚ್ಚದಲ್ಲಿಯೇ ಯೋಜನೆ ಅನುಷ್ಠಾನಗೊಳಿಸಲಾಗುವುದು. ಇದಕ್ಕೆ ₹ 500 ಕೋಟಿ ವೆಚ್ಚ ಅಂದಾಜಿಸಿದೆ. ಎಲ್ಲ ಶಾಸಕರು ಒಪ್ಪಿಗೆ ಸೂಚಿಸಿದ್ದು, ಸಂಪುಟ ಸಭೆಗೆ ಪ್ರಸ್ತಾವವನ್ನು ಮಂಡಿಸಲಾಗುವುದು’ ಎಂದರು.

‘ಸ್ಕೈಡೆಕ್‌ಗೆ 25 ಎಕರೆ ಜಾಗ ಅಗತ್ಯವಿದೆ. ವಾಯುಸೇನೆ, ವಿಮಾನಯಾನ ಸಚಿವಾಲಯದವರು ಅವರ 20 ಕಿ.ಮೀ ವ್ಯಾಪ್ತಿಯಲ್ಲಿ ಈ ಯೋಜನೆಗೆ ಅವಕಾಶವಿಲ್ಲ ಎಂದಿದ್ದಾರೆ. ನೈಸ್ ಸಂಸ್ಥೆಯ ಬಳಿ ಜಾಗವಿದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಸರ್ಕಾರಕ್ಕೆ ನೈಸ್ ಸಂಸ್ಥೆಯು 200 ಎಕರೆ ಭೂಮಿ ವಾಪಸ್ ನೀಡಬೇಕಿದೆ. ನೈಸ್ ಸಂಸ್ಥೆ ಜೊತೆ ಚರ್ಚೆ ಮಾಡುತ್ತೇವೆ’ ಎಂದು ತಿಳಿಸಿದರು.



ಬೆಂಗಳೂರು ನಗರ ವ್ಯಾಪ್ತಿಯ ಶಾಸಕರ ಜೊತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ ಸಭೆ ನಡೆಸಿದರು

ವಿಶೇಷ ಅನುದಾನಕ್ಕೆ ಬೇಡಿಕೆ

‘ಶಾಸಕರು ವಿಶೇಷ ಅನುದಾನ ನೀಡುವಂತೆ ಕೇಳಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಮತ್ತು ಸಚಿವರ ಜತೆ ಚರ್ಚಿಸಿ, ಎಷ್ಟು ಅನುದಾನ ನೀಡಲು ಸಾಧ್ಯವೊ ಅದನ್ನು ನೀಡುತ್ತೇವೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ನಗರದ ಸಮಸ್ಯೆಗಳಿಗೆ ಪರಿಹಾರ ನೀಡಲು ಬಿಚ್ಚು ಮನಸ್ಸಿನಿಂದ ಎಲ್ಲ ಶಾಸಕರು ಸಲಹೆಗಳನ್ನು ನೀಡಿದ್ದಾರೆ. ‘ಬ್ರ್ಯಾಂಡ್ ಬೆಂಗಳೂರು’ ವಿಚಾರವಾಗಿಯೂ ಚರ್ಚೆ ಮಾಡಿದ್ದೇವೆ. ಇನ್ನು ‘ಗ್ರೇಟರ್ ಬೆಂಗಳೂರು ಆಡಳಿತ’ ಮಸೂದೆ ವಿಚಾರವಾಗಿ ಸದನ ಸಮಿತಿ ರಚನೆಗೆ ನಿರ್ಧರಿಸಿದ್ದೇವೆ. ವಿರೋಧ ಪಕ್ಷದ ನಾಯಕರು ಸಮಿತಿಗೆ ಅವರ ಪಕ್ಷದ ಶಾಸಕರ ಹೆಸರು ನೀಡಿದ ತಕ್ಷಣ ಈ ಸಮಿತಿಯನ್ನು ರಚಿಸಲಾಗುವುದು’ ಎಂದರು.

‘ಕೆಂಗೇರಿಯಿಂದ ಎಲೆಕ್ಟ್ರಾನಿಕ್ ಸಿಟಿವರೆಗೂ ಮೆಟ್ರೊ ಸಂಪರ್ಕ ಮಾಡಬೇಕಿದೆ. ಇದರಿಂದ ಆರ್ಥಿಕವಾಗಿ ಹೊರೆ ಆಗಲಿದೆ. ಈ ಭಾಗ ಅಭಿವೃದ್ಧಿ ಆಗದೇ ಇರುವ ಕಾರಣ ಭೂಸ್ವಾಧೀನಕ್ಕೆ ಕಡಿಮೆ ವೆಚ್ಚವಾಗಲಿದೆ ಎಂಬ ಸಲಹೆಯನ್ನು ಕೆಲವರು ನೀಡಿದ್ದಾರೆ. ಆರ್ಥಿಕವಾಗಿ ನಮಗೆ ಎಲ್ಲಿ ಅನುಕೂಲ ಆಗುತ್ತದೆಯೊ ಅಲ್ಲಿ ಭೂಸ್ವಾಧೀನಕ್ಕೆ ಪರಿಶೀಲಿಸಲಾಗುವುದು’ ಎಂದರು.

ಆಗಸ್ಟ್ 20ರ ವೇಳೆಗೆ ಚಾಲನೆ: ‘110 ಹಳ್ಳಿಗಳಿಗೆ ಕಾವೇರಿ 5ನೇ ಹಂತದ ನೀರು ಪೂರೈಕೆ ಯೋಜನೆಗೆ ಆಗಸ್ಟ್ 20ರ ವೇಳೆಗೆ ಚಾಲನೆ ನೀಡಲಾಗುವುದು’ ಎಂದೂ ಅವರು ತಿಳಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಚಿವರಾದ ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂರಾವ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಶಾಸಕರಾದ ಸಿ.ಎನ್. ಅಶ್ವತ್ಥ-ನಾರಾಯಣ, ಕೆ. ಗೋಪಾಲಯ್ಯ, ಎಸ್.ಟಿ. ಸೋಮಶೇಖರ್, ಎಂ. ಕೃಷ್ಣಪ್ಪ, ಎಸ್.ಆರ್. ವಿಶ್ವನಾಥ್, ಎಲ್.ಎ. ರವಿ ಸುಬ್ರಹ್ಮಣ್ಯ, ಮುನಿರಾಜು, ಮುನಿರತ್ನ, ಸಿ.ಕೆ. ರಾಮಮೂರ್ತಿ, ಮಂಜುಳಾ ಲಿಂಬಾವಳಿ, ಎ.ಸಿ. ಶ್ರೀನಿವಾಸ್, ಸತೀಶ್ ರೆಡ್ಡಿ, ಆನೇಕಲ್ ಶಿವಣ್ಣ, ಬೈರತಿ ಬಸವರಾಜ್, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಟಿ.ಎ. ಶರವಣ, ಸುಧಾಮ ದಾಸ್ ಸಭೆಯಲ್ಲಿ ಭಾಗಿಯಾಗಿದ್ದರು.

ಎಸ್ಟೀಮ್ ಮಾಲ್–ಸಿಲ್ಕ್ ಬೋರ್ಡ್‌ವರೆಗೆ ಸುರಂಗ ಮಾರ್ಗ

‘ಸುರಂಗ ರಸ್ತೆ ನಿರ್ಮಾಣ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ. ಎಸ್ಟೀಮ್ ಮಾಲ್‌ನಿಂದ ಸಿಲ್ಕ್ ಬೋರ್ಡ್‌ವರೆಗೆ 18.5 ಕಿ.ಮೀ ಉದ್ದದ ಸುರಂಗ ರಸ್ತೆ ನಿರ್ಮಿಸಲು ಸಂಪುಟ ಸಭೆಯಲ್ಲಿ ಚರ್ಚಿಸಿ, ಟೆಂಡರ್ ಕರೆಯುತ್ತೇವೆ. ಈ ರಸ್ತೆ ನಿರ್ಮಾಣಕ್ಕಾಗಿ ಕೆಲವೆಡೆ ಜಾಗ ವಶಕ್ಕೆ ಪಡೆಯಬೇಕಾಗುತ್ತದೆ. ಇದನ್ನು ಶಾಸಕರ ಜೊತೆ ಚರ್ಚಿಸಿದ್ದು, ಯೋಜನೆಗೆ ಒಪ್ಪಿಗೆ ಸೂಚಿಸಿದ್ದಾರೆ’ ಎಂದು ಶಿವಕುಮಾರ್ ಹೇಳಿದರು.

‘ಮುಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲ ಮೆಟ್ರೊ ಮಾರ್ಗಗಳನ್ನು ಡಬಲ್ ಡೆಕ್ಕರ್ ಮೇಲ್ಸೇತುವೆ ಮಾದರಿಯಲ್ಲಿ ನಿರ್ಮಿಸಲಾಗುವುದು. ಬಿಬಿಎಂಪಿ ಮತ್ತು ಮೆಟ್ರೊ ಇದರ ವೆಚ್ಚ ಭರಿಸಲಿವೆ’ ಎಂದರು.

‘ಕಸ ವಿಲೇವಾರಿಗೆ ನಾಲ್ಕು ಕಡೆ ಜಾಗ’

‘ಕಸ ವಿಲೇವಾರಿಗೆ ನಗರದ 20 ಕಿ.ಮೀ ದೂರ ವ್ಯಾಪ್ತಿಯಲ್ಲಿ ನಾಲ್ಕು ಕಡೆ ಜಾಗ ಗುರುತಿಸಲಾಗುವುದು. ಸರ್ಕಾರಿ ಜಾಗ ಲಭ್ಯವಾದರೆ ಬಳಸಲಾಗುವುದು. ಸಿಗದಿದ್ದರೆ ಖಾಸಗಿ ಜಾಗ ಖರೀದಿಸಲಾಗುವುದು. ಕೇಂದ್ರ ಪರಿಸರ ಇಲಾಖೆ ನಿಯಮಾನುಸಾರ ಇದನ್ನು ಮಾಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ರಸ್ತೆಯಲ್ಲಿ ನಿಲ್ಲಿಸಿರುವ ಹಳೇ ವಾಹನಗಳನ್ನು ತೆಗೆದು ಯಾರ್ಡ್‌ಗಳಿಗೆ ಹಾಕಿ ಹರಾಜು ಮಾಡಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.



ಹೊಳೆನರಸೀಪುರದ ನೆರೆ ಪೀಡಿತ ಪ್ರದೇಶಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

‘ನೆರೆ: ₹777 ಕೋಟಿ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ‘ರಾಜ್ಯದಲ್ಲಿ ನೆರೆ ಪರಿಹಾರ ಹಾಗೂ ಇತರೆ ಕಾರ್ಯಕ್ರಮಗಳಿಗೆ ಒಟ್ಟು ₹777 ಕೋಟಿ ಬಿಡುಗಡೆ ಮಾಡಲಾಗಿದೆ. ಹಾಸನ ಜಿಲ್ಲೆಗೆ ₹23 ಕೋಟಿ ನೀಡಲಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ತಿಳಿಸಿದರು.

ಪಟ್ಟಣದಲ್ಲಿ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ನೆರೆ ಹಾವಳಿಗೆ ತುತ್ತಾದವರಿಗೆ ತಕ್ಷಣ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ’ ಎಂದರು.

‘ಮನೆಗೆ ಭಾಗಶಃ ಹಾನಿಯಾದರೆ ₹50 ಸಾವಿರ ಕೊಡಲು ಮುಖ್ಯಮಂತ್ರಿಯೊಂದಿಗೆ ಚರ್ಚಿಸಲಾಗಿದೆ. ಪೂರ್ಣ ಹಾನಿಯಾದರೆ ₹1.25 ಲಕ್ಷ ಪರಿಹಾರದ ಜೊತೆ ಹೊಸ ಮನೆ ನೀಡುತ್ತೇವೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ’ ಎಂದು ಹೇಳಿದರು.

‘ರಾಜ್ಯದಲ್ಲಿ ವಾಡಿಕೆ ಪ್ರಕಾರ 41.9 ಸೆಂ.ಮೀ. ಮಳೆಯಾಗಬೇಕಿತ್ತು. ಈಗಾಗಲೇ 54 ಸೆಂ.ಮೀ.ಗಿಂತ ಹೆಚ್ಚು ಮಳೆಯಾಗಿದೆ. 600 ಮನೆಗಳು ಬಿದ್ದಿವೆ. ಸಾವುಗಳು ಸಂಭವಿಸಿವೆ. 114 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಕಾಲಕಾಲಕ್ಕೆ ಪರಿಹಾರ ನೀಡಲಾಗುತ್ತಿದೆ’ ಎಂದರು.

‘ದೊಡ್ಡ ಯಜಮಾನರು, ಚಿಕ್ಕ ಯಜಮಾನರು ನಿನ್ನೆ ಪ್ರಧಾನಿಯನ್ನು ಭೇಟಿ ಮಾಡಿದ್ದಾರೆ. ಭೇಟಿ ವೇಳೆ ಪ್ರಧಾನಿ ಕೈ ಹಿಡಿದು, ಮೇಕೆದಾಟು, ಕಳಸಾ–ಬಂಡೂರಿ ಯೋಜನೆಗೆ ಸಹಿ ಹಾಕಿಸಿದ್ದರೆ ನಾವು ಧನ್ಯವಾದ ಹೇಳಿ ಕೈ ಮುಗಿಯುತ್ತಿದ್ದೆವು’ ಎಂದು ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಟೀಕಿಸಿದರು.

‘ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಿಂದ ಒಬ್ಬೊಬ್ಬ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದಾರೆ. ಮೇಕೆದಾಟು, ಕಳಸಾ– ಬಂಡೂರಿ ಯೋಜನೆಗೆ ಏಕೆ ಅನುಮತಿ ಕೊಡಿಸಲು ಆಗುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಘೋಷಿಸಿರುವ ₹5 ಸಾವಿರ ಕೋಟಿಯನ್ನು ಬಿಡುಗಡೆ ಮಾಡಿಸಿ’ ಎಂದರು.

ಆ.3ರಿಂದ ಬಿಜೆಪಿ–ಜೆಡಿಎಸ್ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಅಕ್ರಮವಾಗಿದೆ ಎಂದು ಆರೋಪಿಸಿರುವ ಬಿಜೆಪಿ–ಜೆಡಿಎಸ್ ನಾಯಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಆ.3ರಿಂದ ಪಾದಯಾತ್ರೆ ನಡೆಸಲು ನಿರ್ಧರಿಸಿದ್ದಾರೆ.

‘ಭ್ರಷ್ಟ ಸಿಎಂ-ಭ್ರಷ್ಟ ಕಾಂಗ್ರೆಸ್ ತೊಲಗಿಸಿ’ ಘೋಷವಾಕ್ಯದ ಅಡಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಆ.10ರಂದು ಮೈಸೂರಿನಲ್ಲಿ ನಡೆಯುವ ಸಮಾರೋಪದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಭಾಗಿಯಾಗಲಿದ್ದಾರೆ.

ಪ್ರತಿಯಾಗಿ ಕಾಂಗ್ರೆಸ್‌ನಿಂದ ಪ್ರತಿಭಟನೆ

ತುಮಕೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿದೆ ಎನ್ನಲಾದ ಹಗರಣ ಖಂಡಿಸಿ ಬಿಜೆಪಿ ಬೆಂಗಳೂರಿನಿಂದ ಮೈಸೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆಗೆ ಪ್ರತಿಯಾಗಿ ಕಾಂಗ್ರೆಸ್ ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆ ನಡೆಸಲು ಮುಂದಾಗಿದೆ.

‘ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ. ಜಿಲ್ಲೆಯಿಂದಲೇ ಪ್ರತಿಭಟನೆ ಆರಂಭವಾಗಲಿದೆ. ಬಿಜೆಪಿಯವರು ವಿನಾಕಾರಣ ಆರೋಪ ಮಾಡುತ್ತಿದ್ದಾರೆ. ಸುಳ್ಳನ್ನು ಸತ್ಯ ಎಂದು ಬಿಂಬಿಸಲು ಹೊರಟಿದ್ದಾರೆ. ನಾವು ಜನರಿಗೆ ಸತ್ಯ ತಿಳಿಸುತ್ತೇವೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಇಲ್ಲಿ ಶನಿವಾರ ಮಾಹಿತಿ ನೀಡಿದರು.

‘ಆರೋಪ ಮಾಡುವವರೂ ಮುಡಾ ಫಲಾನುಭವಿಗಳು. ಬೆಂಗಳೂರಲ್ಲಿದ್ದುಕೊಂಡು ಮೈಸೂರಿನಲ್ಲಿ ವಾಸವಿರುವುದಾಗಿ ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಪಡೆದಿದ್ದಾರೆ. ಆರೋಪ ಮಾಡುವವರು ತಮ್ಮ ನಿವೇಶನ ಮುಡಾಗೆ ಹಸ್ತಾಂತರಿಸಲಿ’ ಎಂದು ಸವಾಲು ಹಾಕಿದರು.

ಯಾತ್ರೆಯ ಪೂರ್ವಸಿದ್ಧತೆಗಾಗಿ ಜುಲೈ 28ರಂದು ಮಧ್ಯಾಹ್ನ 3ಕ್ಕೆ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಎರಡು ಪಕ್ಷಗಳ ಸಮನ್ವಯ ಸಭೆ ಕರೆಯಲಾಗಿದೆ. ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ ಭಾಗವಹಿಸಲಿದ್ದಾರೆ. ಸಭೆಯ ನಂತರ ಹೋರಾಟದ ಅಂತಿಮ ರೂಪ ನೀಡಲಾಗುತ್ತದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಮುಡಾ ಹಗರಣದ ವಿರುದ್ಧ ಪಾದಯಾತ್ರೆ ನಡೆಸುವ ಬಗ್ಗೆ ಅಧಿವೇಶನದಲ್ಲೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಘೋಷಿಸಿದ್ದರು. ಅಧಿವೇಶನದ ಬಳಿಕ ಪಾದಯಾತ್ರೆ ಸಿದ್ಧತೆಗಾಗಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್ ನೇತೃತ್ವದಲ್ಲಿ ಹಲವು ಸುತ್ತಿನ ಸಭೆಗಳನ್ನು ನಡೆಸಲಾಗಿತ್ತು. ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ ತಮ್ಮ ಪಕ್ಷದ ಸಿದ್ಧತಾ ಸಭೆಗಳನ್ನು ನಡೆಸುತ್ತಿದ್ದಾರೆ. 28ರಂದು ಎರಡೂ ಪಕ್ಷಗಳ ಸಭೆಯ ನಂತರ ಪಾದಯಾತ್ರೆಯ ವಿವರಗಳನ್ನು ನಾಯಕರು ಪ್ರಕಟಿಸಲಿದ್ದಾರೆ.


ರಾಷ್ಟ್ರೀಯ ಆರೋಗ್ಯ ಮಿಷನ್ ರಾಜ್ಯಕ್ಕೆ ₹553 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕಕ್ಕೆ 2024–25ನೇ ಸಾಲಿನಲ್ಲಿ ಜೂನ್ 15ರ ವರೆಗೆ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ₹553 ಕೋಟಿ ಹಾಗೂ ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್ ಅಡಿಯಲ್ಲಿ ₹14.38 ಕೋಟಿ ಬಿಡುಗಡೆ ಮಾಡಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಸದಸ್ಯರ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿರುವ ಸಚಿವರು, ‘ರಾಜ್ಯದಲ್ಲಿ 2023ನೇ ಸಾಲಿನಲ್ಲಿ 2260 ಡೆಂಗಿ ಪ್ರಕರಣಗಳು ಪತ್ತೆಯಾಗಿದ್ದರೆ, ಈ ವರ್ಷ ಜೂನ್ ಅಂತ್ಯದ ವರೆಗೆ 5,976 ಪ್ರಕರಣಗಳು ಪತ್ತೆಯಾಗಿವೆ. ಡೆಂಗಿ ನಿಯಂತ್ರಣಕ್ಕೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ’ ಎಂದು ವಿವರ ನೀಡಿದ್ದಾರೆ.

ಕಾಫಿ ತೋಟ, 'ಮಾಫಿಯಾ' ಆಟ



> ಕ್ಲಬ್ ಹೌಸ್, ಹಾಲಿಡೇ ಹೋಮ್ಸ್ ಹಾಗೂ ಲೇಔಟ್‌ಗಳ ಒಳ ಚರಂಡಿ ನೀರು ಝರಿಗಳನ್ನು ಸೇರಿದರೆ ಸ್ಥಳೀಯರಿಗೆ ಕಷ್ಟ. ಹುಲಿ ಕಾರಿಡಾರ್‌ಗೆ ಸಹ ಧಕ್ಕೆ ಉಂಟಾಗಲಿದ್ದು, ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚಾಗಲಿದೆ.
> **ಸ.ಗಿರಿಜಾ ಶಂಕರ್,** ಪರಿಸರವಾದಿ, ಚಿಕ್ಕಮಗಳೂರು

> ಬ್ಯಾಂಕ್‌ಗಳು ಸಹ ಭೂ ಮಾಫಿಯಾ ಜೊತೆ ಶಾಮೀಲಾಗಿ ತೋಟಗಳನ್ನು ಸ್ವಾಧೀನಪಡಿಸಿ ಅವರ ಕೈಗೊಪ್ಪಿಸುತ್ತಿವೆ. ಕಾಫಿ ಕಂಪನಿಗಳ ಹೆಸರಿನಲ್ಲಿ ಚಿಕ್ಕಾಸಿಗೆ ತೋಟ ಖರೀದಿಸುವವರು ಹತ್ತಿಪ್ಪತ್ತು ಪಟ್ಟು ಹೆಚ್ಚು ಹಣಕ್ಕೆ ತೋಟ ಮಾರಾಟ ಮಾಡುತ್ತಾರೆ. ಬೆಂಗಳೂರಿನ ಬಿಲ್ಡರ್‌ಗಳು ಸಹ ಈ ವಹಿವಾಟಿನಲ್ಲಿ ಸಕ್ರಿಯರಾಗಿದ್ದಾರೆ.
> **ಬಿ.ಎ. ಜಗನ್ನಾಥ್,** ಕಾಫಿ ಬೆಳೆಗಾರ, ಬಾಳ್ಳುಪೇಟೆ

> 'ಹಾಕಿದ ಬಂಡವಾಳ ಗಿಟ್ಟುವುದು ಕಷ್ಟ ಎಂಬ ಕಾರಣಕ್ಕೆ ಈಗಿನ ತಲೆಮಾರು ಕಾಫಿ ತೋಟದಲ್ಲಿ ಆಸಕ್ತಿ ವಹಿಸುತ್ತಿಲ್ಲ. ತೋಟ ಮಾರಿ ನಗರಕ್ಕೆ ಹೋಗಲಾಗದ, ಮಕ್ಕಳನ್ನು ಬೇರೆ ಊರಿಗೆ ಕಳುಹಿಸುವ ಶಕ್ತಿಯೂ ಇಲ್ಲದ ಸಣ್ಣ ಬೆಳೆಗಾರರು ಈಗ ನಿಜವಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ'
> **ವೇದಮೂರ್ತಿ ದಬ್ಬೆಗದ್ದೆ,** ಸಕಲೇಶಪುರ

ಒಂದನೇ ಪುಟದಿಂದ..

'ಕಾಫಿಗೆ ಸಮಸ್ಯೆ ಏನು' ಎಂದು ಕೇಳಿದರೆ, 'ಗಿಡಗಳಿಗೆ ಬೋರರ್ ಕಾಟ, ಕಾರ್ಮಿಕರ ಸಮಸ್ಯೆ, ಬೆಲೆ ಏರಿಳಿತ, ಕಾಡು ಪ್ರಾಣಿಗಳು, ಹವಾಮಾನ ಏರುಪೇರು... ಹೀಗೆ ಉದ್ದನೆಯ ಪಟ್ಟಿಯನ್ನೇ ಬೆಳೆಗಾರರು ನೀಡಬಹುದು. ಆದರೆ, ಈಚಿನ ಒಂದುವರೆ ದಶಕದಲ್ಲಿ ಕಾಫಿ ತೋಟಗಳೇ ನಾಶವಾಗುವ ಭೀತಿ ಎದುರಾಗಿದೆ. ಕಾಫಿ ತೋಟ ಮತ್ತು ಆದಾಯದ ಬಗ್ಗೆ ವಿಚಿತ್ರ 'ಫ್ಯಾಂಟಸಿ', ಭೂಮಾಫಿಯಾಗಳ ಕಾಟ, ಕಾಫಿ ನಾಡಿಗೆ ರಿಯಲ್ ಎಸ್ಟೇಟ್ ಹಿನ್ನೆಲೆಯ ರಾಜಕಾರಣಿಗಳ ಪ್ರವೇಶ... ಇವೆಲ್ಲವೂ ಹೊಸ ಮತ್ತು ಪರಿಹಾರವೇ ಇಲ್ಲದ ಸಮಸ್ಯೆ ಸೃಷ್ಟಿಸಿವೆ' ಎನ್ನುತ್ತಾರೆ ಜಗನ್ನಾಥ್.

'ಹಿಂದೆ ಬೆಳೆಗಾರರೇ ಸೇರಿ, ಕೈಯಿಂದ ಹಣ ಖರ್ಚು ಮಾಡಿ ಬೆಳೆಗಾರರ ಅಭಿವೃದ್ಧಿಗಾಗಿ ಕೆಲವು ಸಂಸ್ಥೆಗಳನ್ನು ಕಟ್ಟಿದರು. ಹಲವು ವರ್ಷಗಳವರೆಗೆ ಅವು ಚೆನ್ನಾಗಿ ನಡೆದವು. ಅವುಗಳು ಶ್ರೀಮಂತವಾಗುತ್ತಿದ್ದಂತೆ ಪಟ್ಟ ಭದ್ರ ಪ್ರತಿನಿಧಿಗಳು ಬಂದು ಆಯಕಟ್ಟಿನ ಜಾಗದಲ್ಲಿ ಕುಳಿತರು' ಎಂದು ಜಗನ್ನಾಥ್ ಬೇಸರಿಸಿದರು.



ಬಿ.ಎ.ಜಗನ್ನಾಥ್

ಕೆಲವು ವರ್ಷಗಳ ಹಿಂದೆ ತೋಟಕ್ಕೆ ಒಳ್ಳೆಯ ಬೆಲೆ ಸಿಕ್ಕಿತೆಂಬ ಖುಷಿಯಲ್ಲಿ, ಬಾಳ್ಳುಪೇಟೆಯ ಹತ್ತು ಬೆಳೆಗಾರರು ತಮ್ಮ ತೋಟಗಳನ್ನು ರಿಯಲ್‌ಎಸ್ಟೇಟ್ ಉದ್ಯಮಿಯೊಬ್ಬರಿಗೆ ಮಾರಿ, ಪಟ್ಟಣಕ್ಕೆ ಹೋಗಿ ಬೇರೆಬೇರೆ ವ್ಯವಹಾರ ಆರಂಭಿಸಿದ್ದರು. ಆದರೆ ಯಾವುದೂ ಕೈಹತ್ತಲಿಲ್ಲ. ಈಗ ಅವರು ಕೇಟರಿಂಗ್ ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ ಕಷ್ಟದಲ್ಲಿ ಜೀವನ ಸಾಗಿಸುತ್ತಿರುವುದು ನಮ್ಮ ಕಣ್ಣುಮುಂದಿದೆ. 'ಇವರಿಂದ ತೋಟ ಖರೀದಿಸಿದ್ದ ವ್ಯಕ್ತಿ, ಅಲ್ಲಿ 120ಕ್ಕೂ ಹೆಚ್ಚು ನಿವೇಶನಗಳನ್ನು ಮಾಡಿ, ಕೋಟ್ಯಂತರ ರೂಪಾಯಿ ಗಳಿಸಿದ್ದಾರೆ. ಭೂಮಾಫಿಯಾ ಯಾವ ಮಟ್ಟದಲ್ಲಿದೆ ಎಂಬುದಕ್ಕೆ ಜಗನ್ನಾಥ್ ಅವರು ಈ ಉದಾಹರಣೆ ಮುಂದಿಟ್ಟರು.

'ಎರಡು ದಶಕಗಳ ಹಿಂದೆಯೇ ಈ ಬೆಳವಣಿಗೆ ಆರಂಭವಾಗಿದೆ. ಇದರ ಬೇರು ಎಷ್ಟು ಆಳಕ್ಕೆ ಇಳಿದಿದೆ ಎಂದರೆ, ಇನ್ನು ಹತ್ತು ಹದಿನೈದು ವರ್ಷಗಳಲ್ಲಿ ಈಗಿರುವ ಕಾಫಿ ತೋಟಗಳಲ್ಲಿ ಶೇ 15ರಿಂದ 20ರಷ್ಟು ಮಾತ್ರ ಉಳಿದು, ಮಿಕ್ಕವು ಸೈಟ್‌ಗಳಾಗಿ, ಹೋಮ್ ಸ್ಟೇ ಅಥವಾ ರೆಸಾರ್ಟ್‌ಗಳಾಗಿ ಬದಲಾಗಲಿವೆ' ಎಂದು ಜಗನ್ನಾಥ್ ಅವರ ಧಾಟಿಯಲ್ಲೇ ಮಾತನಾಡುತ್ತಾರೆ ಸಕಲೇಶಪುರದ ಬೆಳೆಗಾರ ವೇದಮೂರ್ತಿ ದಬ್ಬೆಗದ್ದೆ.

'ಕಾಫಿ ನಾಡಿಗೆ ಮೂರು ರೀತಿಯ ಖರೀದಿದಾರರು ಬರುತ್ತಿದ್ದಾರೆ. ಮೊದಲನೆಯವರು ರಿಯಲ್ ಎಸ್ಟೇಟ್ ಉದ್ಯಮಿಗಳು. ಎರಡನೆಯವರು ಸರ್ಕಾರಿ ನೌಕರರು ಹಾಗೂ ಇನ್ನೊಂದು ವರ್ಗದವರೆಂದರೆ ಸಣ್ಣ ಹೂಡಿಕೆದಾರರು. ರಿಯಲ್ ಎಸ್ಟೇಟ್ ಉದ್ಯಮಿಗಳ ಗುರಿ ಸ್ಪಷ್ಟ. ಹಣ ಸಂಪಾದನೆಗಾಗಿ ಭೂಮಿಯನ್ನು ಬಳಸುವ ಅವರಲ್ಲಿ, ಸರ್ಕಾರಿ ಉದ್ಯೋಗಿಗಳಿಗೆ ಕಾಫಿ ತೋಟಗಳು ಕಪ್ಪು ಹಣವನ್ನು ಬಿಳಿಯಾಗಿಸುವ ಸರಳ ಮಾರ್ಗವಾಗಿವೆ. ನನ್ನ ಪರಿಚಯದ ಅಧಿಕಾರಿಯೊಬ್ಬರು ಜಿಲ್ಲೆಯಲ್ಲಿ ಕೆಲವು ಎಕರೆ ತೋಟ ಖರೀದಿಸಿದ್ದು, ವರ್ಷಕ್ಕೆ ಎಕರೆಯೊಂದರಿಂದ ₹16.70 ಲಕ್ಷ ಆದಾಯ ತೋರಿಸುತ್ತಿದ್ದಾರೆ. ಒಳ್ಳೆಯ ಬೆಳೆಗಾರನಿಗೂ ಎಕರೆಯಲ್ಲಿ ₹10 ಲಕ್ಷ ದುಡಿಯಲು ಸಾಧ್ಯವಾಗದು. ಇಂಥವರು ಬೇರೆಬೇರೆ ಮೂಲಗಳಿಂದ ಸಂಪಾದಿಸಿದ ಹಣವನ್ನು ಕೃಷಿ ಆದಾಯವಾಗಿ ತೋರಿಸುತ್ತಾರೆ. ಮೂರನೇ ವರ್ಗದವರು ಸಣ್ಣ ಹೂಡಿಕೆದಾರರು. ಇವರು ಮಧ್ಯವರ್ತಿಗಳು ಸೃಷ್ಟಿಸುವ ಫ್ಯಾಂಟಸಿಗೆ ಒಳಗಾಗಿ ತೋಟ ಖರೀದಿಸುತ್ತಿದ್ದಾರೆ' ಎಂದು ವೇದಮೂರ್ತಿ ಹೇಳುತ್ತಾರೆ.

ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಯ ಹಲವೆಡೆ ದೊಡ್ಡ ದೊಡ್ಡ ರಿಯಲ್‌ಎಸ್ಟೇಟ್ ಕುಳಗಳು ಸಾವಿರಾರು ಎಕರೆ ಕಾಫಿ ತೋಟಗಳನ್ನು ಖರೀದಿಸಿ, ಸಣ್ಣಸಣ್ಣ ಸೈಟ್‌ಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡುತ್ತಿವೆ. ಇಂಥ ನಿವೇಶನಗಳ ಖರೀದಿದಾರರು ಹೂಡಿಕೆ ಅಥವಾ ಇನ್ನಾವುದೋ ಉದ್ದೇಶದಿಂದ ಖರೀದಿಸುತ್ತಾರೆಯೇ ವಿನಾ, ಕೃಷಿ ಮಾಡುವ ಅಥವಾ ತೋಟ ಉಳಿಸುವ ಉದ್ದೇಶದಿಂದ ಅಲ್ಲ.

ತೋಟಗಳನ್ನು ರಿಯಲ್‌ಎಸ್ಟೇಟ್ ಕುಳಗಳ ಕೈಗೊಪ್ಪಿಸುವ ಸಲುವಾಗಿ ಎಲ್ಲಾ ಊರುಗಳಲ್ಲಿ ಮಾಫಿಯಾ ಹುಟ್ಟಿಕೊಂಡಿವೆ. ಭೂಗತ ಚಟುವಟಿಕೆಯಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬ ಸಕಲೇಶಪುರದಲ್ಲಿ ಹಿಂದೆ ನೂರಾರು ಎಕರೆ ತೋಟ ಖರೀದಿಸಿದ್ದ. ಅದು ಕೆಲವು ವರ್ಷಗಳ ಹಿಂದೆ ರಿಯಲ್ ಎಸ್ಟೇಟ್ ಉದ್ಯಮಿಗೆ ಮಾರಾಟವಾಯಿತು. ಈಗ ಅದರಲ್ಲಿ ಅರ್ಧ ಭಾಗ ನಿವೇಶನವಾಗಿದೆ. ಉಳಿದ ಜಾಗದಲ್ಲಿ ಸ್ಟಾರ್ ಹೋಟೆಲ್, ರೆಸಾರ್ಟ್ ನಿರ್ಮಾಣವಾಗುತ್ತಿದೆ ಎಂದು ಹೆಸರು ಹೇಳಲು ಇಷ್ಟಪಡದ ಸಕಲೇಶಪುರದ ಬೆಳೆಗಾರರೊಬ್ಬರು ಮಾಹಿತಿ ನೀಡಿದರು.

ತಲೆತಲಾಂತರದಿಂದ ಬಂದಿರುವ ಕೆಲವು ತೋಟಗಳ ಭೂ ದಾಖಲೆಗಳು ಸರಿ ಇಲ್ಲ. ದಾಖಲೆಗಳನ್ನು ಸರಿಮಾಡಿಸಲು, ಪೋಡಿ ಮಾಡಲು ಅಥವಾ ಸರ್ವೆ ಮಾಡಿಸಲು ಯಾರಾದರೂ ತಹಶೀಲ್ದಾರ್ ಕಚೇರಿಗೆ ಹೋದರೆ, ಅಲ್ಲಿರುವ ಏಜೆಂಟರು ಅದರ ಮಾಹಿತಿಯನ್ನು 'ಸಂಬಂಧಪಟ್ಟರಿಗೆ' ತಲುಪಿಸುತ್ತಾರೆ. ದಾಖಲೆ ಸರಿ ಇಲ್ಲ ಎಂಬುದನ್ನೇ ಕಾರಣವಾಗಿಟ್ಟು ಶೋಷಣೆ, ಬೆದರಿಕೆ ಆರಂಭವಾಗುತ್ತವೆ. ಇಂಥ ವಿವಾದಗಳು ತೋಟ ಮಾರಾಟ ಆಗುವ ಮೂಲಕ ಕೊನೆಗೊಳ್ಳುತ್ತವೆ. ದಾಖಲೆಗಳನ್ನು ಸರಿಮಾಡಿಸಲು ಹೋಗಿ ತೋಟಗಳನ್ನು ಕಳೆದುಕೊಂಡು, ಮಾಲೀಕರು ಬೀದಿಗೆ ಬಿದ್ದಿರುವ ಉದಾಹರಣೆಗಳು ಸಾಕಷ್ಟಿವೆ ಎನ್ನುವರು. ಕಾಫಿ ತೋಟ ಕೋಟಿಗಳಲ್ಲಿ ಮಾರಾಟ ಆಗಿರುವ ಸುದ್ದಿ ಆಗಾಗ ಕೇಳಿಬರುತ್ತದೆ. ಆದರೆ ವಾಸ್ತವ ಬೇರೆಯೇ ಇರುತ್ತದೆ ಎನ್ನುತ್ತಾರೆ ಸಕಲೇಶಪುರದ ಬೆಳೆಗಾರರು. 'ಕೋಟಿಗಳಲ್ಲಿ ಮಾತುಕತೆ ನಡೆಯುವುದು ನಿಜ. ಆದರೆ ಅನಂತರ ನಡೆಯುವುದೇ ಬೇರೆ. ಮಾಲೀಕರು ಕೊಟ್ಟ ತೋಟಕ್ಕೆ, ಹಣದ ಬದಲು ಮಾಫಿಯಾದವರು ಬೇರೆಲ್ಲೋ ಒಂದಿಷ್ಟು ಜಾಗ, ಕೊಂಚ 'ಕಪ್ಪುಹಣ' ಮತ್ತೊಂದಿಷ್ಟು 'ಬಿಳಿಹಣ' ಕೊಡುತ್ತಾರೆ. ಆದರೆ ಅಲ್ಲಿ ಇರಲೂ ಆಗದೆ, ಬಿಡಲೂ ಆಗದೆ ಕೊನೆಗೆ ಮೂರುಕಾಸಿನ ಬೆಲೆಗೆ ಇನ್ಯಾರಿಗೋ ಮಾರಾಟ ಮಾಡಿ ಹೋಗಬೇಕಾಗುತ್ತದೆ. ತೋಟದ ಮಾಲೀಕರಿಗೆ ಸಿಕ್ಕುವುದು ಬಿಡಿಗಾಸು. ಆದರೆ, ಖರೀದಿಸಿದ ವ್ಯಕ್ತಿ ಅದನ್ನು ಹಲವು ಕೋಟ್ಯಂತರ ರೂಪಾಯಿಗೆ ಮಾರಾಟ ಮಾಡುತ್ತಾನೆ' ಎಂದು ತೋಟ ಮಾರಿದ ವ್ಯಕ್ತಿಯೊಬ್ಬರು ಅಳಲು ತೋಡಿಕೊಂಡರು. ರಾಜಕೀಯವಾಗಿ ಬಲಿಷ್ಠರಾಗಿದ್ದರೆ ಮಾತ್ರ ತೋಟಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುತ್ತಾರೆ ಅವರು. 'ಬೆಳೆಗಾರರಿಗೆ ಸರ್ಕಾರದ ರಕ್ಷಣೆ ಯಾಕೆ ಸಿಗುತ್ತಿಲ್ಲ' ಎಂದು ಪ್ರಶ್ನಿಸಿದರೆ, ಕಾಫಿ ಬೆಳೆಗಾರರ ಪರವಾಗಿ ದುಡಿದ ಹಿರಿಯರೊಬ್ಬರು ಒಂದು ನಿದರ್ಶನವನ್ನು ಮುಂದಿಟ್ಟರು...

'ಹಿಂದೆ ಕಾಫಿ ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದಾಗ, ಕೇಂದ್ರ ಸರ್ಕಾರದ ಸಚಿವರೊಬ್ಬರನ್ನು ಆಹ್ವಾನಿಸಿ, ಮೂರೂ ಜಿಲ್ಲೆಗಳಲ್ಲಿ ಅವರ ಪ್ರವಾಸ, ಬೆಳೆಗಾರರೊಂದಿಗೆ ಸಂವಾದ ಏರ್ಪಡಿಸಿದ್ದೆವು. ಸಂಕಷ್ಟವನ್ನು ಅರ್ಥ ಮಾಡಿಕೊಂಡ ಸಚಿವರು, ಸಾಲ ಮನ್ನಾ ಸೇರಿದಂತೆ ಕೆಲವು ನೆರವುಗಳ ಭರವಸೆ ಕೊಟ್ಟು ಹೋಗಿದ್ದರು. ಸ್ವಲ್ಪ ಸಮಯದಲ್ಲಿ ಸರ್ಕಾರ ಬದಲಾಯಿತು. ಹೊಸ ಸಚಿವರು ನಮ್ಮ ಯಾವ ಸಮಸ್ಯೆಯನ್ನೂ ಆಲಿಸಲಿಲ್ಲ. ಅಷ್ಟೇ ಅಲ್ಲ, ಹಿಂದಿನ ಸಚಿವರು ಮಾಡಿದ್ದ ಕೆಲಸಕ್ಕೂ ತಡೆ ಒಡ್ಡಿದರು. ಸಮಸ್ಯೆಯ ಆಳಕ್ಕೆ ಇಳಿದಾಗ ಗೊತ್ತಾಗಿದ್ದು, ಹೊಸ ಸಚಿವರೇ ಕಾಫಿ ತೋಟ ಖರೀದಿಯಲ್ಲಿ ಆಸಕ್ತಿ ಹೊಂದಿದ್ದರು ಎಂಬ ವಿಚಾರ. ಸಾಲ ಮನ್ನಾ ಮಾಡಿದರೆ ಮಾಲೀಕರು ತೋಟ ಮಾರುವುದಿಲ್ಲ. ಸಂಕಷ್ಟಕ್ಕೆ ಒಳಗಾದರೆ ಮಾರಾಟ ಅನಿವಾರ್ಯವಾಗುತ್ತದೆ ಎಂಬುದನ್ನು ಸಚಿವರು ಅರಿತಿದ್ದರು' ಎಂದು ಆರೋಪಿಸಿದರು.

'ಕೆಲವು ಅಧಿಕಾರಿಗಳು ಸಹ ಇಂಥ ವ್ಯವಹಾರಸ್ಥರಿಗೆ ನೆರವಾಗುತ್ತಾರೆ. ಹಿಂದೆ ಕೇಂದ್ರದ ಸಚಿವ ಪೀಯೂಶ್ ಗೋಯಲ್ ಅವರನ್ನು ನಾವು ಭೇಟಿಯಾಗಿ, ಕಾಫಿ ಬೆಳೆಯನ್ನು 'ಸರ್ಫೇಸಿ' (ಬೆಳೆಗಾರರು ಸಾಲ ಮರುಪಾವತಿ ಮಾಡದಿದ್ದರೆ, ಅವರ ಆಸ್ತಿ ಹರಾಜುಹಾಕಲು ಬ್ಯಾಂಕ್‌ಗಳಿಗೆ ಅನುವು ಮಾಡಿಕೊಡುವ 'ಸೆಕ್ಯುರಿಟೈಸೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್) ಕಾಯ್ದೆಯಿಂದ ಹೊರಗಿಡುವಂತೆ ಒತ್ತಾಯಿಸಿದ್ದೆವು. ನಮ್ಮ ವಾದವನ್ನು ಆಲಿಸಿದ ಅವರು, ಹಿರಿಯ ಅಧಿಕಾರಿಯೊಬ್ಬರಿಗೆ ಸಮಸ್ಯೆ ಬಗೆಹರಿಸಲು ಈ ಬಗ್ಗೆ ಸೂಚನೆ ನೀಡಿದ್ದರು. ಆದರೆ, ಆ ಅಧಿಕಾರಿ, ಇಲ್ಲದ ತಕರಾರು, ಕಾನೂನು ತೊಡಕುಗಳನ್ನು ಮುಂದಿಟ್ಟು 'ಅದು ಸಾಧ್ಯವಿಲ್ಲ' ಎಂದು ವಾದಿಸಿದ್ದರು' ಎಂದು ಜಗನ್ನಾಥ್ ನೆನಪಿಸಿಕೊಂಡರು.



ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನ ಪೊನ್ನಂಪೇಟೆ ರಸ್ತೆಯಲ್ಲಿ ಕಾಫಿ ತೋಟಗಳು ಈಗ ನಿವೇಶನಗಳಾಗಿ ಬದಲಾಗಿವೆ

ಮೂರೂ ಜಿಲ್ಲೆಗಳಲ್ಲಿ ಹಲವು ಸಾವಿರ ಎಕರೆ ಕಾಫಿ ತೋಟಗಳು ಕೃಷಿ ಸರಿಯಾಗಿ ಗೊತ್ತಿರದ ಅನ್ಯ ರಾಜ್ಯದವರ ಪಾಲಾಗಿವೆ. ಅವರು ತೋಟಗಳನ್ನು ನೋಡುತ್ತಿಲ್ಲ. ನಿಧಾನಕ್ಕೆ ಕಾಡುಪ್ರಾಣಿಗಳು ತೋಟಗಳನ್ನು ತಮ್ಮ ಆವಾಸವಾಗಿಸುತ್ತವೆ. ಆರೈಕೆ ಇಲ್ಲದಿರುವುದರಿಂದ ಆ ತೋಟಗಳಲ್ಲಿ ರೋಗ ಕಾಣಿಸುತ್ತದೆ. ಅಕ್ಕಪಕ್ಕದ ತೋಟಗಳಿಗೂ ರೋಗ ಹಬ್ಬುತ್ತದೆ, ಕಾಡು ಪ್ರಾಣಿಗಳು ದಾಳಿ ಇಡುತ್ತವೆ. ಹಾಕಿದ ಬಂಡವಾಳವೂ ಬಾರದೆ, ತೋಟಗಳನ್ನು ಮಾರಾಟ ಮಾಡುವುದು ಬೆಳೆಗಾರರಿಗೆ ಅನಿವಾರ್ಯವಾಗುತ್ತಿದೆ. ಜೊತೆಗೆ ಸರ್ಫೇಸಿ ಕಾಯ್ದೆ ಮುಂದಿಟ್ಟುಕೊಂಡು ಬ್ಯಾಂಕ್ ಅಧಿಕಾರಿಗಳು ಬೆಳೆಗಾರರ ಮೇಲೆ ಸವಾರಿ ಮಾಡಲು ಹೊರಟಿದ್ದಾರೆ. ಸಾಲ ಮರುಪಾವತಿಸಲು ಪರದಾಡುತ್ತಿರುವ ಬೆಳೆಗಾರರ ತೋಟಗಳನ್ನು ಹರಾಜು ಮಾಡುತ್ತಿದ್ದಾರೆ. ಈ ಕಾಯ್ದೆಯಿಂದ ಕಾಫಿ ಉದ್ಯಮವನ್ನು ಹೊರಗಿಡಬೇಕು ಎಂದು ಚಿಕ್ಕಮಗಳೂರು ಜಿಲ್ಲೆಯ ಬೆಳೆಗಾರರು ವಾದಿಸುತ್ತಾರೆ.

'ಕೆಲ ಬ್ಯಾಂಕ್ ಅಧಿಕಾರಿಗಳ ಸಹಾಯದಿಂದ ಭೂಮಾಫಿಯಾಗಳು ಬೆದರಿಸಿ ತೋಟ ಖರೀದಿಸಿದರೆ, ರಾಜಕಾರಣಿಗಳು ಮಾರಾಟದ ಅನಿವಾರ್ಯತೆ ಸೃಷ್ಟಿಸಿ ಖರೀದಿಸುತ್ತಿದ್ದಾರೆ' ಎನ್ನುತ್ತಾರೆ ಪರಿಸರಪ್ರೇಮಿಗಳು.



'ನಮ್ಮ ಮಕ್ಕಳಿಗೂ ಈ ಸಂಕಷ್ಟ ಬೇಡ' ಎಂದು ಅನೇಕ ಬೆಳೆಗಾರರು ಮಕ್ಕಳಿಗೆ ಶಿಕ್ಷಣ ಕೊಟ್ಟು ಉದ್ಯೋಗಕ್ಕಾಗಿ ಪೇಟೆಗೆ ಅಟ್ಟಿದ್ದಾರೆ. ಚೆನ್ನಾಗಿ ದುಡಿಯುತ್ತಿರುವ ಕೆಲವರು, ಕೃಷಿ ಮಾಡುತ್ತಿಲ್ಲ, ಆದರೆ ತೋಟವನ್ನು ಮಾರಾಟ ಮಾಡದೆ, 'ನಿವೃತ್ತಿ ನಂತರದ ಜೀವನಕ್ಕೆ ಇರಲಿ' ಎಂದು ಹಾಗೆಯೆ ಬಿಟ್ಟಿದ್ದಾರೆ. ಮಿಕ್ಕವರೂ ಈಗ ಅದೇ ಹಾದಿಯಲ್ಲಿದ್ದಾರೆ.

'ಟೊಳ್ಳಾಗುತ್ತಿದೆ ಕೊಡಗು': 'ಮಾಫಿಯಾ ಕೈಗೆ ಸಿಲುಕಿ ಕೊಡಗು ಜಿಲ್ಲೆಯ ಕಾಫಿತೋಟಗಳಿಗೂ ಗೆದ್ದಲು ಹಿಡಿದಿದೆ. ಕೊಡಗು ಜಿಲ್ಲೆಯ ಈಗಿನ ರಮಣೀಯತೆ ಅವಸಾನಹೊಂದುವ ದಿನಗಳು ದೂರ ಇಲ್ಲ. ಪರಿಸರ ಸಂರಕ್ಷಣೆಗೆ ಸರ್ಕಾರ ಕಠಿಣ ನಿಯಮಗಳನ್ನು ವಿಧಿಸಿದರೂ ರಿಯಲ್ ಎಸ್ಟೇಟ್ ಮಾಫಿಯಾ ರಂಗೋಲಿ ಕೆಳಗೆ ನುಸುಳಿ ಪರಿಸರ, ಜಲಮೂಲ ಹಾಗೂ ವನ್ಯಜೀವಿಗಳನ್ನು ಆಪೋಶನ ತೆಗೆದುಕೊಳ್ಳುತ್ತಿವೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಹೇಳುತ್ತಾರೆ.

ಸಾವಿರಾರು ಎಕರೆ ಕಾಫಿ ತೋಟಗಳನ್ನು ಒಮ್ಮೆಗೆ ಭೂಪರಿವರ್ತನೆ ಮಾಡಿದರೆ ಜನ, ಪರಿಸರವಾದಿಗಳ ಗಮನ ಸೆಳೆಯುತ್ತದೆ ಮತ್ತು ಅಧಿಕ ಶುಲ್ಕ ತೆರಬೇಕಾಗುತ್ತದೆ, ಜಿಲ್ಲಾ ಸಮಿತಿಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾಗುತ್ತದೆ. ಅದಕ್ಕೆ ಬದಲಾಗಿ, ಎಕರೆಗಟ್ಟಲೆ ತೋಟ ಖರೀದಿಸಿ, ತಲಾ 2ರಿಂದ 5 ಎಕರೆಗೆ ವಿಭಾಗ ಮಾಡಿಕೊಳ್ಳಲಾಗುತ್ತದೆ. ಪ್ರತಿ ಸರ್ವೆ ನಂಬರ್‌ನಲ್ಲೂ 20 ಸೆಂಟ್ ಜಾಗದೊಳಗೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಗೆ ಅರ್ಜಿ ಹಾಕಲಾಗುತ್ತದೆ. ಆಗ ನಿರಾಕ್ಷೇಪಣಾ ಪತ್ರದ ಅವಶ್ಯಕತೆ ಇರುವುದಿಲ್ಲ. ಸುಲಭದಲ್ಲಿ, ಕಡಿಮೆ ಖರ್ಚಿನಲ್ಲಿ ಭೂ ಪರಿವರ್ತನೆಯಾಗುತ್ತದೆ. ತೋಟದ ಮನೆ ನಿರ್ಮಿಸಲು ಭೂ ಪರಿವರ್ತನೆ ಅಗತ್ಯ ಇಲ್ಲದಿದ್ದರೂ ವಾಣಿಜ್ಯ ಉದ್ದೇಶಕ್ಕೆ ಬಳಸುವಾಗ ಕಾನೂನಾತ್ಮಕ ಅಡಚಣೆ ಆಗಬಾರದೆಂಬ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ. ಕೆಲ ದಿನಗಳಲ್ಲೇ ಅಲ್ಲಿ ಸುಂದರ ಮನೆ ನಿರ್ಮಾಣವಾಗುತ್ತದೆ. ನೆಪಮಾತ್ರಕ್ಕೆ ಕೆಲವು ಕಾಫಿ ಗಿಡಗಳನ್ನು ಉಳಿಸಿಕೊಂಡು, ಸುತ್ತ ತಮಗೆ ಬೇಕಾದಂತೆ ಉದ್ಯಾನವನ್ನಾಗಿ ಪರಿವರ್ತಿಸಲಾಗುತ್ತದೆ. ದಾಖಲೆಗಳ ಪ್ರಕಾರ ಅದು ಕೃಷಿ ಭೂಮಿ ಮಧ್ಯದಲ್ಲಿರುವ ತೋಟದ ಮನೆ. ರಿಯಲ್ ಎಸ್ಟೇಟ್ ಪ್ರಪಂಚದಲ್ಲಿ ಇದು 'ಎಸ್ಟೇಟ್ ವಿಲ್ಲಾ'.

ಇಂತಹ ವಿಲ್ಲಾಗಳನ್ನು ಖರೀದಿಸುವವರೆಲ್ಲ ಹೊರರಾಜ್ಯಗಳ ಸಿರಿವಂತರು ಮತ್ತು ವಾರಾಂತ್ಯ, ಬೇಸಿಗೆ ರಜೆ ದಿನಗಳನ್ನು ಅಥವಾ ಬಿಡುವಾದಾಗ ಮಾತ್ರ ಇಲ್ಲಿರಲು ಬಯಸುವ ಐಷಾರಾಮಿಗಳು. ವಿಲ್ಲಾಗಳನ್ನು ಮಾರಾಟ ಮಾಡುವ ರಿಯಲ್ ಎಸ್ಟೇಟ್ ಕಂಪನಿಯೇ ಮನೆಯ ಸುತ್ತಲಿನ ತೋಟ ಅಥವಾ ಉದ್ಯಾನವನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಹೊತ್ತುಕೊಳ್ಳುತ್ತದೆ. ಅದಕ್ಕೆ ಶುಲ್ಕ ತೆಗೆದುಕೊಳ್ಳುತ್ತದೆ.

ಹೀಗೆ ತೋಟದ ಮಧ್ಯೆ ಮನೆ ಖರೀದಿಸುವ ಜನರೊಂದಿಗೆ ಕಂಪನಿ ಒಪ್ಪಂದ ಮಾಡಿಕೊಳ್ಳುತ್ತದೆ. ಖರೀದಿಸಿದವರು ತಮಗೆ ಬೇಕಾದಾಗ ಇಲ್ಲಿ ಬಂದು ಉಳಿದುಕೊಳ್ಳಬಹುದು. ಉಳಿಕೆ ದಿನಗಳಲ್ಲಿ ಮನೆಯನ್ನು ಹೋಮ್ ಸ್ಟೇಯಾಗಿ ಪರಿವರ್ತಿಸಲಾಗುತ್ತದೆ. ಅದರಿಂದ ಬರುವ ಆದಾಯ ಕಂಪನಿ ಮತ್ತು ತೋಟದ ಮಾಲೀಕರಿಗೆ ಹಂಚಿಕೆಯಾಗುತ್ತದೆ. ಇವ್ಯಾವುವೂ ಕದ್ದು ಮುಚ್ಚಿ ನಡೆಯುತ್ತಿಲ್ಲ. ಕೆಲವು ಸಂಸ್ಥೆಗಳು ತಮ್ಮ ವೆಬ್‌ಸೈಟ್ ಮೂಲಕ ಖರೀದಿದಾರರಿಗೆ ಆಹ್ವಾನ ನೀಡುತ್ತಿವೆ. ಮೂರು ಜಿಲ್ಲೆಗಳಲ್ಲಿ ಈಗಾಗಲೇ ಹಲವು ಸಾವಿರ ಎಕರೆಗಳಷ್ಟು ಕಾಫಿ ತೋಟಗಳು ಈ ಉದ್ದೇಶಕ್ಕಾಗಿಯೇ ಮಾರಾಟವಾಗಿವೆ.



ಕೊಡಗಿನಲ್ಲಿ ಹೋಂಸ್ಟೇಗಾಗಿ ಕಾಫಿ ತೋಟದಲ್ಲಿ ರಸ್ತೆ ನಿರ್ಮಾಣ ಆಗುತ್ತಿದೆ

'ಕಾಫಿ ತೋಟಗಳಲ್ಲಿ ಈ ಪರಿಯಲ್ಲಿ ಹೂಡಿಕೆ ಮಾಡುತ್ತಿರುವವರಲ್ಲಿ ಆಂಧ್ರಪ್ರದೇಶ ಮತ್ತು ಕೇರಳದವರೇ ಹೆಚ್ಚು. ಇದರಲ್ಲಿ ಸ್ಥಳೀಯರ ಪ್ರಮಾಣ ಶೇ 0.001ರಷ್ಟಿದೆ. ತೋಟದ ದರ ಯಾವ ಪ್ರಮಾಣದಲ್ಲಿದೆ, ಪರಿಣಾಮವೇನು, ಹೂಡಿಕೆದಾರರು ಯಾರು... ಯಾವುದೂ ಸ್ಪಷ್ಟವಿಲ್ಲ. ಅಂದಾಜು ಪ್ರಕಾರ ಸದ್ಯ ಒಂದು ಎಕರೆ ಕಾಫಿ ತೋಟ ₹40 ಲಕ್ಷದಿಂದ ₹60 ಲಕ್ಷಕ್ಕೆ ಮಾರಾಟವಾಗುತ್ತಿದೆ. ಸ್ವಲ್ಪ ಹೆಚ್ಚುಕಮ್ಮಿ ಇರಬಹುದು' ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

'ದೂರದಿಂದ ನೋಡುವವರಿಗೆ ಇವೆಲ್ಲ ಸುಂದರವಾಗಿ ಕಾಣಿಸುತ್ತವೆ. ಆದರೆ, ಈ ಬೆಳವಣಿಗೆಗಳು ಕೊಡಗಿನ ಪರಿಸರ ವ್ಯವಸ್ಥೆಯನ್ನು ಗೆದ್ದಲಿನಂತೆ ಒಳಗಿನಿಂದ ಟೊಳ್ಳಾಗಿಸುತ್ತಿವೆ. ಕಾಡು ಪ್ರಾಣಿಗಳ ಓಡಾಟಕ್ಕೆ ತೊಂದರೆ, ನೀರಿನ ಸಹಜ ಹರಿವಿಗೆ ಅಡ್ಡಿಯಾಗುತ್ತದೆ. ಇಲ್ಲಿಯೇ ಜಲಮೂಲಗಳು ಮಲಿನವಾಗುತ್ತಿವೆ. ಅವು ಬತ್ತಿದರೆ ಅದರ ಬಿಸಿ, ಬೆಂಗಳೂರು, ಮೈಸೂರು, ಮಂಗಳೂರು ಭಾಗದವರು ಸಹ ಅನುಭವಿಸಬೇಕಾಗುತ್ತದೆ' ಎಂದು ಪರಿಸರಪ್ರೇಮಿಗಳು ಎಚ್ಚರಿಸುತ್ತಾರೆ.

ಚಿಕ್ಕಮಗಳೂರು ಪರಿಸರ ಸೂಕ್ಷ್ಮ ಪ್ರದೇಶ. ಹುಲಿ ಸಂರಕ್ಷಿತ ಪ್ರದೇಶ ಮತ್ತು ಆನೆ ಕಾರಿಡಾರ್ ಸಹ ಇವೆ. ಇವುಗಳ ಬಫರ್ ವಲಯದಲ್ಲೇ 242 ಎಕರೆ ಜಾಗವನ್ನು ತುಂಡು ಭೂಮಿಯಾಗಿ ವಿಭಜನೆ ಮಾಡಿ ಆರು ಕಂಪನಿಗಳು ಲೇಔಟ್ ನಿರ್ಮಿಸಲು ಮುಂದಾಗಿದ್ದವು. ಜಿಲ್ಲಾಡಳಿತ ಈ ಕಂಪನಿಗಳಿಗೆ ನೋಟಿಸ್ ನೀಡಿ ಯೋಜನೆಯನ್ನು ತಡೆದಿದೆ. ಈ ಪ್ರದೇಶದ ಅಪರೂಪದ ಮತ್ತು ಅಳಿವಿನ ಅಂಚಿನಲ್ಲಿರುವ ಪ್ರಾಣಿಗಳು, ಕಡಾನೆ, ಹುಲಿ, ಚಿರತೆ, ಜಿಂಕೆ, ಕಡವೆ, ಔಷಧೀಯ ಗಿಡಗಳ ಆವಾಸ ಸ್ಥಾನವಾಗಿದೆ. ಇಂತಹ ಭೂಮಿಯನ್ನು ವಿಂಗಡಣೆ ಮಾಡಿ ಸಣ್ಣ ಸಣ್ಣ ತುಂಡುಗಳಾಗಿ ಪರಿವರ್ತಿಸಿರುವುದರಿಂದ ವನ್ಯಜೀವಿ ಆವಾಸ ಸ್ಥಾನಕ್ಕೆ ಧಕ್ಕೆಯಾಗಲಿದೆ. ನದಿ ಮೂಲಗಳು ನಶಿಸಿ ಹೋಗುವ ಸಾಧ್ಯತೆ ಇದೆ ಎಂಬುದು ಪರಿಸರವಾದಿಗಳ ಆತಂಕ. 16ನೇ ಶತಮಾನದಲ್ಲಿ ಬಾಬಾ ಬುಡನ್ ಅವರು ಮೆಕ್ಕಾದಿಂದ ವಾಪಸಾಗುತ್ತಿದ್ದಾಗ ಏಳು ಕಾಫಿ ಬೀಜಗಳನ್ನು ತಂದು ಚಿಕ್ಕಮಗಳೂರಿನ ಬೆಟ್ಟದಲ್ಲಿ ನೆಟ್ಟು ಬೆಳೆಸಿದರು. ಭಾರತದಲ್ಲಿ ಅಲ್ಲಿಂದ ಆರಂಭವಾದ ಕಾಫಿಯ ಪ್ರಯಾಣ, ಐದು ಶತಮಾನಗಳಲ್ಲಿ, 2.5 ಲಕ್ಷ ಹೆಕ್ಟೇರ್‌ಗೂ ಅಧಿಕ ವಿಸ್ತಾರಕ್ಕೆ ಹಬ್ಬಿ, 2.5 ಲಕ್ಷ ಟನ್‌ಗೂ ಅಧಿಕ ಕಾಫಿ ಉತ್ಪಾದನೆಯವರೆಗೆ ತಲುಪಿದೆ. ಲಕ್ಷಾಂತರ ಕುಟುಂಬಗಳನ್ನು ಕಾಫಿ ಶ್ರೀಮಂತಗೊಳಿಸಿದೆ.

ದೇಶದ ಒಟ್ಟಾರೆ ಕಾಫಿ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 71ಕ್ಕೂ ಹೆಚ್ಚು ಇದೆ. ಜಗತ್ತಿನಲ್ಲಿ ಅತಿ ಹೆಚ್ಚು ಕಾಫಿ ಉತ್ಪಾದಿಸುವ ರಾಷ್ಟ್ರಗಳಲ್ಲಿ ಭಾರತಕ್ಕೆ 7ನೇ ಸ್ಥಾನ. ಇಲ್ಲಿ ಮರಗಳ ನೆರಳಿನಲ್ಲಿ ಕಾಫಿ ಬೆಳೆಯಲಾಗುತ್ತದೆ. ಈ ಕಾರಣಕ್ಕೆ ಕರ್ನಾಟಕದ ಕಾಫಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಇದೆ. ಪಶ್ಚಿಮ ಘಟ್ಟದ ಪ್ರಾಕೃತಿಕ ಸಮತೋಲನಕ್ಕೂ ಕಾರಣವಾಗಿರುವ ಕಾಫಿ, ಈಚಿನ ಕೆಲವು ವರ್ಷಗಳಲ್ಲಿ ಸಂಕಷ್ಟದಲ್ಲಿದೆ. ಕಳೆದ ಒಂದುವರೆ ದಶಕದಲ್ಲಿ ಕಾಫಿ ತೋಟಗಳಲ್ಲಿ ಬಿರುಗಾಳಿ ಬೀಸುತ್ತಿದೆ. 'ಕಾಫಿ, ವಾಣಿಜ್ಯ ಬೆಳೆಯಷ್ಟೇ ಅಲ್ಲ, ಒಂದು ಸಂಸ್ಕೃತಿ- ಪರಿಸರದ ಕೊಂಡಿ. ಇದನ್ನು ರಕ್ಷಿಸಲೇಬೇಕು' ಎಂಬುದು ಬೆಳೆಗಾರರು ಮತ್ತು ಪರಿಸರ ಪ್ರೇಮಿಗಳ ವಾದ.

ಹೊಸ ಬಗೆಯ ಪ್ರವಾಸೋದ್ಯಮ ಎಂದೇ ಪರಿಗಣಿಸಿರುವ ಕಾಫಿ ತೋಟದ ಮನೆ 'ವ್ಯವಹಾರ' ಇದೀಗ ತಮಿಳುನಾಡಿನ ಟೀ ನಾಡಾದ ಊಟಿ, ಕೂನೂರು, ಕೇರಳದ ಮುನ್ನಾರ್‌ಗೂ ಹಬ್ಬುತ್ತಿದೆ. ಈಗಲೇ ಸರ್ಕಾರ ಎಚ್ಚೆತ್ತುಕೊಂಡು ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಮುಂಜಾನೆ ಎಚ್ಚರವಾದಾಗ ಕೊಡಗು, ಸಕಲೇಶಪುರ, ಚಿಕ್ಕಮಗಳೂರು ಕಾಫಿ ಕುಡಿಯಲು ಸಿಗಲಾರದ ಸ್ಥಿತಿ ಬರಬಹುದು. ಇದರ ಜೊತೆಗೆ ನದಿ ಮೂಲಗಳಿಗೆ ಅಪಾಯ ತರಬಹುದು.

ಪೂರಕ ಮಾಹಿತಿ: **ಕೆ.ಎಸ್.ಗಿರೀಶ, ವಿಜಯಕುಮಾರ್ ಎಸ್.ಕೆ.**
ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ**
ವಿನ್ಯಾಸ: **ಶಶಿಧರ ಹಳೇಮನಿ**

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 28-07-1999

ದೇವೇಗೌಡ, ಕೃಷ್ಣ, ಸಿದ್ದರಾಮಯ್ಯಗೆ ಕೋರ್ಟ್ ನೋಟಿಸ್

ಬೆಂಗಳೂರು, ಜುಲೈ 27– ಲೋಕಾಯುಕ್ತ ಕಾಯ್ದೆ ಅನ್ವಯ, ಲೋಕಾಯುಕ್ತಕ್ಕೆ ತಮ್ಮ ವಾರ್ಷಿಕ ಆದಾಯದ ವಿವರಗಳನ್ನು ಸಲ್ಲಿಸಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮಾಜಿ ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣ ಸೇರಿದಂತೆ ಹಲವು ಮಾಜಿ ಮತ್ತು ಹಾಲಿ ಶಾಸಕರಿಗೆ ಬರುವ ಆಗಸ್ಟ್ 5ರಂದು ನ್ಯಾಯಾಲಯದ ಮುಂದೆ ಹಾಜರಾಗುವಂತೆ ರಾಜ್ಯ ಹೈಕೋರ್ಟ್ ಇಂದು ಆದೇಶಿಸಿತು.

50 ವರ್ಷಗಳ ಹಿಂದೆ

ಭಾನುವಾರ, 28-07-1974

ಕರ್ನಾಟಕ ಮಹಾರಾಷ್ಟ್ರ ವಿಲೀನ | ಗಡಿವಿವಾದಕ್ಕೆ ವಿನೋಬಾ ಸಲಹೆ

ವರ್ಧಾ, ಜುಲೈ 27– ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ವಿಲೀನಗೊಳಿಸಿ ದ್ವಿಭಾಷಾ ರಾಜ್ಯವೊಂದನ್ನು ಸೃಷ್ಟಿಸುವ ಮೂಲಕ ಈ ಎರಡು ರಾಜ್ಯಗಳ ನಡುವಣ ಗಡಿ ವಿವಾದವನ್ನು ಸೌಹಾರ್ದಯುತವಾಗಿ ಬಗೆಹರಿಸಬಹುದು ಎಂದು ಸರ್ವೋದಯ ನಾಯಕ ಆಚಾರ್ಯ ವಿನೋಬಾಭಾವೆಯವರು ಅಭಿಪ್ರಾಯಪಟ್ಟಿದ್ದಾರೆ. ವಿಲೀನ ಸಾಧ್ಯವಾಗದಿದ್ದರೆ, ಮಹಾರಾಷ್ಟ್ರ ಸರ್ಕಾರ ಬೆಳಗಾವಿ ತೆಗೆದುಕೊಂಡು ಇಡೀ ಸೊಲ್ಲಾಪುರ ಜಿಲ್ಲೆಯನ್ನು ಕರ್ನಾಟಕಕ್ಕೆ ನೀಡಬೇಕೆಂದು ಬದಲಿ ಪರಿಹಾರ ಮಾರ್ಗ ಸೂಚಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜುಲೈ 28, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಷ್ಟಮಿ ಗಂ. 19-28 **ನಕ್ಷತ್ರ:** ಅಶ್ವಿನಿ ಗಂ. 11-48 **ಯೋಗ:** ಶೂಲ ಗಂ. 20-11 **ಕರಣ:** ಬಾಲವ ಗಂ. 8-22, ಕರ್ಕಾಟಕ ಮಾಸದ 12 ನೇ ದಿನ, **ಮಳೆನಕ್ಷತ್ರ:** ಪುಷ್ಯ 3.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-19 **ಸೂರ್ಯಾಸ್ತ :** 06-56
ಮುಸ್ಲಿಂ ದಿನಾಂಕ: 18 ಮೊಹರಮ್
ಅದೃಷ್ಟ ಸಂಖ್ಯೆ: 12, 3

ಮೇಷ: ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧ ಇನ್ನಷ್ಟು ಉತ್ತಮಗೊಳ್ಳಲಿದೆ. ವಿಮಾ ಸಲಹೆಗಾರರಿಗೆ ಉತ್ತಮ ದಿನ. ಮಂಜುನಾಥ ಸ್ವಾಮಿ ದರ್ಶನದಿಂದ ಕಾರ್ಯಾನುಕೂಲ ಆಗಲಿದೆ.

ವೃಷಭ: ಪರರ ನೋವಿಗೆ ಸಮಾಧಾನ ಹೇಳುವ, ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವ ಮನೋಭಾವನೆ ಬೆಳೆಸಿಕೊಳ್ಳಿ. ಧೈರ್ಯ ಹಾಗೂ ಅಚಲ ಮನಸ್ಥಿತಿಯಿಂದ ಕಾರ್ಯೋನ್ಮುಖರಾಗಿ.

ಮಿಥುನ: ವೃತ್ತಿಯಲ್ಲಿ ಪೈಪೋಟಿ ಎದುರಿಸಬೇಕಾದರೂ, ಸ್ವಪ್ರಯತ್ನದಿಂದ ಜಯಗಳಿಸುವಿರಿ. ಯಾವುದೇ ವಿಚಾರಗಳಿಗೂ ಚಿಂತಿತರಾಗುವ ಪ್ರಮೇಯ ಇಲ್ಲದ್ದರಿಂದ ಮನಸ್ಸು ನಿರಾಳಗೊಳ್ಳುವುದು.

ಕರ್ಕಾಟಕ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯ ಮೂಡಲಿದೆ. ಪ್ರಮುಖ ವಿಚಾರಗಳಲ್ಲಿ ಮುಂದಿನ ಹೆಜ್ಜೆಯಿಡಲು ಸೂಕ್ತ ಸಮಯವಲ್ಲ.

ಸಿಂಹ: ಸಕ್ರಿಯ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪಲಿವೆ. ಸಕಾರಾತ್ಮಕವಾದ ಕನಸುಗಳಿಗೆ ಪುನಃ ಜೀವ ಬಂದಂತೆ ಆಗಲಿದೆ. ಸಮಸ್ಯೆಗಳು ಮುಂದಿನ ದಿನಗಳಲ್ಲಿ ದೂರವಾಗಲಿದೆ.

ಕನ್ಯಾ: ಜೀವನದ ಯಾವುದೇ ರಂಗದಲ್ಲಾದರೂ ಬಯಕೆಗೆ ತಕ್ಕಂತೆ ದೂರ ಕ್ರಮಿಸುವ ಸಾಮರ್ಥ್ಯ ನಿಮಗಿದ್ದರೂ, ನೆರೆಯವರ ಸಹಾಯ ಯಾಚಿಸುವ ಸಂದರ್ಭ ಬರಲಿದೆ. ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ತುಲಾ: ಚತುರ ಮಾತುಗಾರಿಕೆಯಿಂದಾಗಿ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಥವಾ ಉದ್ಯೋಗ ಅನ್ವೇಷಣೆಯಲ್ಲಿ ಅನುಕೂಲವಾಗಲಿದೆ. ಹಿತಾಸಕ್ತಿಗಳತ್ತ ಹೆಚ್ಚಿನ ಗಮನ ಹರಿಸಿ.

ವೃಶ್ಚಿಕ: ದೀರ್ಘಕಾಲದಿಂದ ಬಾಕಿ ಉಳಿದಿದ್ದ ಕೆಲಸಗಳು ಕಾರ್ಯಗತಗೊಳ್ಳಲಿವೆ. ಅಧಿಕ ಜವಾಬ್ದಾರಿಯ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರುವುದು ಒಳಿತು.

ಧನು: ಸಹೋದ್ಯೋಗಿಗಳಿಂದ ಮಾರ್ಗದರ್ಶನ ಪಡೆದುಕೊಳ್ಳುವಲ್ಲಿ ಯಶಸ್ವಿ ಆಗುವಿರಿ. ಗಿಡಮೂಲಿಕೆಗಳ ಬಳಕೆಯಿಂದ ಆರೋಗ್ಯದಲ್ಲಿ ಚೇತರಿಕೆಯಾಗಿ ದೈನಂದಿನ ಚಟುವಟಿಕೆಗಳಲ್ಲಿ ಲವಲವಿಕೆಯಿಂದ ಪಾಲುಗೊಳ್ಳುವಿರಿ.

ಮಕರ: ವ್ಯಾವಹಾರಿಕ ಪ್ರಯಾಣದಿಂದ ಆದಾಯ ವೃದ್ಧಿಯಾಗಲಿದೆ. ಕುಟುಂಬದವರ ಆರೋಗ್ಯದಲ್ಲಿ ಹೊಟ್ಟೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳು ಕಂಡುಬಂದಲ್ಲಿ, ವೈದ್ಯರನ್ನು ಸಂದರ್ಶಿಸಿ ತಪಾಸಣೆ ಮಾಡಿಸಿಕೊಳ್ಳಿ.

ಕುಂಭ: ಕಾರ್ಯಕ್ಷೇತ್ರದಲ್ಲಿ ನೀತಿ- ನಿಯಮಗಳಿಗೆ ಬದ್ಧರಾದಲ್ಲಿ ಆಡಳಿತ ವರ್ಗದ ಸಹಾಯ ಸಿಗಲಿದೆ. ಮುಖ್ಯವಾದ ಕೆಲಸವೊಂದು ಸಂಜೆ ವೇಳೆಗೆ ನೆರವೇರುವುದು. ಚಂಡಿಕಾ ಪಾರಾಯಣದಿಂದ ನೆಮ್ಮದಿ ದೊರಕಲಿದೆ.


ಮೀನ: ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ, ಆತ್ಮವಿಶ್ವಾಸದ ಕೊರತೆ ಬಾಧಿಸದು. ನಿರೀಕ್ಷಿಸಿದ ಉದ್ಯಮದಲ್ಲಷ್ಟೇ ಅಲ್ಲದೆ ಇತರೆಡೆಯೂ ಅವಕಾಶಗಳು ದೊರೆಯಲಿವೆ. ತೆಂಗು ವ್ಯಾಪಾರಿಗಳಿಗೆ ಲಾಭವಾಗುವುದು.

ಪದಬಂಧ 5755

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರಗಿಡಗಳನ್ನು ಹೆಚ್ಚು ಬೆಳೆಸುವಂತೆ ಪ್ರೋತ್ಸಾಹಿಸಲು ಏರ್ಪಡಿಸಿದ ಸಮಾರಂಭ (6)
5.ಹತ್ತಿರಕ್ಕೊಂದು ಪರ್ಯಾಯ ಪದ (3)
7.ಕರ್ನಾಟಕದ ನೈರುತ್ಯದಲ್ಲಿರುವ ಪ್ರಮುಖ ರೇವುಪಟ್ಟಣ (4)
8.ಕಸರತ್ತು ಮಾಡುವವನ ಕುತ್ತಿಗೆ (2)
9.ಮಂತ್ರವನ್ನು ವಿಧಿಪೂರ್ವಕವಾಗಿ ಮತ್ತೆ ಮತ್ತೆ ಮೆಲ್ಲನೆ ಉಚ್ಚರಿಸುವುದು (2)
10.ನಡುವಿನ ದಾರ ಉಲ್ಟಾ ಹಿಡಿದು ಬವಣೆ ಪಡುವಿಕೆ! (4)
13.ಮನೆಯ ಒಡತಿ ಇಲ್ಲಿದ್ದಾಳೆ (3)
14.ಸಾಯುವ ಕಾಲದಲ್ಲಿ ಉಂಟಾಗುವ ತಳಮಳ (6)

ಮೇಲಿಂದ ಕೆಳಕ್ಕೆ
2.ದೇವಾಲಯದ ಸಭಾ ಮಂಟಪ (4)
3.ವನದಲ್ಲಿರುವ ಬಟ್ಟೆ (3)
4.ಹಿಂದಿಯವನ ವಿಶೇಷ ಪ್ರಯತ್ನ! (4)
6.ಗುಯಿಗುಟ್ಟುವ ಹಾಡು (5)
7.ದೇವರನ್ನಿಡುವ ವಿಶೇಷ ರೀತಿಯ ರಚನೆ (3)
8.ಕಟ ಕಟ ಶಬ್ದ ಮಾಡುವ ಬಾಗಿಲು (3)
9.ಅರಗಿನ ಮನೆ (4)
11.ಈತ ತತ್ವಜ್ಞಾನಿ (4)
12.ತಿರುಗಿ ನಿಂತು ಸೋಲಿಸು (3)



5754ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಚುಕಂ 5.ತಲಾಂತರ
7.ಸದ್ಭಾವನೆ 8.ಗಗನಕುಸುಮ
10.ಚಿಕ್ಕಮಗಳೂರು 13.ಸಂಜೀವಿನಿ
15.ಮನಸಿಜ 16.ಜಟ್ಟಿಗ

ಮೇಲಿಂದ ಕೆಳಕ್ಕೆ:
1.ಅಂತರಂಗ 2.ಕರ
3.ಕಂಸ 4.ನವಸುಮ
6.ತರಂಗ 9.ನಹಗ
10.ಚಿರಂಜೀವಿ 11.ರುಜಿನ
12.ಮೃಗಜಲ 14.ನಿಜ
15.ಮಗ

ಸುಡೊಕು 6140

	6	3		9				8
1			8			5		
		2		6			9	7
		7			9	6		
4	2						5	9
6			7		8			
2		5	4		7	9		6
	4						7	
9		6	3		5		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6139 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಾರ್ಕೋಮಾ: ಅರಿವಿನ ಅಗತ್ಯವಿರುವ ಅಪರೂಪದ ಆದರೆ ಗಂಭೀರವಾದ ಕ್ಯಾನ್ಸರ್

ಪ್ರಜಾವಾಣಿ ಮಂಥನ

ಸಾರ್ಕೋಮಾಗಳು ಮೂಳೆ, ಸ್ನಾಯು, ರಕ್ತನಾಳಗಳು ಮತ್ತು ನರಗಳಂತಹ ಅಂಗಾಂಶಗಳಲ್ಲಿ ಹುಟ್ಟುವ ಆಕ್ರಮಣಕಾರಿ ಹಾಗೂ ಮಾರಣಾಂತಿಕ ಕ್ಯಾನ್ಸರ್ಗಳಾಗಿವೆ. ಈ ಕ್ಯಾನ್ಸರ್ಗಳು ವಯಸ್ಕರಲ್ಲಿ ಅಪರೂಪ. ವಯಸ್ಕರಲ್ಲಿ ಸಂಭವಿಸುವ ಎಲ್ಲಾ ಕ್ಯಾನ್ಸರ್‌ಗಳಲ್ಲಿ ಸರ್ಕೋಮಾಗಳ ಪ್ರತಿಶತ 2-3 % ಕ್ಕಿಂತಲೂ ಕಡಿಮೆ. ಆದರೆ, ಮಕ್ಕಳಲ್ಲಿ ಇವು ಸುಮಾರು 20 % ಘನ ಗೆಡ್ಡೆಗಳ ಕ್ಯಾನ್ಸರ್ಗಳಿಗೆ ಕಾರಣವಾಗಿವೆ. ಕ್ಷಿಪ್ರ ಬೆಳವಣಿಗೆ ಮತ್ತು ಅತ್ಯಂತ ಕಡಿಮೆ ಸಮಯ, ಅಂದರೆ ಕೆಲವೇ ವಾರಗಳು ಅಥವಾ ತಿಂಗಳುಗಳಲ್ಲಿ ಮಾರಣಾಂತಿಕ ಹರಡುವಿಕೆಯ ಸಂಭಾವ್ಯತೆ ಹೊಂದಿರುವುದರಿಂದ, ಮತ್ತು ಈ ಕ್ಯಾನ್ಸರ್ಗಳಿಗೆ ಕಾರಣವಾದ ಅಂಶಗಳ ಸ್ಕ್ರೀನಿಂಗ್ (ಮುನ್ನೆಚ್ಚರಿಕಾ ಪರೀಕ್ಷೆಗಳು) ಲಭ್ಯವಿಲ್ಲದಿರುವುದರಿಂದ, ಸರ್ಕೋಮಾಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗ್ರತಿ ಮತ್ತು ಆರಂಭಿಕ ಹಂತದಲ್ಲಿಯೇ ಸರ್ಕೋಮಾಗಳ ಪತ್ತೆ ಪ್ರಾಥಮಿಕ ಮತ್ತು ಅನಿವಾರ್ಯ ಜವಾಬ್ದಾರಿಯಾಗಿದೆ.



ಡಾ. ಶ್ರೀಮಂತ್ ಬಿ ಎಸ್
ಲೀಡ್ ಕನ್ಸಲ್ಟೆಂಟ್ - ಆರ್ಥೋಪೆಡಿಕ್ ಆಂಕೊಲಾಜಿ,

ಸರ್ಕೋಮಾದ ಪ್ರಮುಖ ರೋಗ ಲಕ್ಷಣಗಳು: ಸರ್ಕೋಮಾವನ್ನು ಕಂಡುಹಿಡಿಯುವಲ್ಲಿ ಗಹನವಾಗಿ ಗಮನ ಸೆಳೆಯುವ ಎರಡು ಪ್ರಮುಖ ರೋಗಲಕ್ಷಣಗಳೆಂದರೆ, ನೋವು ಮತ್ತು ಊತ. ನಿರಂತರ ನೋವು, ವಿಶೇಷವಾಗಿ ವಿಶ್ರಾಂತಿ ಅಥವಾ ರಾತ್ರಿ ಸಮಯದಲ್ಲಿ ತೀವ್ರಗೊಳ್ಳುವ ನೋವು, ಮತ್ತು ದೇಹದಲ್ಲಿ 5 ಸೆಂಟಿಮೀಟರ್ ಅಥವಾ ಒಂದು ನಿಂಬೆಗಿಂತ ದೊಡ್ಡದಾದ ಯಾವುದೇ ತರಹದ ಗೋಚರಿಸುವ ಊತ ಅಥವಾ ಹಠಾತ್ ಬೆಳವಣಿಗೆಯು ಸರ್ಕೋಮಾ ಆಗಿರಬಹುದು.

ಈ ರೋಗಲಕ್ಷಣಗಳು ಹೆಚ್ಚಾಗಿ ತ್ವರಿತವಾಗಿ ಪ್ರಕಟವಾಗುತ್ತವೆ. ಸಾರ್ಕೋಮಾಗಳನ್ನು ಸೋಂಕುಗಳು, ಕ್ಷಯರೋಗ ಅಥವಾ ಹಾನಿಕಾರವಲ್ಲದ (benign) ಲಿಪೊಮಾ (Lipoma)ಗಳಂತಹ ಸಾಮಾನ್ಯ ಸ್ಥಿತಿಗಳಿಂದ ಪ್ರತ್ಯೇಕಿಸಲು ತ್ವರಿತ ವೈದ್ಯಕೀಯ ಸಮಾಲೋಚನೆಯು ನಿರ್ಣಾಯಕವಾಗಿದೆ.

ರೋಗನಿರ್ಣಯದ ಪ್ರಕ್ರಿಯೆ: ವೈದ್ಯರು ಸಾರ್ಕೋಮಾ ಶಂಕಿಸಿದ್ದಲ್ಲಿ, ರೋಗನಿರ್ಣಯ ಪ್ರಕ್ರಿಯೆಗಾಗಿ, x -ರೇ ಪರೀಕ್ಷೆಗಳು, MRI ಮತ್ತು CT ಸ್ಕ್ಯಾನ್‌ಗಳು, ಮತ್ತು ಬಯಾಪ್ಸಿ ಪರೀಕ್ಷೆಗಳನ್ನು ಸೂಚಿಸಬಹುದು. ಈ ಪರೀಕ್ಷೆಗಳು ನಿಖರವಾದ ರೋಗನಿರ್ಣಯವನ್ನು ಸುಗಮಗೊಳಿಸುತ್ತವೆ ಮತ್ತು ಸೂಕ್ತವಾದ ಚಿಕಿತ್ಸಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತದೆ.

ಚಿಕಿತ್ಸಾ ವಿಧಾನ: ಸಾರ್ಕೋಮಾ ಸಮರ್ಪಕ ನಿರ್ವಹಣೆಗೆ, ವೈದ್ಯಕೀಯ ಕ್ಯಾನ್ಸರ್ ತಜ್ಞರು (Medical Oncologist), ಶಸ್ತ್ರಚಿಕಿತ್ಸಾ ಕ್ಯಾನ್ಸರ್ ತಜ್ಞರು (Surgical Oncologist), ಆರ್ಥೋಪೆಡಿಕ್ ಕ್ಯಾನ್ಸರ್ ತಜ್ಞರು (Orthopedic Oncologist), ವಿಕಿರಣ ಕ್ಯಾನ್ಸರ್ ತಜ್ಞರು (Radio-oncologist) ಒಳಗೊಂಡಂತೆ ಬಹುಶಿಸ್ತೀಯ ತಂಡದ ಜಂಟಿ ಪ್ರಯತ್ನಗಳ ಅಗತ್ಯವಿರುತ್ತದೆ. ಚಿಕಿತ್ಸೆಯ ವಿಧಾನವು, ಕ್ಯಾನ್ಸರ್ ರೋಗದ ತೀವ್ರತೆ ಮತ್ತು ಹರಡುವಿಕೆಯ ಆಧಾರದ ಮೇಲೆ ನಿರ್ಧರಿತವಾಗಿರುತ್ತದೆ.

"ಚಿಕಿತ್ಸೆಯಲ್ಲಿ ಆಧುನಿಕ ಪ್ರಗತಿಗಳು ಗಮನಾರ್ಹವಾಗಿ ಸುಧಾರಿಸಿದ ಫಲಿತಾಂಶಗಳನ್ನು ಹೊಂದಿವೆ. ನಮ್ಮ ಸಂಸ್ಥೆಯಲ್ಲಿ, ನಾವು ಸಮರ್ಥ ಕೀಮೋಥೆರಪಿ (chemotherapy), ಮತ್ತು ವಿಕಿರಣಶಾಸ್ತ್ರದ (radiotherapy) ಸಹಾಯದಿಂದ ನಿಖರವಾದ ಶಸ್ತ್ರಚಿಕಿತ್ಸಾ ಯೋಜನೆ, ಕ್ಯಾನ್ಸರ್ ಗೆಡ್ಡೆ ತೆಗೆಯಲು 3D-ಮುದ್ರಿತ ರೋಗಿಯ-ನಿರ್ದಿಷ್ಟ ಉಪಕರಣಗಳು, ಕಸ್ಟಮ್ ಪ್ರೊಸ್ಥೆಸಿಸ್, ಮತ್ತು ವಿಕಿರಣ ಆಂಕೊಲಾಜಿ (Radiation Oncology) ಯನ್ನು ಬಳಸಿಕೊಂಡು ನವೀನ ಮೂಳೆ ಮರುಬಳಕೆ ತಂತ್ರಗಳ ಸಹಾಯದಿಂದ ಶೇಕಡ 95 % ಕ್ಕಿಂತ ಹೆಚ್ಚು ಬಾಧಿತ ಅಂಗಗಳು ಮತ್ತು ಸೊಂಟದ ಯಶಸ್ವಿ ಸಂರಕ್ಷಣೆಯನ್ನು ನಿರ್ವಹಿಸುತ್ತೇವೆ," ಎನ್ನುತ್ತಾರೆ **ಡಾ. ಶ್ರೀಮಂತ್ ಬಿ ಎಸ್, ಲೀಡ್ ಕನ್ಸಲ್ಟೆಂಟ್ - ಆರ್ಥೋಪೆಡಿಕ್ ಆಂಕೊಲಾಜಿ, ಮಣಿಪಾಲ್ ಆಸ್ಪತ್ರೆ ಹಳೆ ವಿಮಾನ ನಿಲ್ದಾಣ ರಸ್ತೆ.**

ಮೂಳೆ ಕ್ಯಾನ್ಸರ್‌ಗಳಲ್ಲಿ ಕೀಮೋಥೆರಪಿ ಮತ್ತು ರೇಡಿಯೋ ಥೆರಪಿಯ ಪಾತ್ರ

ಮೂಳೆಯ ಕ್ಯಾನ್ಸರ್‌ಗಳು ಎವಿಂಗ್‌ನ ಸಾರ್ಕೋಮಾ ಅಥವಾ ಆಸ್ಟಿಯೊಸಾರ್ಕೋಮಾ ಆಗಿರುತ್ತವೆ. ಈ ಕ್ಯಾನ್ಸರ್ ಗಳಲ್ಲಿ ತಕ್ಕ ಮಟ್ಟಿಗೆ ಮೈಕ್ರೋಮೆಟಾಸ್ಟಾಸಿಸ್ (ದೇಹದ ಅನ್ಯ ಭಾಗಗಳಿಗೆ ಹರಡುವ ಕ್ಷಮತೆ) ಯಾವಾಗಲೂ ಇರುತ್ತವೆ. "ಕೀಮೋಥೆರಪಿಯು ಮೂಳೆ ಕ್ಯಾನ್ಸರ್‌ಗಳ ನಿರ್ವಹಣೆಯಲ್ಲಿ ಅವಿಭಾಜ್ಯ ಪಾತ್ರವನ್ನು ವಹಿಸುತ್ತದೆ ಮತ್ತು ಮೂಳೆ ಕ್ಯಾನ್ಸರ್ ಗುಣಪಡಿಸುವ ಯಶಸ್ಸನ್ನು ಗಣನೀಯವಾಗಿ ಸುಧಾರಿಸುತ್ತದೆ. ಈ ಕ್ಯಾನ್ಸರ್‌ಗಳ ಪರಿಣಾಮಕಾರಿ ನಿರ್ವಹಣೆಯು, ಯಾವಾಗಲೂ ಕೀಮೋಥೆರಪಿಯಿಂದ ಪ್ರಾರಂಭವಾಗುತ್ತದೆ. ಹಾಗಾಗಿ ಕಿಮೊಥೆರಪಿ - ಶಸ್ತ್ರಚಿಕಿತ್ಸೆ - ಕೀಮೋಥೆರಪಿ ಅಥವಾ ಕಿಮೊಥೆರಪಿ - ಶಸ್ತ್ರಚಿಕಿತ್ಸೆ - ರೇಡಿಯೊಥೆರಪಿ - ಕೀಮೋಥೆರಪಿ ಈ ಕ್ಯಾನ್ಸರ್ಗಳ ಪ್ರಮಾಣಿತ ಚಿಕಿತ್ಸಾ ಅನುಕ್ರಮವಾಗಿದೆ," ಎನ್ನುತ್ತಾರೆ **ಡಾ. ಅಮಿತ್ ರಾವುತನ್, HOD ಮತ್ತು ಕನ್ಸಲ್ಟೆಂಟ್ - ವೈದ್ಯಕೀಯ ಆಂಕೊಲಾಜಿ, ಹೆಮಟಾಲಜಿ ಮತ್ತು ಹೆಮಟೊ-ಆಂಕೊಲಾಜಿ, ಮಣಿಪಾಲ್ ಆಸ್ಪತ್ರೆ ಹಳೆ ವಿಮಾನ ನಿಲ್ದಾಣ ರಸ್ತೆ.**



ಡಾ. ಅಮಿತ್ ರಾವುತನ್,
HOD ಮತ್ತು ಕನ್ಸಲ್ಟೆಂಟ್ - ವೈದ್ಯಕೀಯ ಆಂಕೊಲಾಜಿ, ಹೆಮಟಾಲಜಿ ಮತ್ತು ಹೆಮಟೊ-ಆಂಕೊಲಾಜಿ,

ಕೀಮೋಥೆರಪಿಯು

- ಗೆಡ್ಡೆಯನ್ನು ಕುಗ್ಗಿಸಲು ಸಹಾಯ ಮಾಡುವುದರ ಮೂಲಕ, ಶಸ್ತ್ರಚಿಕಿತ್ಸೆಯನ್ನು ಸರಳಗೊಳಿಸುತ್ತದೆ. ಮೂಳೆಯ ಮೇಲೆ ಶಸ್ತ್ರಚಿಕಿತ್ಸೆಯ ಪರಿಣಾಮವನ್ನು ಕಡಿಮೆ ಮಾಡಿ ಅಂಗ ಸಂರಕ್ಷಣೆಯನ್ನು ಸಹ ಇದು ಸಕ್ರಿಯಗೊಳಿಸುತ್ತದೆ.
- ಈಗಾಗಲೇ ಹೇಳಿದಂತೆ ಮೂಳೆ ಕ್ಯಾನ್ಸರ್ ಗಳಲ್ಲಿ ತಕ್ಕ ಮಟ್ಟಿಗೆ ಮೈಕ್ರೋಮೆಟಾಸ್ಟಾಸಿಸ್ ಕ್ಷಮತೆ ಯಾವಾಗಲೂ ಇರುವುದರಿಂದ, ಈ ಮೆಟಾಸ್ಟಾಟಿಕ್ ಸೂಕ್ಷ್ಮ ಕೋಶಗಳನ್ನು ಕೊಲ್ಲುವುದರ ಮೂಲಕ ಕಿಮೊತೆರಪಿ ದೂರದ ಮೆಟಾಸ್ಟಾಸಿಸ್ ಮತ್ತು ಕ್ಯಾನ್ಸರ್ ಹಂತ-4 ಕ್ಕೆ ಪ್ರಗತಿಯಾಗುವ ಸಾಧ್ಯತೆಗಳನ್ನು ತಡೆಗಟ್ಟುತ್ತದೆ. (**ಉದಾಹರಣೆಗೆ:** ಶಸ್ತ್ರ ಚಿಕಿತ್ಸೆಯ ಮೂಲಕ ನಿರ್ವಹಿಸಲಾದ ಕೈಯ ಮೂಳೆಯ ಎವಿಂಗ್‌ನ ಸಾರ್ಕೋಮಾ, ಕೀಮೋಥೆರಪಿಯ ಅನು ಪಸ್ಥಿತಿಯಲ್ಲಿ ಶ್ವಾಸಕೋಶದ ಮೆಟಾಸ್ಟಿಸ್‌ನಂತಹ ದೂರದ ಮೆಟಾಸ್ಟಾಟಿಸ್‌ಗೆ ಕಾರಣವಾಗಬಹುದು, ಹಂತ 4 ಕ್ಕೆ ಮುಂದುವರಿದು ಸಾವಿಗೆ ಕಾರಣವಾಗಬಹುದು).

ಈ ಸೂಕ್ಷ್ಮ-ಮೆಟಾಸ್ಟಾಟಿಕ್ ಕೋಶಗಳನ್ನು ಕೊಲ್ಲುವ ಮೂಲಕ, ಕೀಮೋಥೆರಪಿಯು ಮೆಟಾಸ್ಟಾಸಿಸ್ ಬೆಳವಣಿಗೆಯನ್ನು ತಡೆಯಲು ಅಥವಾ ಮೆಟಾಸ್ಟಾಸಿಸ್ ಅನ್ನು ವಿಳಂಬಗೊಳಿಸಲು ನಿರ್ಣಾಯಕವಾಗಿದೆ.

ಸರ್ಕೋಮಾ ಮತ್ತು ಮೂಳೆ ಕ್ಯಾನ್ಸರ್‌ಗಳ ನಿರ್ವ ಹಣೆಯಲ್ಲಿ ವಿಕಿರಣವು (Radiation) ಕೂಡ ಪ್ರಮುಖ ಪಾತ್ರ ವಹಿಸುತ್ತದೆ. ಗೆಡ್ಡೆಯು ಗಾತ್ರದಲ್ಲಿ 5 ಸೆಂಟಿಮೀಟರ್ ಗಿಂತ ಅಧಿಕ, ಆಳವಾದ ಸ್ಥಳದಲ್ಲಿ, ಅಥವಾ ಆಕ್ರಮಣಕಾರಿಯಾಗಿದ್ದಲ್ಲಿ, ಅಥವಾ ಹೆಚ್ಚಿನ ಅಪಾಯದ ಲಕ್ಷಣಗಳನ್ನು ಹೊಂದಿರುವ ಗೆಡ್ಡೆಗಳು ಮತ್ತು ಸಂಪೂರ್ಣ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಲು ಸಾಧ್ಯವಾಗದಿದ್ದಲ್ಲಿ ಶಸ್ತ್ರಚಿಕಿತ್ಸೆಯ ನಂತರ ವಿಕಿರಣದ ಅಗತ್ಯವಿರುತ್ತದೆ. ಶಸ್ತ್ರಚಿಕಿತ್ಸೆಯ ಗಾಯವು ಸರಿಯಾಗಿ ವಾಸಿಯಾದ ನಂತರ, ಶಸ್ತ್ರಚಿಕಿತ್ಸೆಯ ನಂತರದ ವಿಕಿರಣವನ್ನು ಸಾಮಾನ್ಯವಾಗಿ ಪ್ರಾರಂಭಿಸಲಾಗುತ್ತದೆ. ವಿಕಿರಣದ ಅವಧಿಯು ಸುಮಾರು 6 ವಾರಗಳು, ವಾರದಲ್ಲಿ 5 ದಿನಗಳು ಚಿಕಿತ್ಸೆ ನೀಡಲಾಗುತ್ತದೆ. ಶಸ್ತ್ರಚಿಕಿತ್ಸೆಯ ನಂತರದ ವಿಕಿರಣದ ಗುರಿಯು ಗಡ್ಡೆಯು ಮರಳಿ ಬರುವ ಸಾಧ್ಯತೆಯನ್ನು ಕಡಿಮೆ ಮಾಡುವುದು. ಮೇಲಿನ ಮತ್ತು ಕೆಳಗಿನ ಅಂಗಗಳನ್ನು ಒಳಗೊಂಡ ಹೆಚ್ಚಿನ ಮೂಳೆ ಕ್ಯಾನ್ಸರ್ಗಳಲ್ಲಿ (ಮೃದು ಅಂಗಾಂಶದ ಸಾರ್ಕೋಮಾಗಳು ಮತ್ತು ಆಸ್ಟಿಯೊಸಾರ್ಕೋಮಾಗಳ ವರ್ಗದ ಕ್ಯಾನ್ಸರ್ಗಳು) ಶಸ್ತ್ರಚಿಕಿತ್ಸೆಯ ನಂತರದ ವಿಕಿರಣವನ್ನು ಬಳಸಲಾಗುತ್ತದೆ.

"ಕೆಲವು ಮೂಳೆ ಕ್ಯಾನ್ಸರ್‌ಗಳಲ್ಲಿ, ಗೆಡ್ಡೆಯ ಗಾತ್ರವನ್ನು ಕಡಿಮೆ ಮಾಡಲು ನಿರ್ಣಾಯಕ ಶಸ್ತ್ರಚಿಕಿತ್ಸೆಯ ಮೊದಲು ವಿಕಿರಣವನ್ನು ಮಾಡಬಹುದು, ಇದರಿಂದಾಗಿ ಶಸ್ತ್ರಚಿಕಿತ್ಸಕನಿಗೆ ಗೆಡ್ಡೆಯನ್ನು ತೆಗೆದುಹಾಕಲು ಸುಲಭವಾಗುತ್ತದೆ. ಶಸ್ತ್ರಚಿಕಿತ್ಸೆಯ ಪೂರ್ವ ರೇಡಿಯೊಥೆರಪಿಯ ಬಳಕೆಯೊಂದಿಗೆ ಈ ಗೆಡ್ಡೆಗಳು ಗಮನಾರ್ಹವಾಗಿ ಕುಗ್ಗುತ್ತವೆ. ಮೂಳೆಗೆ ಹರಡುವ ಕ್ಯಾನ್ಸರ್‌ನಿಂದ ಉಂಟಾಗುವ ನೋವು ಮತ್ತು ಒತ್ತಡದ ಪ್ರಮಾಣವನ್ನೂ ನಿರ್ವಹಿಸುವಲ್ಲಿಯೂ ಕೂಡ ವಿಕಿರಣ ಸಹಾಯ ಮಾಡುತ್ತದೆ. ಈ ಸನ್ನಿವೇಶದಲ್ಲಿ, ರೋಗಿಗಳು ಸುಮಾರು 1 ವಾರದ ವಿಕಿರಣ ಚಿಕಿತ್ಸೆಯ ಅಲ್ಪಾವಧಿಯೊಂದಿಗೆ ತಮ್ಮ ರೋಗಲಕ್ಷಣಗಳಲ್ಲಿ ಗಮನಾರ್ಹ ಸುಧಾರಣೆ ಹೊಂದುತ್ತಾರೆ." ಎನ್ನುತ್ತಾರೆ **ಡಾ.ಸಿಂಧು ಪಾಲ್ ಕವಲಕ್ಕಾಟ್, ಕನ್ಸಲ್ಟೆಂಟ್ - ರೇಡಿಯೇಷನ್ ಆಂಕೊಲಾಜಿ ಮಣಿಪಾಲ್ ಆಸ್ಪತ್ರೆ ಹಳೆ ವಿಮಾನ ನಿಲ್ದಾಣ ರಸ್ತೆ.**

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಶಸ್ತ್ರ ಚಿಕಿತ್ಸೆ, ತದ ನಂತರದ ಹೆಚ್ಚುವರಿ ಕೀಮೋಥೆರಪಿ ಅಥವಾ ರೇಡಿಯೊಥೆರಪಿಯಿಂದ ಕ್ಯಾನ್ಸರ್ ಅನ್ನು ನಿರ್ವಹಿಸಿದ ನಂತರ, ಸೂಕ್ತವಾದ ಅಂಗ ಕಾರ್ಯವನ್ನು (limb-functioning) ಖಚಿತಪಡಿಸಿಕೊಳ್ಳಲು ಸಮಗ್ರ ಪುನರ್ವಸತಿ (Comprehensive rehabilitation) ಯೋಜನೆ ಪೂರಕವಾಗಿದೆ. ಅಂತಹ ಸಂದರ್ಭಗಳಲ್ಲಿ ಶಾಲೆ ಅಥವಾ ಕಾಲೇಜು ಅಥವಾ ಕೆಲಸಕ್ಕೆ ಹಿಂತಿರುಗುವುದು ನಿರೀಕ್ಷಿತ ಫಲಿತಾಂಶವಾಗಿದೆ.



ಡಾ.ಸಿಂಧು ಪಾಲ್ ಕವಲಕ್ಕಾಟ್,
ಕನ್ಸಲ್ಟೆಂಟ್ - ರೇಡಿಯೇಷನ್ ಆಂಕೊಲಾಜಿ ಮಣಿಪಾಲ್ ಆಸ್ಪತ್ರೆ ಹಳೆ ವಿಮಾನ ನಿಲ್ದಾಣ ರಸ್ತೆ.

ಒಟ್ಟಿನಲ್ಲಿ ಹೇಳುವುದಾದರೆ ಸಾರ್ಕೋಮಾಗಳು ಅಪರೂಪ ಮತ್ತು ಮಾರಣಾಂತಿಕವಾಗಿದ್ದರೂ, ಆರಂಭಿಕ ಗುರುತಿಸುವಿಕೆ ಮತ್ತು ಸುಧಾರಿತ ಚಿಕಿತ್ಸೆಯ ಆಯ್ಕೆಗಳು ಭರವಸೆಯನ್ನು ನೀಡುತ್ತವೆ. ರೋಗಲಕ್ಷಣಗಳ ಬಗ್ಗೆ ಸಾರ್ವಜನಿಕ ಅರಿವು ಮತ್ತು ಸಕಾಲಿಕ ವೈದ್ಯಕೀಯ ಸಮಾಲೋಚನೆಯ ಪ್ರಾಮುಖ್ಯತೆಯು ಈ ರೋಗವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ನಿರ್ಣಾಯಕವಾಗಿದೆ. ನೆನಪಿಡಿ, ಸರಿಯಾದ ಕಾಳಜಿ ಮತ್ತು ಆರಂಭಿಕ ಮಧ್ಯಸ್ಥಿಕೆಯೊಂದಿಗೆ, ಸರ್ಕೋಮಾಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು, ಜೀವವನ್ನು ಮಾತ್ರವಲ್ಲ, ಅಂಗಗಳನ್ನೂ ಸಹ ಉಳಿಸಬಹುದಾಗಿದೆ.

'ನನ್ನ ದೃಷ್ಟಿ ಬದಲಿಸಿದ ದತ್ತುಪುತ್ರಿಯರು'

ತಮ್ಮ ಅಂಗವಿಕಲ ಹೆಣ್ಣುಮಕ್ಕಳ ಬದುಕು ತೆರೆದಿಟ್ಟ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಇಬ್ಬರು ಅಂಗವಿಕಲ ಮಕ್ಕಳು ನನ್ನ ಬದುಕಿಗೆ ಬಂದ ನಂತರ ನನ್ನ ಜಗತ್ತು ಮತ್ತು ನಾನು ಜಗತ್ತನ್ನು ನೋಡುವ ರೀತಿಯೇ ಬದಲಾಯಿತು. ಅಂತಹವರಿಗಾಗಿ ಎಲ್ಲರನ್ನೂ ಒಳಗೊಳ್ಳುವ ಸಮಾಜ ಕಟ್ಟುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂಬುದನ್ನು ಈ ಮಕ್ಕಳು ನನಗೆ ತೋರಿಸಿಕೊಟ್ಟರು' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

ರಾಜ್ಯ ಅಂಗವಿಕಲರ ಹಕ್ಕುಗಳ ಆಯುಕ್ತಾಲಯ, ರಾಮಯ್ಯ ಕಾನೂನು ಕಾಲೇಜು ಮತ್ತು ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ ಜಂಟಿ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ 'ಅಂಗವಿಕಲರಿಗೆ ಸಮಾನ ಅವಕಾಶ ರಾಷ್ಟ್ರೀಯ ವಿಚಾರ ಸಂಕಿರಣ'ವನ್ನು ಉದ್ಘಾಟಿಸಿದರು. 2014ರಲ್ಲಿ ತಾವು ದತ್ತು ಪಡೆದ ಇಬ್ಬರು ಅಂಗವಿಕಲ ಹೆಣ್ಣುಮಕ್ಕಳ ಬದುಕನ್ನು ಉದಾಹರಿಸಿ ಮಾತನಾಡಿದರು.

'ನನ್ನ ಮಕ್ಕಳಾದ ಪ್ರಿಯಾಂಕ ಮತ್ತು ಮಾಹಿ ಇಬ್ಬರೂ ಅಂಗವಿಕಲರು. ಗಾಲಿ-ಕುರ್ಚಿಯಲ್ಲೇ ಅವರಿಬ್ಬರ ಓಡಾಟ. ನಾನು ಸಿಜೆಐ ಆದ ಮೇಲೆ ನನ್ನ ಕಚೇರಿ ನೋಡಬೇಕು ಎಂದರು. ಕರೆದುಕೊಂಡು ಹೋದೆ. ಆದರೆ ನ್ಯಾಯಮೂರ್ತಿಗಳ ಛೇಂಬರ್‌ಗೆ ಹೋಗಲು ಎರಡು ದೊಡ್ಡ ಮೆಟ್ಟಿಲನ್ನು ಏರಬೇಕಿತ್ತು. ಮಕ್ಕಳನ್ನು ಗಾಲಿಕುರ್ಚಿ ಸಮೇತ ಮೇಲೆತ್ತಿ ಇಡಬೇಕಾಯಿತು. ಆನಂತರವೇ ಅಲ್ಲಿ ರ‍್ಯಾಂಪ್ ನಿರ್ಮಾಣ ಮಾಡಿದ್ದು' ಎಂದರು.

ಇತ್ತೀಚೆಗೆ ತೆಲಂಗಾಣದ ಐಎಎಸ್ ಅಧಿಕಾರಿಯೊಬ್ಬರು ಅಂಗವಿಕಲರಿಗೆ ಸಮಾನ ಅವಕಾಶವನ್ನು ನಿರಾಕರಿಸಿ, 'ಅಂಗವಿಕಲ ವೈದ್ಯರ ಬಳಿ ನೀವು ಶಸ್ತ್ರಚಿಕಿತ್ಸೆ ಮಾಡಿಸಿ ಕೊಳ್ಳುತ್ತೀರಾ?' ಎಂದು ಟ್ವೀಟ್ ಮಾಡಿದ್ದರು. ನನ್ನ ಮೊದಲ ಪತ್ನಿಗೆ ಕ್ಯಾನ್ಸರ್ ಆಗಿತ್ತು. ಆಕೆಗೆ ಚಿಕಿತ್ಸೆ ನೀಡಿದ್ದ ಡಾ.ಸುರೇಶ್ ಅಡ್ವಾಣಿ ಅಂಗವಿಕಲರು. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಹೊಸ ವಿಧಾನ ರೂಪಿಸಿದ ಹೆಗ್ಗಳಿಕೆ ಅವರದ್ದು. ಅವರ ಚಿಕಿತ್ಸೆಯಲ್ಲಿ ನನ್ನ ಪತ್ನಿ 12 ವರ್ಷ ಬದುಕಿದ್ದರು. ಅಂಗವಿಕಲರಿಂದ ಏನೂ ಸಾಧ್ಯವಿಲ್ಲ ಎಂಬ ಮನಃಸ್ಥಿತಿ ಸರಿಯಲ್ಲ ಎಂಬುದಕ್ಕೆ ಇದು ನಿದರ್ಶನ ಎಂದರು.

'ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರೊಂದಿಗೂ ಸಮಾನವಾಗಿ ಬೆರೆಯುವ ಮತ್ತು ಎಲ್ಲರೊಂದಿಗೂ ಸಮಾನವಾಗಿ ಸ್ಪರ್ಧಿಸುವಂತಹ ಅವಕಾಶವನ್ನು ನಾವು ಅಂಗವಿಕಲರಿಗೆ ಸೃಷ್ಟಿಸಿಕೊಡಬೇಕು. ಎಲ್ಲೆಡೆ ಅವರು ಹೋಗಲು ಸಾಧ್ಯವಾಗುವಂತಹ ರ‍್ಯಾಂಪ್‌ಗಳು, ಬ್ರೈಲ್–ಸಂಜ್ಞಾ ಸೂಚನಾ ಫಲಕಗಳು ಮತ್ತು ಧ್ವನಿವರ್ಧಕಗಳ ಮೂಲಕ ಸೂಚನೆ ನೀಡುವ ವ್ಯವಸ್ಥೆ ಮಾಡಬೇಕು. ನನ್ನ ಮಕ್ಕಳನ್ನು ಸುಪ್ರೀಂ ಕೋರ್ಟ್‌ಗೆ ಕರೆದುಕೊಂಡು ಹೋದ ನಂತರ, ಅಲ್ಲಿರುವ ಇಂತಹ ವ್ಯವಸ್ಥೆ ಬಗ್ಗೆ ಪರಿಶೋಧನೆ ನಡೆಸಿದೆವು ಮತ್ತು ಅಗತ್ಯವಿದ್ದೆಡೆ ಅಂತಹ ವ್ಯವಸ್ಥೆಯನ್ನು ಕಲ್ಪಿಸುವ ಕೆಲಸ ಮಾಡುತ್ತಿದ್ದೇವೆ' ಎಂದರು.



ಕಾರ್ಯಕ್ರಮದಲ್ಲಿ ನಿಯೋಜಿತ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ, ಕೇಂದ್ರದ ಅಂಗವಿಕಲರ ಹಕ್ಕುಗಳ ಮುಖ್ಯ ಆಯುಕ್ತ ರಾಜೇಶ್ ಅಗರ್‌ವಾಲ್ ಮತ್ತು ರಾಮಯ್ಯ ಕಾನೂನು ಕಾಲೇಜಿನ ನಿರ್ದೇಶಕ ಎಂ.ಆರ್.ಆನಂದರಾಮ್ ಇದ್ದರು –ಪ್ರಜಾವಾಣಿ ಚಿತ್ರ

ಅಂಗವಿಕಲರಿಗೆ ಇರುವ ಕಾರ್ಯಕ್ರಮಗಳ ಜಾರಿಯಲ್ಲಿನ ಮೊದಲ ಹೆಜ್ಜೆಯೆಂದರೆ, ಅವರು ಹೇಗೆ ಇದ್ದಾರೋ ಹಾಗೇ ಅವರನ್ನು ಒಪ್ಪಿಕೊಳ್ಳುವುದು
ಬಿ.ವಿ.ನಾಗರತ್ನ, ನ್ಯಾಯಮೂರ್ತಿ, ಸುಪ್ರೀಂ ಕೋರ್ಟ್

ರಾಜ್ಯದ ನ್ಯಾಯಾಂಗ ವ್ಯವಸ್ಥೆಯಲ್ಲಿ 800 ಮಂದಿ ಅಂಗವಿಕಲ ನೌಕರರು ಇದ್ದಾರೆ. ಅವರಿಗೆ ಅಗತ್ಯ ತರಬೇತಿ ನೀಡುವ ವ್ಯವಸ್ಥೆಯೂ ನಮ್ಮಲ್ಲಿದೆ
ಎ.ವಿ.ಅಂಜಾರಿಯಾ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ಕರ್ನಾಟಕ

ಈಡಿಗರ ಅಭಿವೃದ್ಧಿ: ಸಿ.ಎಂಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾರಾಯಣ ಗುರು ಈಡಿಗ ಅಭಿವೃದ್ಧಿ ನಿಗಮ ಸ್ಥಾಪನೆ ಘೋಷಣೆಯಾಗಿದ್ದು, ನಿಗಮಕ್ಕೆ ₹500 ಕೋಟಿ ಅನುದಾನ ನೀಡಬೇಕು' ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ಹಾಗೂ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ವಿಖ್ಯಾತಾನಂದ ಸ್ವಾಮೀಜಿ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳಿದ್ದ ನಿಯೋಗವು, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

26 ಉಪಜಾತಿಗಳನ್ನು ಒಳಗೊಂಡಿರುವ ಈಡಿಗ ಸಮುದಾಯದ 45 ಲಕ್ಷಕ್ಕಿಂತಲೂ ಹೆಚ್ಚು ಜನರು ರಾಜ್ಯದಲ್ಲಿದ್ದಾರೆ. ಸಮುದಾಯವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯವಾಗಿ ಹಿಂದುಳಿದಿದೆ. ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಮನವಿಯಲ್ಲಿ ಕೋರಿದ್ದಾರೆ.

ಶರಾವತಿ ಮುಳುಗಡೆಯಲ್ಲಿ ಜಮೀನು ಕಳೆದುಕೊಂಡ ಸಮುದಾಯದ ರೈತರಿಗೆ ಬಗರ್‌ಹುಕುಂ ಸಾಗುವಳಿ ಹಕ್ಕುಪತ್ರ ನೀಡಬೇಕು. ಸಿಗಂದೂರು ದೇವಸ್ಥಾನದ 15 ಎಕರೆ ಜಮೀನನ್ನು ಸಮದಾಯದ ಜನರಿಗೆ ಮಂಜೂರು ಮಾಡಿ, ಹಕ್ಕು ಪತ್ರ ನೀಡಬೇಕು.

ಸಮುದಾಯವನ್ನು ಶೈಕ್ಷಣಿಕವಾಗಿ ಮುಂದೆ ತರಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಲಾ–ಕಾಲೇಜು ಮತ್ತು ವಿದ್ಯಾರ್ಥಿನಿಲಯ ಸ್ಥಾಪಿಸಬೇಕು. ವೃತ್ತಿಪರ ತರಬೇತಿ ಕೇಂದ್ರ, ಸಂಶೋಧನಾ ಕೇಂದ್ರ ಸ್ಥಾಪಿಸಲು ಸೋಲೂರಿನಲ್ಲಿ 20 ಎಕರೆ ಜಮೀನು ಹಂಚಿಕೆ ಮಾಡಬೇಕು. ನಗರದ ಸರ್.ಎಂ.ವಿ ಬಡಾವಣೆಯಲ್ಲಿ ಈಗಾಗಲೇ ನಿರ್ಮಾಣವಾಗುತ್ತಿರುವ ಸಮುದಾಯ ಭವನಕ್ಕೆ ಆರ್ಥಿಕ ನೆರವು ನೀಡಬೇಕು ಎಂದು ಕೋರಿದ್ದಾರೆ.



ಆರ್ಯ ಈಡಿಗ ಮಹಾಸಂಸ್ಥಾನ ಮಠದ ವಿಖ್ಯಾತಾನಂದ ಸ್ವಾಮೀಜಿ ಮತ್ತು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ ಅವರ ನೇತೃತ್ವದಲ್ಲಿ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು

'ಕಡಿಮೆ ಅನುದಾನ ಕೊಟ್ಟ ಬಿಜೆಪಿಯವರನ್ನೇಕೆ ಕೇಳಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಕಡಿಮೆ ಅನುದಾನವನ್ನು ಕೊಟ್ಟಿರುವ ಕೇಂದ್ರದ ಬಿಜೆಪಿ ಸರ್ಕಾರವನ್ನು ಪ್ರಶ್ನಿಸದ ನೀವು, ₹39ಸಾವಿರ ಕೋಟಿ ಕೊಡುತ್ತಿರುವ ನಮ್ಮ ತಲೆ ಮೇಲೆಯೇ ಒಡೆಯುತ್ತೀರಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಮ್ಮ ನಿವಾಸದ ಬಳಿ ಸಾರ್ವಜನಿಕರಿಂದ ಶನಿವಾರ ಅಹವಾಲು ಸ್ವೀಕರಿಸುವಾಗ, ದಸಂಸ ಮುಖಂಡರೊಂದಿಗೆ ಮಾತನಾಡಿ, 'ನಿಮಗೆ ಹಿಂದೆ ಬಹಳ ಹೆಚ್ಚೆಂದರೆ ಒಂದೂವರೆ ಸಾವಿರ ಕೋಟಿ ರೂಪಾಯಿ ಕೊಡುತ್ತಿದ್ದರು. ನಾನು ಮುಖ್ಯಮಂತ್ರಿಯಾದ ಮೇಲೆ ₹39,121 ಕೋಟಿ ಕೊಡುತ್ತಿದ್ದೇನೆ. ಆದರೆ, ಕೇಂದ್ರ ಬಜೆಟ್‌ನಲ್ಲಿ ಪರಿಶಿಷ್ಟರಿಗೆ ₹65 ಸಾವಿರ ಕೋಟಿಯನ್ನಷ್ಟೆ ಕೊಟ್ಟಿದ್ದಾರೆ. ಅದರ ಬಗ್ಗೆ ಮೋದಿಯನ್ನೇಕೆ ಕೇಳುವುದಿಲ್ಲ?' ಎಂದು ಪ್ರಶ್ನಿಸಿದರು.

'ಪರಿಶಿಷ್ಟರ ಹಣ ಅವರಿಗೆ ಮಾತ್ರವೇ ಬಳಕೆಯಾಗಬೇಕು ಎಂದು ಕಾನೂನು ಮಾಡಿದ್ದೇ ನಾನು. ಅದನ್ನು ಬಿಜೆಪಿಯವರೇನೂ ಮಾಡಿರಲಿಲ್ಲ. ಅದಕ್ಕಾಗಿ ಅವರನ್ನೇಕೆ ನೀವು ಪ್ರಶ್ನಿಸುವುದಿಲ್ಲ?' ಎಂದರು. 'ಡಾ.ಎಚ್.ಸಿ. ಮಹದೇವಪ್ಪ ಅವರನ್ನೇ ಸಮಾಜ ಕಲ್ಯಾಣ ಸಚಿವರನ್ನಾಗಿ ಮಾಡಿದ್ದೇನೆ. ನಾನು ಯಾವುದಕ್ಕೂ ಅನುಮತಿ ಕೊಡಬೇಕಿಲ್ಲ. ತಾನಾಗಿಯೇ ಅನುದಾನ ದೊರೆಯುತ್ತದೆ. ನಿಮಗೆ ಬೇಕಾದ ಅನುಕೂಲಗಳನ್ನೆಲ್ಲಾ ಮಾಡೋಣ' ಎಂದು ಭರವಸೆ ನೀಡಿದರು.

ಪ್ರತಿ ಶಾಲೆಯಲ್ಲೂ 'ಮಕ್ಕಳ ಸ್ನೇಹಿ ಗ್ರಂಥಾಲಯ'

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಲು ರಾಜ್ಯದ ಎಲ್ಲ ಶಾಲೆಗಳೂಮಕ್ಕಳಸ್ನೇಹಿಗ್ರಂಥಾಲಯಹೊಂದಬೇಕು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಾರದಲ್ಲಿ ಒಂದು ಅವಧಿ ಗ್ರಂಥಾಲಯಕ್ಕೆ ಮೀಸಲಿಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಪ್ರಸಿದ್ಧಲೇಖಕರಕಥೆ,ಕವಿತೆ,ನಾಟಕ, ಕಾದಂಬರಿ ಮತ್ತಿತರ ಸಾಹಿತ್ಯ ಕೃತಿಗಳು, ಜಾನಪದ, ಲೇಖನಗಳನ್ನು ಒಳಗೊಂಡ ಪುಸ್ತಕಗಳನ್ನು ಸಂಗ್ರಹಿಸಬೇಕು. ಸಮಗ್ರ ಶಿಕ್ಷಣ ಕರ್ನಾಟಕದ ನೆರವು ಹಾಗೂ ದಾನಿಗಳಿಂದ ಪುಸ್ತಕಗಳನ್ನು ಪಡೆಯಬೇಕು. ಅಂತಹ ಪುಸ್ತಕ ಓದುವ ಹವ್ಯಾಸವನ್ನು ಮಕ್ಕಳಲ್ಲಿ ರೂಢಿಸಬೇಕು. ಅದಕ್ಕಾಗಿಯೇ ಸರ್ಕಾರ 'ಓದುವ ಹವ್ಯಾಸ ಜ್ಞಾನದ ವಿಕಾಸ' ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿದೆ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಸಂಗೀತ ವಿ.ವಿ; ಬಿಳಿ ಹಾಳೆಯಲ್ಲೇ ಪರೀಕ್ಷೆ!

ಒಂದನೇ ಪುಟದಿಂದ...

ನೂರಾರು ಮಕ್ಕಳು ಪರೀಕ್ಷಾ ಕೊಠಡಿಗಳ ಮಾಹಿತಿ ಇಲ್ಲದೆ ಸಂಕಷ್ಟ ಅನುಭವಿಸಿದರು. ಪೋಷಕರು ಹಾಗೂ ಪರೀಕ್ಷಾ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಅವ್ಯವಸ್ಥೆ ಖಂಡಿಸಿ ಕೆಲವರು ಪರೀಕ್ಷಾ ಕೇಂದ್ರದ ಮುಂದೆ ಪ್ರತಿಭಟನೆ ನಡೆಸಿದರು.

'ಈ ಮೊದಲು ಶಿಕ್ಷಣ ಇಲಾಖೆ ಪರೀಕ್ಷೆಗಳನ್ನು ನಡೆಸುತ್ತಿತ್ತು. ಈಗ ಸಂಗೀತ ವಿಶ್ವವಿದ್ಯಾಲಯ ನಿರ್ವಹಿಸುತ್ತಿದೆ. ವಿಶ್ವವಿದ್ಯಾಲಯದಲ್ಲಿ ಅಗತ್ಯ ಅನುದಾನ, ಸಿಬ್ಬಂದಿ, ಸೌಕರ್ಯಗಳು ಇಲ್ಲದ ಕಾರಣ ಇಂತಹ ಅವ್ಯವಸ್ಥೆಗೆ ದಾರಿ ಮಾಡಿಕೊಟ್ಟಿದೆ' ಎಂದು ಪರೀಕ್ಷಾ ಉಸ್ತುವಾರಿ ಹೊತ್ತಿದ್ದ, ಹೆಸರು ಹೇಳಲು ಬಯಸದ ಅಧಿಕಾರಿ ಹೇಳಿದರು.

ಪ್ರಶ್ನೆ ಪತ್ರಿಕೆ ಎರಡು ಗಂಟೆ ವಿಳಂಬ: ಭರತನಾಟ್ಯ ಜೂನಿಯರ್ ವಿಷಯದ ಪರೀಕ್ಷೆ ಮಧ್ಯಾಹ್ನ 1ಕ್ಕೆ ನಿಗದಿಯಾಗಿತ್ತು. ಕೆಲ ಕೊಠಡಿಗಳಲ್ಲಿ ಪ್ರಶ್ನೆಪತ್ರಿಕೆ ನೀಡಿದಾಗ ಮಧ್ಯಾಹ್ನ 3 ಗಂಟೆ ದಾಟಿತ್ತು. ಕೆಲ ಕೊಠಡಿಗಳಲ್ಲಿ 1.45ಕ್ಕೆ ನೀಡಲಾಗಿದೆ. ಸಂಜೆ 5ರವರೆಗೂ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಜ್ಞಾನಭಾರತಿ ಆವರಣದ ಪರೀಕ್ಷಾ ಕೇಂದ್ರದಲ್ಲಿ ಮೊದಲ ಅವಧಿಯ ಪರೀಕ್ಷೆ ತುಂಬಾ ವಿಳಂಬವಾದ ಕಾರಣ ಸಂಜೆ 4ಕ್ಕೆ ಇದ್ದ ದೃಶ್ಯ–ಶ್ರವಣ ಜ್ಞಾನ ವಿಷಯದ ಪರೀಕ್ಷೆಯನ್ನು ಮುಂದೂಡಲಾಯಿತು. ಇದರಿಂದ ಪರೀಕ್ಷೆಗೆ ಸಿದ್ಧರಾಗಿ ಬಂದಿದ್ದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಮುಂದೂಡಿದ ದೃಶ್ಯ–ಶ್ರವಣ ಜ್ಞಾನ ವಿಷಯದ ಪರೀಕ್ಷೆಯನ್ನು ಪ್ರಾಯೋಗಿಕ ಪರೀಕ್ಷೆಯ ದಿನವೇ ನಡೆಸುವುದಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳು ಹೇಳಿದ್ದಾರೆ. ಪ್ರಾಯೋಗಿಕ ಪರೀಕ್ಷೆಗೆ ಮಕ್ಕಳು ಮೇಕಪ್ ಸಹಿತ ವಸ್ತ್ರಾಲಂಕೃತರಾಗಿ ಬಂದಿರುತ್ತಾರೆ. ವೇಷ ಭೂಷಣದಲ್ಲಿ ಕುಳಿತು ಲಿಖಿತ ಪರೀಕ್ಷೆ ಬರೆಯಲು ಸಾಧ್ಯವೇ' ಎಂದು ಪೋಷಕಿ ಲೀಲಾಮಣಿ ಪ್ರಶ್ನಿಸಿದರು.

ವಿವಿಧ ರೈಲುಗಳ ಸಂಚಾರ ರದ್ದು

ಭೂಕುಸಿತ: ಗೂಡ್ಸ್ ರೈಲಿಗೆ ಹಾನಿ

ಪ್ರಜಾವಾಣಿ ವಾರ್ತೆ

ಹಾಸನ/ಮಂಗಳೂರು: ಹಾಸನ ಮತ್ತು ಶಾಂತಿಗ್ರಾಮ ನಡುವಿನ ರೈಲು ಮಾರ್ಗದಲ್ಲಿ ಶನಿವಾರ ಬೆಳಿಗ್ಗೆ ಭೂಕುಸಿತ ಉಂಟಾಗಿದ್ದು, ಗೂಡ್ಸ್ ರೈಲಿಗೆ ಸ್ವಲ್ಪ ಹಾನಿಯಾಗಿದೆ. ಟ್ರ್ಯಾಕ್‌ಮೆನ್‌ಗಳು ಮಣ್ಣನ್ನು ತೆರವುಗೊಳಿಸಿದ್ದು, ಸಂಚಾರ ಆರಂಭಿಸಲಾಗಿದೆ. ಈ ಮಾರ್ಗದಲ್ಲಿ 20 ಕಿ.ಮೀ ವೇಗದಲ್ಲಿ ರೈಲುಗಳನ್ನು ಓಡಿಸಲು ಸೂಚಿಸಲಾಗಿದೆ. ಹೆಚ್ಚಿನ ಕಾರ್ಯಾಚರಣೆಗೆ ಹಾಸನದಿಂದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಬೆಳಿಗ್ಗೆ 7 ಗಂಟೆಗೆ ಹೊರಡಬೇಕಿದ್ದ ಹಾಸನ–ಯಶವಂತಪುರ ರೈಲು 8.30ಕ್ಕೆ ಹಾಸನದಿಂದ ಹೊರಟಿತು.

ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣ ಸಮೀಪದ ಎಡಕುಮೇರಿ-ಕಡಗರವಳ್ಳಿ ನಡುವಿನ ದೋಣಿಗಲ್ ಎಂಬಲ್ಲಿ ಹಳಿ ಮೇಲೆ ಮಣ್ಣು ಕುಸಿದಿದ್ದರಿಂದ ಹಲವು ರೈಲುಗಳ ಸೇವೆ ರದ್ದುಪಡಿಸಲಾಗಿದೆ.

16511 ಕೆಎಸ್‌ಆರ್ ಬೆಂಗಳೂರು–ಕಣ್ಣೂರು ಎಕ್ಸ್‌ಪ್ರೆಸ್ ರೈಲನ್ನು 28ರವರೆಗೆ, 16512 ಕಣ್ಣೂರು–ಕೆಎಸ್‌ಆರ್ ಬೆಂಗಳೂರು ರೈಲನ್ನು ಇದೇ 28 ಮತ್ತು 29ರಂದು ರದ್ದುಪಡಿಸಲಾಗಿದೆ.

07378 ಮಂಗಳೂರು ಸೆಂಟ್ರಲ್–ವಿಜಯಪುರ ರೈಲು ಇದೇ 29ರವರೆಗೆ ಹಾಗೂ 07377 ವಿಜಯಪುರ–ಮಂಗಳೂರು ಸೆಂಟ್ರಲ್ ರೈಲು ಇದೇ 28ರ ವರೆಗೆ, 16585 ಎಸ್‌ಎಂವಿಟಿ ಬೆಂಗಳೂರು – ಮುರುಡೇಶ್ವರ ಇದೇ 28ರಂದು ಹಾಗೂ 16586 ಮುರುಡೇಶ್ವರ – ಎಸ್‌ಎಂವಿಟಿ ಬೆಂಗಳೂರು ರೈಲನ್ನು ಇದೇ 29ರವರೆಗೆ ರದ್ದು ಪಡಿಸಲಾಗಿದೆ.

16595 ಕೆಎಸ್‌ಆರ್ ಬೆಂಗಳೂರು–ಕಾರವಾರ ಇದೇ 28ರವರೆಗೆ ಹಾಗೂ 16596 ಕಾರವಾರ–ಕೆಎಸ್‌ಆರ್ ಬೆಂಗಳೂರು ರೈಲನ್ನು ಇದೇ 29ರವರೆಗೆ ರದ್ದುಪಡಿಸಲಾಗಿದೆ.

16540 ಮಂಗಳೂರು ಜಂಕ್ಷನ್–ಯಶವಂತಪುರ ಜಂಕ್ಷನ್ ರೈಲನ್ನು ಇದೇ 28ರವರೆಗೆ ಹಾಗೂ 06567 ಎಸ್‌ಎಂವಿಟಿ ಬೆಂಗಳೂರು–ಕಾರವಾರ ವಿಶೇಷ ರೈಲು 28ರವರೆಗೆ, 16575 ಯಶವಂತಪುರ ಜಂಕ್ಷನ್–ಮಂಗಳೂರು ಜಂಕ್ಷನ್ ರೈಲನ್ನು ಇದೇ 28ರವರೆಗೆ ಹಾಗೂ 16576 ಮಂಗಳೂರು ಜಂಕ್ಷನ್–ಯಶವಂತಪುರ ಜಂಕ್ಷನ್ ರೈಲನ್ನು ಇದೇ 29ರವರೆಗೆ ರದ್ದುಪಡಿಸಲಾಗಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.



ವಿರಾಜಪೇಟೆ ಬೈಂದೂರು ರಾಜ್ಯ ಹೆದ್ದಾರಿಯಲ್ಲಿ ಮಕ್ಕಂದೂರು ಸಮೀಪ ಗುಡ್ಡದ ಮಣ್ಣು ರಸ್ತೆಗೆ ಕುಸಿದಿತ್ತು

ಹರಿಪ್ರಸಾದ್‌ಗೆ ಎನ್‌ಸಿಇಆರ್‌ಟಿ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ನೀಡುವ 2023–24ನೇ ಸಾಲಿನ 'ರಾಷ್ಟ್ರೀಯ ಶೈಕ್ಷಣಿಕ ನಾವೀನ್ಯತಾ ಪುರಸ್ಕಾರ'ಕ್ಕೆ ಶಿವಮೊಗ್ಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ (ಡಯಟ್) ಹಿರಿಯ ಉಪನ್ಯಾಸಕ ಜಿ.ವಿ. ಹರಿಪ್ರಸಾದ್ ಆಯ್ಕೆಯಾಗಿದ್ದಾರೆ.

ನಾವೀನ್ಯತೆಯ ಅಭ್ಯಾಸ ಮತ್ತು ಪ್ರಯೋಗ ಮಾಡಿದ ರಾಷ್ಟ್ರದ ಒಟ್ಟು ನಾಲ್ಕು ಡಯಟ್‌ಗಳಲ್ಲಿ ಕರ್ನಾಟಕದಿಂದ ಶಿವಮೊಗ್ಗ ಡಯಟ್‌ಗೆ ಈ ಗೌರವ ಸಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಹರಿಪ್ರಸಾದ್ ಅವರು ಕೈಗೊಂಡ 'ಸಹಭಾಗಿತ್ವದ ಕ್ರಿಯಾ ಸಂಶೋಧನೆಯ ಮೂಲಕ ಗುಣಾತ್ಮಕ ಶಿಕ್ಷಣ' (ಸದಿ) ಪ್ರಯೋಗಕ್ಕೆ ಈ ಪುರಸ್ಕಾರ ಲಭಿಸಿದೆ.

ದೇಶದ 31 ಶಿಕ್ಷಕರು, ಪ್ರಶಿಕ್ಷಕರು ಹಾಗೂ ಅಧಿಕಾರಿಗಳಿಗೆ ಈ ಪುರಸ್ಕಾರ ನೀಡಲಾಗಿದೆ. ಕರ್ನಾಟಕದಲ್ಲಿನ ಹುಬ್ಬಳ್ಳಿ ಸರ್ಕಾರಿ ಪ್ರೌಢ ಶಾಲೆ ಸಹ ಶಿಕ್ಷಕಿ ಎಸ್.ಆರ್. ಶೀಲವಂತರ್, ಬೆಂಗಳೂರಿನ ಸೇಕ್ರೆಡ್ ಹಾರ್ಟ್ ಕಾಲೇಜಿನ ಉಪನ್ಯಾಸಕಿ ಕೆ.ಎಸ್. ತನುಜಾ, ಆರ್.ವಿ.ಟಿ.ಟಿ.ಐ ಸಂಸ್ಥೆಯ ಕೆ.ಎಚ್. ಮಮತಾ, ಧಾರವಾಡದ ವನಿತ ಶಿಕ್ಷಕರ ಸಂಸ್ಥೆಯ ಸಂಧ್ಯಾ ಜಿ. ವೈದ್ಯ ಅವರು ಶೈಕ್ಷಣಿಕ ನಾವೀನ್ಯತಾ ಗೌರವಕ್ಕೆ ಪಾತ್ರರಾಗಿದ್ದಾರೆ.



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಪೂರ್ಣ ಭರ್ತಿಯಾಗಿರುವ ಕೃಷ್ಣರಾಜಸಾಗರ ಅಣೆಕಟ್ಟೆಯಿಂದ ಶನಿವಾರ ನೀರು ಹರಿಸಿದಾಗ ಕಂಡುಬಂದ ನಯನಮನೋಹರ ನೋಟ –ಪ್ರಜಾವಾಣಿ ಚಿತ್ರ/ ರಂಜು ಪಿ

ಮಲೆನಾಡು: ನಿಲ್ಲದ ಮಳೆ ಮುಂದುವರಿದ ಪ್ರವಾಹ

ಚಕ್ರಾದಲ್ಲಿ ದಾಖಲೆಯ 32.5 ಸೆಂ.ಮೀ ಮಳೆ; ಮರ ಬಿದ್ದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು/ಶಿವಮೊಗ್ಗ/ಚಿಕ್ಕಮಗಳೂರು: ಮಲೆನಾಡಿನಲ್ಲಿ ಮಳೆಯ ಆರ್ಭಟ ಶನಿವಾರವೂ ಮುಂದುವರೆಯಿತು. ತುಂಗಾ, ಭದ್ರಾ, ಲಿಂಗನಮಕ್ಕಿ, ಮಾಣಿ ಜಲಾಶಯಗಳಿಗೆ ಭಾರಿ ಪ್ರಮಾಣದ ಒಳಹರಿವು ದಾಖಲಾಗಿದೆ. ಕೊಡಗು, ಹಾಸನ ಮತ್ತು ಚಾಮರಾಜನಗರದಲ್ಲಿ ಮಳೆ ಅಬ್ಬರದ ಪರಿಣಾಮ ನೆರೆ, ಭೂ ಕುಸಿತ, ಬೆಳೆ ಹಾನಿ ಆಗಿದೆ. ಹೇಮಾವತಿ ನದಿ ಪ್ರವಾಹ ಮುಂದುವರಿದಿದೆ.

ಹೊಸನಗರ ತಾಲ್ಲೂಕಿನ ಚಕ್ರಾ ಜಲಾಶಯ ವ್ಯಾಪ್ತಿಯಲ್ಲಿ 24 ಗಂಟೆಗಳಲ್ಲಿ ದಾಖಲೆಯ 32.5 ಸೆಂ.ಮೀ ಮಳೆ ಸುರಿದಿದೆ.

ಕಡೂರು ತಾಲ್ಲೂಕಿನ ಅಯ್ಯನಕೆರೆ, ತರೀಕೆರೆ ತಾಲ್ಲೂಕಿನ ಜಂಬದಹಳ್ಳಿ ಜಲಾಶಯಗಳು ಭರ್ತಿಯಾಗಿವೆ. ಉಡುಪಿ, ದಕ್ಷಿಣ ಕನ್ನಡದಲ್ಲಿ ಮಳೆ ಇಳಿಮುಖವಾಗಿತ್ತು.

ಚಿಕ್ಕಮಗಳೂರು ತಾಲ್ಲೂಕಿನ ಆವತಿ ಹೋಬಳಿಯ ತಂಬಳ್ಳಿಪುರ-ದಲ್ಲಿ ಕುಮಾರ್ (32) ಎಂಬವರು ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿ-ದ್ದಾರೆ. ಶುಕ್ರವಾರ ಸಂಜೆ ಜಾನುವಾರು ಜತೆಗೆ ಹೋದವರು ಮರಳಿರಲಿಲ್ಲ. ಶನಿವಾರ ಬೆಳಿಗ್ಗೆ ದೊಡ್ಡಹಳ್ಳದಲ್ಲಿ ಶವ ಪತ್ತೆಯಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರು ಸಮೀಪದ ಹಾದಿಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೀನು-ಮನೆಕೊಪ್ಪದ ಸಚಿನ್ (26) ಅವರು ಬೈಕಿನಲ್ಲಿ ಹೋಗುವಾಗ ಅವರ ಮೇಲೆ ಶುಕ್ರವಾರ ತಡರಾತ್ರಿ ಅಕೇಶಿಯಾ ಮರ ಬಿದ್ದು ಮೃತಪಟ್ಟಿದ್ದಾರೆ.

ಶರಾವತಿ ಜಲಾನಯನ ಪ್ರದೇಶ ಹೊಸನಗರ, ಸಾಗರ ತಾಲ್ಲೂಕುಗಳಲ್ಲಿ ಭಾರಿ ಮಳೆಯಾಗುತ್ತಿದೆ. ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯಕ್ಕೆ 74,514 ಕ್ಯುಸೆಕ್ ನೀರು ಹರಿದುಬರುತ್ತಿದೆ.

ಲಕ್ಕವಳ್ಳಿಯ ಭದ್ರಾ ಜಲಾಶಯದಲ್ಲಿ 24 ಗಂಟೆಗಳಲ್ಲಿ 4 ಅಡಿ ನೀರು ಏರಿಕೆಯಾಗಿದೆ. ಜಲಾಶಯ ಭರ್ತಿಗೆ ಇನ್ನು 8 ಅಡಿ ಬಾಕಿ ಇದೆ. ಗಾಜನೂರಿನ ತುಂಗಾ ಜಲಾಶಯ ಭರ್ತಿ ಆಗಿ, ನದಿಗೆ 70,444 ಕ್ಯುಸೆಕ್ ನೀರು ಬಿಡಲಾಗುತ್ತಿದೆ.

ಕರಾವಳಿ ಜಿಲ್ಲೆಗಳಲ್ಲಿ ಇದೇ 28ರಂದು ಗುಡುಗು ಸಿಡಿಲಿನಿಂದ ಕೂಡಿದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೇ 28ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಸಂಪರ್ಕ ಕಡಿತ: ಹೊಳೆನರಸೀಪುರ, ಗೊರೂರು, ಮರಡಿ, ಹೆಬ್ಬಾಲೆ, ಅತ್ನಿ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಅತ್ನಿ ಸಮೀಪದ ಸೇತುವೆ ಸಂಪೂರ್ಣ ಜಲಾವೃತವಾಗಿದೆ. ಆಲೂರು, ಹೊಳೆನರಸೀಪುರ ತಾಲ್ಲೂಕುಗಳಲ್ಲಿ ನೂರಾರು ಎಕರೆ ಬೆಳೆ ಮುಳುಗಿದೆ.

ಕೊಡಗು ಜಿಲ್ಲೆಯಲ್ಲಿ ಮಳೆ ತಗ್ಗಿದೆ. ಬೈಂದೂರು- ವಿರಾಜಪೇಟೆ ರಾಜ್ಯ ಹೆದ್ದಾರಿ ಸೇರಿ ಹಲವೆಡೆ ರಸ್ತೆಗೆ ಮಣ್ಣು ಕುಸಿದಿದೆ. ವಿದ್ಯುತ್ ಕಂಬಗಳು ಬಿದ್ದು, ಜಿಲ್ಲಾಕೇಂದ್ರ ಸೇರಿ ಬಹುಭಾಗದಲ್ಲಿ ವಿದ್ಯುತ್ ಇರಲಿಲ್ಲ. ಮರಗಳು ಬುಡಮೇಲಾಗುತ್ತಿದ್ದು, ಸೆಸ್ಕ್ ಸಿಬ್ಬಂದಿಯ ಸುರಕ್ಷತೆ ದೃಷ್ಟಿಯಿಂದ ದುರಸ್ತಿ ಕಾರ್ಯ ಸ್ಥಗಿತಗೊಳಿಸಲಾಗಿತ್ತು.

ವಿರಾಜಪೇಟೆ- ಬೈಂದೂರು ರಾಜ್ಯ ಹೆದ್ದಾರಿಯಲ್ಲಿ ಮಕ್ಕಂದೂರು ಸಮೀಪ ಗುಡ್ಡದ ಮಣ್ಣು ಕುಸಿದಿದೆ. ಮಂಡ್ಯದ ಶ್ರೀರಂಗಪಟ್ಟಣದ ಸಮೀಪ ವಿಸಿಆರ್ ಲೇಔಟ್ ಸಂಪರ್ಕ ಕಡಿತವಾಗಿದೆ. ದೇವಾಲಯಗಳು ಜಲಾವೃತವಾಗಿವೆ.

ಮೈಸೂರು, ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಹುಣಸೂರಿಗೆ ಸಂಪರ್ಕ ಕಲ್ಪಿಸುವ ಮಾರ್ಗದಲ್ಲಿ, ಪಶ್ಚಿಮವಾಹಿನಿ ಸಮೀಪ ರೈಲ್ವೆ ಹಳಿಯ ಕೆಳ ಸೇತುವೆ ಜಲಾವೃತವಾಗಿದೆ. ಕೊಳ್ಳೇಗಾಲ ತಾಲ್ಲೂಕಿನ 9 ಗ್ರಾಮಗಳ ನೂರಾರು ಎಕರೆಯಲ್ಲಿ ಬೆಳೆದಿದ್ದ ಭತ್ತ, ಜೋಳ, ಕಬ್ಬು, ಟೊಮೆಟೊ ನಾಶವಾಗಿದೆ. ಪಂಪ್‌ಸೆಟ್‌ಗಳಿಗೆ ಹಾನಿಯಾಗಿದೆ. ಹಳೆ ಅಣಗಳ್ಳಿ-ಹರಳೆ ಸಂಪರ್ಕ ರಸ್ತೆ, ಹಂಪಾಪುರದ ದೇವಸ್ಥಾನದ ಮುಖ್ಯ ರಸ್ತೆ ಜಲಾವೃತವಾಗಿದೆ. ನೆರೆಪೀಡಿತ ಗ್ರಾಮಗಳ ಜನರ ವಾಸ್ತವ್ಯಕ್ಕೆ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ.

3 ಲಕ್ಷ ಕ್ಯುಸೆಕ್ ನೀರು ಬಿಡುಗಡೆ: (ಯಾದಗಿರಿ ವರದಿ): ಬಸವಸಾಗರ ಜಲಾಶಯದ 30 ಗೇಟ್ ತೆರೆದು ನಿರಂತರವಾಗಿ 3 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ಜಲಧಾರೆ ಕಣ್ಣುತುಂಬಿಕೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಶನಿವಾರ ಬಂದಿದ್ದರು.

ಎಲ್ಲೆಲ್ಲಿ ಎಷ್ಟೆಷ್ಟು ಮಳೆ

ಸ್ಥಳ	ಮಳೆ ಸೆಂ.ಮೀ
ಮಾಸ್ತಿಕಟ್ಟೆ	20.5
ಯಡೂರು	20
ಹುಲಿಕಲ್	18.6
ಮಾಣಿ	18.5
ಶಾಂತಳ್ಳಿ	18
ಬಾಳೆಲೆ	15
ಹಂತೂರು	17
ಶೃಂಗೇರಿ	16
ಸೋಮವಾರಪೇಟೆ ಪಟ್ಟಣ	14
ಸಾವೇಹಕ್ಲು	13.9
ಹುದಿಕೇರಿ	13

ಕೃಷ್ಣಾ ನದಿಯಲ್ಲಿ ಕೊಚ್ಚಿ ಹೋದ ವ್ಯಕ್ತಿ; ಹಲವು ಕಡೆ ವಾಹನ ಸಂಚಾರ ಬಂದ್

41 ಸೇತುವೆ, 700 ಮನೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ/ಹೊಸಪೇಟೆ (ವಿಜಯನಗರ): ಉತ್ತರ ಕರ್ನಾಟಕದ ಬಹುತೇಕ ಕಡೆ ಶನಿವಾರ ಮಳೆ ತುಸು ವಿರಾಮ ನೀಡಿದೆ. ಆದರೆ, ನದಿಗಳಲ್ಲಿ ನೀರಿನ ಪ್ರಮಾಣ ಏರಿಕೆಯಾಗಿದ್ದು, ನದಿ ತೀರದ ಗ್ರಾಮಗಳು ಜಲಾವೃತವಾಗಿವೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಆಲಗೂರುಗೌಡರ ಗಡ್ಡಿ ಬಳಿ ಮೇವು ತರಲು ಹೋಗಿದ್ದ ಆಲಗೂರ ಗೌಡರ ಗಡ್ಡಿಯ ಸಿದ್ದಪ್ಪ ಆಡಹಳ್ಳಿ (54) ಎಂಬುವರು ಕೃಷ್ಣಾ ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ಹೊಸಪೇಟೆಯ ತುಂಗಭದ್ರಾ ಅಣೆಕಟ್ಟೆಯ ಎಲ್ಲಾ 33 ಕ್ರಸ್ಟ್‌ಗೇಟ್‌ಗಳನ್ನು ತೆರೆದು, 1.49 ಲಕ್ಷ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಬಳ್ಳಾರಿಯ ಕಂಪ್ಲಿಯಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ. ನದಿ ದಡದಲ್ಲಿದ್ದ ಮೀನುಗಾರರ ಕುಟುಂಬಗಳನ್ನು ತೆಪ್ಪದ ನೆರವಿನೊಂದಿಗೆ ಅಗತ್ಯ ವಸ್ತುಗಳ ಸಹಿತ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಅಣೆಕಟ್ಟೆಗಳಿಂದ ನಿರಂತರ ನೀರು ಹರಿಯುತ್ತಿರುವ ಕಾರಣ ಬೆಳಗಾವಿ ಜಿಲ್ಲೆಯ 41 ಸೇತುವೆಗಳು ನೀರಿನಲ್ಲಿ ಮುಳುಗಿವೆ. 700ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ. ವೇದಗಂಗಾ, ದೂಧಗಂಗಾ ನದಿಗಳಿಂದ ನೀರು ಉಕ್ಕೇರಿದ್ದು ನಿಪ್ಪಾಣಿ ತಾಲ್ಲೂಕಿನಲ್ಲಿ 220 ಕುಟುಂಬಗಳ 427 ಜನರನ್ನು ಸ್ಥಳಾಂತರಿಸಲಾಗಿದೆ.

ಬೈಲಹೊಂಗಲ ಸಮೀಪದ ಮಾಟೊಳ್ಳಿ, ಮಲ್ಲೂರ, ಹೊಸೂರ ಗ್ರಾಮದ ಮಲಪ್ರಭಾ ನದಿ ದಡದಲ್ಲಿ ಮೊಸಳೆಗಳು ಶನಿವಾರ ಕಾಣಿಸಿವೆ.

ಬೃಂದಾವನ ಪ್ರವೇಶ ಬಂದ್

ಕೆಆರ್‌ಎಸ್ ಅಣೆಕಟ್ಟೆಯಿಂದ 1.30ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿರುವುದರಿಂದ ಶನಿವಾರದಿಂದ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಬೃಂದಾವನದ ದೋಣಿ ವಿಹಾರ ಕೇಂದ್ರ ಮತ್ತು ಸಂಗೀತ ಕಾರಂಜಿ ಮಾರ್ಗಗಳು ಮೂರು ದಿನಗಳ ಹಿಂದೆಯೇ ಜಲಾವೃತ ವಾಗಿದ್ದವು. ಹಾಗಾಗಿ ಈ ಎರಡೂ ತಾಣಗಳಿಗೆ ಪ್ರವಾಸಿಗರ ಪ್ರವೇಶವನ್ನು ನಿಷೇಧಿಸಲಾಗಿತ್ತು.



ಘಟಪ್ರಭಾ ನದಿಯಿಂದಾಗಿ ಭೋರ್ಗರೆಯುತ್ತಿರುವ ಗೋಕಾಕ ಜಲಪಾತದ ವೈಭವ ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಹೀಗೆ

ಕೊಡೆಯಡಿ ತಾಲ್ಲೂಕು ಕಚೇರಿ ಕೆಲಸ!



ನೌಕರರು ಕೊಡೆ ಹಿಡಿದು ಕೆಲಸ ಮಾಡಿದರು

ಹಾವೇರಿ: ಇಲ್ಲಿಯ ತಹಶೀಲ್ದಾರ್ ಕಚೇರಿ ಹಲವು ವರ್ಷಗಳಿಂದ ಶಿಥಿಲ ಕಟ್ಟಡದಲ್ಲೇ ಇದೆ. ಮಳೆ ಬಂತೆಂದರೆ ಸೋರುವ ಕಚೇರಿಯೊಳಗೆ ಅಧಿಕಾರಿ, ಸಿಬ್ಬಂದಿ ಕೊಡೆ ಹಿಡಿದು ಕೆಲಸ ಮಾಡಬೇಕಿದೆ!

'ಕಚೇರಿ ಸ್ಥಳಾಂತರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸೋರುವಕಡೆ ಬಕೆಟ್ ಇಡುತ್ತೇವೆ. ಕಂದಾಯ ದಾಖಲೆಗಳು ಒದ್ದೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತೇವೆ' ಎನ್ನುತ್ತಾರೆ ನೌಕರರು.

'ಶಾಸಕ ರುದ್ರಪ್ಪ ಲಮಾಣಿ ಅವರು ಕಚೇರಿಗೆ ಭೇಟಿ ನೀಡಿ, ದುರಸ್ತಿಗೆ ₹8 ಲಕ್ಷ ಅನುದಾನದ ಭರವಸೆ ನೀಡಿದ್ದರು. ಅದು ಈಡೇರಿಲ್ಲ' ಎಂದು ಅವರು ದೂರಿದರು. 'ಹಿಂದಿನ ಜಿಲ್ಲಾಧಿಕಾರಿ ರಘುನಂದಮೂರ್ತಿ ಅವರು ತಾಡಪತ್ರಿ ಹಾಕಲು ಹೇಳಿದರೆ, ಈಗಿನ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ಅವರು ತಗಡು ಹಾಕಲು ತಿಳಿಸಿದ್ದಾರೆ. ಆದರೆ, ಶಾಶ್ವತ ಪರಿಹಾರ ಸಿಕ್ಕಿಲ್ಲ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.98	1,22,021	1,31,234
ಹಾರಂಗಿ	2,859	2,855.05	11,860	12,800
ಕಬಿನಿ	2,284.00	2,282.32	33,608	35,000
ಹೇಮಾವತಿ	2,922	2,918.75	63,162	77,095
ಲಿಂಗನಮಕ್ಕಿ	1,819	1,807.00	65,147	2,908.94
ಸೂಪಾ (ಮೀ)	564	550.05	55,134	-
ಮಾಣಿ	595	584.88	10,799	-
ತುಂಗಭದ್ರಾ	1,633	1,631.68	1,19,000	1,49,000
ಮಲಪ್ರಭಾ	2,079.5	2,071.10	18,874	194
ಘಟಪ್ರಭಾ	2175	2,170.16	43,951	38,596
ಭದ್ರಾ	186	178	49,801	206
ಆಲಮಟ್ಟಿ (ಮೀ)	519.6	516.34	2,18,230	2,96,794
ನಾರಾಯಣಪುರ (ಮೀ)	492.25	488.88	3600	00

* ನೆಲಮಟ್ಟದಿಂದ

ಶಿರೂರು: ನೀರಿನ ರಭಸಕ್ಕೆ ತೇಲಿ ಹೋದ ಮುಳುಗು ತಜ್ಞ

'ನೆರವು' ನೀಡದ ಗಂಗಾವಳಿ

ಪ್ರಜಾವಾಣಿ ವಾರ್ತೆ

ಕಾರವಾರ: ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಕಾಣೆಯಾದ ಮೂವರು ಮತ್ತು ಲಾರಿ ಪತ್ತೆಗಾಗಿ ಸತತ 12ನೇ ದಿನವೂ ಕಾರ್ಯಾಚರಣೆ ಮುಂದುವರಿಯಿತು. ನದಿಯ ಆಳದಲ್ಲಿ ಸಿಲುಕಿರುವ ಲಾರಿ ಹುಡುಕಲು ಪ್ರಯತ್ನಿಸಿದ ಮುಳುಗು ತಜ್ಞರ ತಂಡಕ್ಕೆ ಮಣ್ಣು ಮತ್ತು ಕಲ್ಲು ಹೊರತುಪಡಿಸಿ ಮತ್ತೇನೂ ಗೋಚರಿಸಲಿಲ್ಲ.

ಮುಳುಗು ತಜ್ಞ ಈಶ್ವರ ಮಲ್ಪೆ ಮತ್ತು ಅವರ ತಂಡವು ನೌಕಾದಳದ ಮುಳುಗು ತಜ್ಞರು, ಎನ್‌ಡಿಆರ್‌ಎಫ್ ನೆರವಿನೊಂದಿಗೆ ಶನಿವಾರ ಕಾರ್ಯಾಚರಣೆ ನಡೆಸಲು ಯತ್ನಿಸಿತು. ಗುಡ್ಡದಿಂದ ಕುಸಿದ ಮಣ್ಣು ನದಿ ಮಧ್ಯ-ಭಾಗದಲ್ಲಿ ಶೇಖರವಾದ ಜಾಗದಲ್ಲಿ ನಿಂತು ಕಾರ್ಯಾಚರಣೆಗೆ ಯತ್ನಿಸಿದ ವೇಳೆ ತಂಡದ ಸದಸ್ಯ ದೀಪು ಎಂಬವರು ಬಿದ್ದು ಗಾಯಗೊಂಡರು. ನದಿಯ ಆಳಕ್ಕೆ ಇಳಿಯಲು ಪ್ರಯತ್ನಿಸಿದ ಈಶ್ವರ ಮಲ್ಪೆ ಅವರು ಸ್ಥಳದಿಂದ ಸುಮಾರು 80 ಮೀಟರ್ ದೂರಕ್ಕೆ ತೇಲಿ ಹೋದರು. ಅವರದ್ದೇ ತಂಡದ ಸದಸ್ಯರು, ಈಶ್ವರ ಅವರನ್ನು ರಕ್ಷಿಸಿ ಕರೆತಂದರು.



ಗಂಗಾವಳಿ ನದಿಯಲ್ಲಿ ಲಾರಿ ಪತ್ತೆ ಕಾರ್ಯಕ್ಕೆ ಮೀನುಗಾರಿಕೆ ದೋಣಿಗಳನ್ನು ಬಳಸಲಾಯಿತು

'ನೊಯ್ಡಾದಿಂದ ಬಂದಿದ್ದ ತಜ್ಞರ ತಂಡವು ನದಿಯ ನಾಲ್ಕು ವಿಭಿನ್ನ ಪ್ರದೇಶದಲ್ಲಿ ಲೋಹದ ವಸ್ತುಗಳಿರುವ ಬಗ್ಗೆ ಸ್ಥಳ ಗುರುತಿಸಿ ವರದಿ ನೀಡಿದೆ. ಇದೇ ಸ್ಥಳದಲ್ಲಿ ಮುಳುಗು ತಜ್ಞರ ತಂಡವು ಕಾರ್ಯಾಚರಣೆ ನಡೆಸಿದ್ದು, ಮೂರು ಕಡೆ ಕಲ್ಲು ಮತ್ತು ಮಣ್ಣು ಇದೆ. ನಾಲ್ಕನೇ ಸ್ಥಳದಲ್ಲಿ ಯಾವ ಕುರುಹು ಸಿಕ್ಕಿಲ್ಲ' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದರು.

'ನದಿಯಲ್ಲಿ ಸ್ಥಿರವಾಗಿ ನಿಂತು ರಕ್ಷಣಾ ಕಾರ್ಯಾಚರಣೆ ನಡೆಸಲು ತಂಡಕ್ಕೆ ಸೂಕ್ತ ಆಸರೆ ಸಿಗುತ್ತಿಲ್ಲ. ತೇಲುವ ಜಟ್ಟಿ (ಫ್ಲಟೂನ್) ತರಿಸಲು ಯತ್ನಿಸಲಾಯಿ-ತಾದರೂ ತಾಂತ್ರಿಕ ಸಮಸ್ಯೆಯಿಂದ ಅದು ಸಾಧ್ಯವಾಗಲಿಲ್ಲ. ಟಗ್ ಬೋಟ್ ತರಿಸಲು ಪ್ರಯತ್ನ ನಡೆದಿದೆ. ಅದರ ನೆರವಿನೊಂದಿಗೆ ನದಿಯಲ್ಲಿ ರಕ್ಷಣಾ ಕಾರ್ಯಾಚರಣೆಗೆ ಅನುಕೂಲವಾ-ಗಬಹುದು ಎಂಬ ನಿರೀಕ್ಷೆ ಇದೆ. ಭಾನುವಾರವೂ ಕಾರ್ಯಾಚರಣೆ ಮುಂದುವರಿಯಲಿದೆ' ಎಂದರು.

ತಹಶೀಲ್ದಾರ್ ಅಮಾನತು

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಬಗ್ಗಲಗುಡ್ಡ ಗ್ರಾಮದ ಅರಣ್ಯ ಸಂರಕ್ಷಿತ ಪ್ರದೇಶವನ್ನು ಖಾಸಗಿ ವ್ಯಕ್ತಿಗಳಿಗೆ ಕಾನೂನು ಬಾಹಿರವಾಗಿ ಮಂಜೂರು ಮಾಡಿ ಪಟ್ಟಾ ಮಾಡಿಕೊಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್ ಸುಧಾ ಅರಮನೆ ಅವರನ್ನು ಕಂದಾಯ ಇಲಾಖೆ ಶನಿವಾರ ಅಮಾನತುಗೊಳಿಸಿದೆ. ಗ್ರೇಡ್ 1ನಿಂದ ಗ್ರೇಡ್ 2ಗೆ ಹಿಂಬಡ್ತಿಯನ್ನೂ ಮಾಡಿದೆ. ತಹಶೀಲ್ದಾರ್ ಕಚೇರಿ ಸಿಬ್ಬಂದಿ ಅರುಣಕುಮಾರ ಎಂಬುವರನ್ನು ಅಮಾನತು ಗೊಳಿಸಿದೆ. ಅರಣ್ಯ ಇಲಾಖೆಗೆ ಸೇರಿದ 442 ಎಕರೆ ಜಮೀನಿನಲ್ಲಿ 16 ಎಕರೆ ಭೂಮಿಯನ್ನು ಅದೇ ಗ್ರಾಮದ 8 ವ್ಯಕ್ತಿಗಳಿಗೆ ಮಂಜೂರು ಮಾಡಿ ಪಟ್ಟಾ ಮಾಡಿಕೊಟ್ಟಿದ್ದರಿಂದ ಲಿಂಗಸುಗೂರು ಆರ್‌ಎಫ್‌ಒ ವಿದ್ಯಾಶ್ರೀ ದೊಡ್ಡಮನಿ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. '16 ಎಕರೆ ಸಂರಕ್ಷಿತ ಅರಣ್ಯ ಭೂಮಿ ಖಾಸಗಿ ವ್ಯಕ್ತಿಗಳಿಗೆ ಪಟ್ಟಾ' ಶೀರ್ಷಿಕೆ ಅಡಿಯಲ್ಲಿ ಕಳೆದ ಜೂನ್ 25ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.



ಸುಧಾ ಅರಮನೆ

ನಿವೇಶನ ಹಂಚಿಕೆ: ಎಸ್‌ಐಟಿ ತನಿಖೆಗೆ ಒತ್ತಾಯ

ಮೈಸೂರು: 'ಮುಡಾದಲ್ಲಿ ವಿರೋಧ ಪಕ್ಷದ ನಾಯಕರಿಗೆ ನಿವೇಶನ ಹಂಚಿಕೆ ಮಾಡಿರುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಪಟ್ಟಿ ಬಿಡುಗಡೆ ಮಾಡಿದ್ದು, ಆ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ಒಳಪಡಿಸಬೇಕು' ಎಂದು ಜೆಡಿಎಸ್ ಮುಖಂಡ ಸಾ.ರಾ. ಮಹೇಶ್ ಒತ್ತಾಯಿಸಿದರು.

'ಸಚಿವರು ಆರೋಪಿಸಿರುವಂತೆ ನಾನು ಹಾಗೂ ನನ್ನ ಕುಟುಂಬ ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದಿಲ್ಲ. ನಿವೇಶನಕ್ಕಾಗಿ ಶಿಫಾರಸು ಮಾಡಿಲ್ಲ. ಅದಕ್ಕೆ ದಾಖಲೆ ಕೊಟ್ಟರೆ ಅಷ್ಟೂ ನಿವೇಶನಗಳನ್ನು ಹಿಂತಿರುಗಿಸು-ತ್ತೇವೆ. ರೇವಣ್ಣ ಪ್ರಕರಣದಲ್ಲಿ ಒಂದೇ ದಿನದಲ್ಲಿ ಎಸ್‌ಐಟಿ ರಚಿಸಿದಂತೆ ಈ ಪ್ರ-ಕರಣದಲ್ಲೂ ತ್ವರಿತ ತನಿಖೆ ನಡೆಸಬೇಕು' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

'ಮಾನನಷ್ಟ ಮೊಕದ್ದಮೆ ಎಚ್ಚರಿಕೆ': 'ಮುಡಾದಿಂದ ನಾನು ಯಾವುದೇ ನಿವೇಶನ ಪಡೆದಿಲ್ಲ. ಆರೋಪ ಮಾಡಿರುವ ಸಚಿವ ಭೈರತಿ ಸುರೇಶ್‌ಗೆ ಪತ್ರ ಬರೆದು, ನನ್ನ ಹೆಸರಿಗೆ ಕಳಂಕ ತಂದಿರುವುದಕ್ಕೆ ಕಾರಣ ಕೇಳುತ್ತೇನೆ. ಒಂದು ವಾರದೊಳಗೆ ಉತ್ತರಿಸದಿದ್ದ-ರೆ, ಮಾನನಷ್ಟ ಮೊಕದ್ದಮೆ ಹೂಡುವೆ' ಎಂದು ಶಾಸಕ ಜಿ.ಟಿ. ದೇವೇಗೌಡ ಎಚ್ಚರಿಸಿದರು.

ಭಾನುವಾರದ ಪುರವಣಿ ಓದಿ

ನೇಮಕಾತಿಯಲ್ಲಿ ಅಗ್ನಿವೀರರಿಗೆ ಮೀಸಲಾತಿ

ಇಟಾನಗರ (ಪಿಟಿಐ): 'ಅಗ್ನಿವೀರ'ರಿಗೆ ಅರುಣಾಚಲ ಪ್ರದೇಶ, ರಾಜಸ್ಥಾನ ಸರ್ಕಾರಗಳು ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಮೀಸಲಾತಿ ನೀಡಲು ನಿರ್ಧರಿಸಿವೆ.

'ಅರುಣಾಚಲ ಪ್ರದೇಶ ಸರ್ಕಾರವು 'ಅಗ್ನಿಪಥ' ಯೋಜನೆ ಅಡಿಯಲ್ಲಿ ಸೇರ್ಪಡೆಯಾಗಲು ಬಯಸುವ ಯುವಕರಿಗೆ ತರಬೇತಿ ನೀಡಲಿದ್ದು, ಅಗ್ನಿಶಾಮಕ ಸೇವೆ, ಪೊಲೀಸ್ ಇಲಾಖೆಯಲ್ಲಿ ಆದ್ಯತೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಪೆಮಾ ಖಂಡು ಘೋಷಿಸಿದರು.

'ನೇಮಕಾತಿಗಳಲ್ಲಿ ಅಗ್ನಿವೀರರಿಗೆ ಮೀಸಲಾತಿ ನೀಡಲಾಗುವುದು' ಎಂದು ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಘೋಷಿಸಿದರು.

ಅಮೆರಿಕ ಕಂಪನಿ ಆ್ಯಕ್ಸಿಯಮ್, ಇಸ್ರೊ ನಡುವೆ ಒಪ್ಪಂದ: ಸಚಿವ ಜಿತೇಂದ್ರ ಸಿಂಗ್

'ಬಾಹ್ಯಾಕಾಶ ನಿಲ್ದಾಣಕ್ಕೆ ಭಾರತದ ಯಾನಿ'

ನವದೆಹಲಿ(ಪಿಟಿಐ): ಭಾರತದ ಮಹತ್ವಾಕಾಂಕ್ಷೆಯ ಮಾನವಸಹಿತ ಗಗನಯಾನಕ್ಕೆ ಆಯ್ಕೆಯಾಗಿ ತರಬೇತಿ ಪಡೆಯುತ್ತಿರುವ ನಾಲ್ವರ ಪೈಕಿ, ಒಬ್ಬ ಗಗನಯಾತ್ರಿ ನಾಸಾ ಸಹಯೋಗದಲ್ಲಿ ಅಂತರ-ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಪಯಣಿಸಲಿದ್ದಾರೆ.


ಜಿತೇಂದ್ರ ಸಿಂಗ್

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಯಾನ ಕೈಗೊಳ್ಳುವ ಈ ಜಂಟಿ ಯೋಜನೆಗಾಗಿ, ಅಮೆರಿಕ ಬಾಹ್ಯಾಕಾಶ ಸಂಸ್ಥೆ ನಾಸಾ, ಆ್ಯಕ್ಷಿಯಮ್ ಸ್ಪೇಸ್ ಎಂಬ ಖಾಸಗಿ ಕಂಪನಿಯನ್ನು ಆಯ್ಕೆ ಮಾಡಿದೆ. ಈ ಕಂಪನಿಯೊಂದಿಗೆ ಇಸ್ರೊ ಒಪ್ಪಂದ ಮಾಡಿಕೊಂಡಿದೆ.

ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಯಲ್ಲಿ ಈ ಕುರಿತು ಮಾಹಿತಿ ನೀಡಿದ್ದಾರೆ.

'ಐಎಸ್‌ಎಸ್‌ಗೆ ಭಾರತೀಯ ಗಗನ ಯಾನಿಯನ್ನು ಕಳುಹಿಸುವ ಕುರಿತು ಕಳೆದ ವರ್ಷ ಅಮೆರಿಕಕ್ಕೆ ಭೇಟಿ ನೀಡಿದ್ದ ವೇಳೆ ಪ್ರಧಾನಿ ನರೇಂದ್ರ ಮೋದಿ ಚರ್ಚಿಸಿದ್ದರು. 2024ರಲ್ಲಿ ಭಾರತೀಯ ಗಗನಯಾನಿಯನ್ನು ಐಎಸ್‌ಎಸ್‌ಗೆ ಕಳುಹಿಸುವುದಾಗಿ ಅಧ್ಯಕ್ಷ ಜೋ ಬೈಡನ್ ಘೋಷಿಸಿದ್ದರು' ಎಂದು ಸಚಿವ ಸಿಂಗ್ ಅವರು ತಿಳಿಸಿದ್ದಾರೆ.

ಗಗನಯಾನ: ಲೋಕಸಭೆಗೆ ನೀಡಿರುವ ಮಾಹಿತಿ

- ನಾಲ್ವರು ಪೈಲಟ್‌ಗಳಿಗೆ ರಷ್ಯಾದಲ್ಲಿ ಪ್ರಾಥಮಿಕ ಹಂತದ ತರಬೇತಿ ಪೂರ್ಣಗೊಂಡಿದ್ದು, ಪ್ರಸ್ತುತ, ಬೆಂಗಳೂರಿನ ಎಟಿಎಫ್‌ನಲ್ಲಿ ತರಬೇತಿ ನೀಡಲಾಗುತ್ತಿದೆ
- ಗಗನಯಾನಕ್ಕೆ ಸಂಬಂಧಿಸಿದ ಪ್ರೊಪಲ್ಷನ್ ಸಿಸ್ಟಮ್‌ಗಳ ಎಲ್ಲ ಹಂತದ ಪರೀಕ್ಷೆಗಳು ಪೂರ್ಣಗೊಂಡಿವೆ
- ಗಗನಯಾನದ ರಾಕೆಟ್ ಬಾಹ್ಯಾಕಾಶಕ್ಕೆ ಯಾನ ಮಾಡುವ ಸಂದರ್ಭದಲ್ಲಿ ಅವಘಡಕ್ಕೆ ತುತ್ತಾದರೆ, ಗಗನಯಾನಿಗಳು ಅಲ್ಲಿಂದ ಪಾರಾಗಲು ಅಗತ್ಯವಿರುವ ಐದು ವಿಧದ 'ಕ್ರೂ ಎಸ್ಕೇಪ್ ಸಿಸ್ಟಮ್'ಗೆ ಬೇಕಾದ ಯಂತ್ರಗಳ ವಿನ್ಯಾಸ, ಪರೀಕ್ಷೆ ಮುಕ್ತಾಯವಾಗಿದೆ
- ಅವಘಡ ಸಂದರ್ಭದಲ್ಲಿ ಗಗನಯಾನಿಗಳು ಪಾರಾಗುವ ಪ್ರಾತ್ಯಕ್ಷಿಕೆಯನ್ನು ಯಶಸ್ವಿಯಾಗಿ ಪೂರೈಸಲಾಗಿದೆ
- ಮಿಷನ್ ಕಂಟ್ರೋಲ್ ಸೆಂಟರ್ (ಎಂಸಿಸಿ) ಹಾಗೂ 'ಗ್ರೌಂಡ್ ಸ್ಟೇಷನ್' ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದೆ

ಪಿಂಚಣಿ ನೌಕರನ ಹಕ್ಕು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪಿಂಚಣಿಯು ನೌಕರನಿಗೆ ನಿವೃತ್ತಿ ನಂತರದಲ್ಲಿ ಸಿಗುವ ಹಕ್ಕು; ಅದು ಉದಾರ ಕೊಡುಗೆ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಸಂಬಂಧಪಟ್ಟ ನಿಯಮಗಳು ಅಥವಾ ಯೋಜನೆಯ ಅಡಿಯಲ್ಲಿ ಅವಕಾಶ ಇದ್ದರೆ ಮಾತ್ರ ಪಿಂಚಣಿಯನ್ನು ಕೇಳಬಹುದು ಎಂದು ಅದು ಸ್ಪಷ್ಟಪಡಿಸಿದೆ.

'ನೌಕರನೊಬ್ಬ ಪಿಂಚಣಿಗೆ ಅರ್ಹವಾಗಿರುವ ಹುದ್ದೆಯನ್ನು ಹೊಂದಿರದೆ ಇದ್ದರೆ ಆತ ಪಿಂಚಣಿ ಕೇಳಲು ಅವಕಾಶ ಇಲ್ಲ. ನಿಯಮಗಳ ಅಡಿಯಲ್ಲಿ ಪಿಂಚಣಿಯ ವ್ಯಾಪ್ತಿಯಲ್ಲಿ ಇಲ್ಲದ ನೌಕರನಿಗೆ ಪಿಂಚಣಿ ಕೊಡುವಂತೆ ಕೋರ್ಟ್ ಕೂಡ ಹೇಳಲಾಗದು' ಎಂದು ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರು ಇದ್ದ ವಿಭಾಗೀಯ ನ್ಯಾಯಪೀಠವು ಹೇಳಿದೆ.

ಉತ್ತರ ಪ್ರದೇಶ ರಸ್ತೆಸಾರಿಗೆ ನಿವೃತ್ತ ಅಧಿಕಾರಿಗಳ ಸಂಘ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, ಈ ಮಾತು ಹೇಳಿದೆ.

ಬೇರೆ ಅರ್ಜಿಗಳ ವಿಚಾರಣೆ ನಡೆಸಿರುವ ಪೀಠವು, ಉತ್ತರ ಪ್ರದೇಶ ರಾಜ್ಯ ರಸ್ತೆಸಾರಿಗೆ ನಿಗಮದಲ್ಲಿ ವಿಲೀನಗೊಂಡ, ಹಿಂದೆ ಸರ್ಕಾರದ ನೌಕರರಾಗಿದ್ದವರು ಪಿಂಚಣಿಗೆ ಅರ್ಹರು ಎಂದು ಹೇಳಿದೆ.

'ಇವರ ಸೇವಾ ಷರತ್ತುಗಳು ಸರ್ಕಾರದ ಅಧೀನದಲ್ಲಿ ಇದ್ದಾಗಿನ ಷರತ್ತುಗಳಿಗಿಂತ ಕಡಿಮೆ ಆಗಿರುವಂತಿಲ್ಲ' ಎಂಬ ಮಾತು ಪಿಂಚಣಿಯನ್ನು ನೀಡುವುದಕ್ಕೆ ಅನ್ವಯವಾಗುತ್ತದೆ ಎಂದು ಪೀಠ ಹೇಳಿದೆ. ಆದರೆ, ನಿಗಮದಲ್ಲಿ ವಿಲೀನ ಆಗುವ ಮೊದಲು ಪಿಂಚಣಿಗೆ ಅರ್ಹವಾದ ಹುದ್ದೆಯನ್ನು ಹೊಂದಿರದೆ ಇದ್ದರೆ, ಅಂಥವರಿಗೆ ಪಿಂಚಣಿ ಸಿಗುವುದಿಲ್ಲ ಎಂದು ನ್ಯಾಯಪೀಠ ಹೇಳಿದೆ.

ವ್ಯಕ್ತಿಗತ ನೆಲೆಯಲ್ಲಿ ಬಡತನ ನಿರ್ಮೂಲನೆ ಅಗತ್ಯ: ಮೋದಿ



ನವದೆಹಲಿಯಲ್ಲಿ ಶನಿವಾರ ನಡೆದ ನೀತಿ ಆಯೋಗದ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು —ಪಿಟಿಐ ಚಿತ್ರ

ನವದೆಹಲಿ(ಪಿಟಿಐ): ಬಡತನ ನಿರ್ಮೂಲನೆಗಾಗಿ ನಡೆಸುವ ಪ್ರಯತ್ನಗಳು ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗದೇ, ವ್ಯಕ್ತಿಗತ ನೆಲೆಯಲ್ಲಿ ಕಾರ್ಯಗತಗೊಳ್ಳುವುದು ಅಗತ್ಯ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಪ್ರತಿಪಾದಿಸಿದ್ದಾರೆ.

ನೀತಿ ಆಯೋಗದ 9ನೇ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, 'ವಿಕಸಿತ ಭಾರತ ನನಸಾಗಬೇಕಾದರೆ ಬಡತನವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ನಮ್ಮ ಗುರಿಯಾಗಬೇಕು. ಈ ಪ್ರಯತ್ನ ಗ್ರಾಮ ಮಟ್ಟದಿಂದ ಆರಂಭವಾಗಬೇಕು' ಎಂದೂ ಹೇಳಿದ್ದಾರೆ.

ಸಭೆಯಲ್ಲಿ ಚರ್ಚೆಯಾದ ವಿಷಯಗಳ ಕುರಿತು, ಆಯೋಗದ ಸಿಇಒ ಬಿ.ವಿ. ಆರ್.ಸುಬ್ರಹ್ಮಣ್ಯಂ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಆಯೋಗದ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ. ಇದು ಅವರಿಗಾದ ನಷ್ಟ' ಎಂದರು.

'ರಾಜ್ಯಗಳು ಹೂಡಿಕೆ ಸ್ನೇಹಿ ವಾತಾವರಣ ನಿರ್ಮಿಸಬೇಕು. ಈ ಸಂಬಂಧ 'ಹೂಡಿಕೆ ಸ್ನೇಹಿ ಸನ್ನದು' ಸಿದ್ಧಪಡಿಸುವಂತೆ ಪ್ರಧಾನಿಯವರು ಆಯೋಗಕ್ಕೆ ನಿರ್ದೇಶನ ನೀಡಿದರು' ಎಂದು ಸುಬ್ರಹ್ಮಣ್ಯಂ ತಿಳಿಸಿದರು.

'ವಿದೇಶಿ ನೇರ ಬಂಡವಾಳ ಆಕರ್ಷಿಸಲು ರಾಜ್ಯಗಳ ನಡುವೆ ಪೈಪೋಟಿ ಇರಬೇಕು. ಇದರಿಂದ ಎಲ್ಲ ರಾಜ್ಯಗಳಿಗೆ ಹೂಡಿಕೆಗಳು ಹರಿದುಬರಲಿವೆ ಎಂಬುದಾಗಿ ಪ್ರಧಾನಿ ಹೇಳಿದರು' ಎಂದು ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ ಹೇಳಿದರು.

ಪ್ರಧಾನಿ ಮೋದಿ ಸೂಚನೆಗಳು:

- ಹೂಡಿಕೆ ಆಕರ್ಷಿಸಲು ಉತ್ತೇಜನಕಾರಿ ಕ್ರಮಗಳಿಗಿಂತ ಕಾನೂನು–ಸುವ್ಯವಸ್ಥೆ, ಉತ್ತಮ ಆಡಳಿತ ಹಾಗೂ ಮೂಲಸೌಕರ್ಯಗಳಿಗೆ ಮಹತ್ವ ಇದೆ
- ಜಲ ಸಂಪನ್ಮೂಲಗಳ ಬಳಕೆಗೆ ರಾಜ್ಯಗಳ ಮಟ್ಟದಲ್ಲಿ 'ನದಿಗಳ ಗ್ರಿಡ್' ಸ್ಥಾಪಿಸಬೇಕು
- ಅಭಿವೃದ್ಧಿಗೆ ಪೂರಕವಾದ ನೀತಿ ನಿರೂಪಣೆ ಹಾಗೂ ಆಡಳಿತಾತ್ಮಕ ಸುಧಾರಣೆಗೆ ರಾಜ್ಯಗಳು ಒತ್ತು ನೀಡಬೇಕು
- ಯುವ ಜನತೆ ತರಬೇತಿ ಮತ್ತು ಕೌಶಲ ವೃದ್ಧಿಗೆ ಗಮನ ಹರಿಸಬೇಕು.
- ಕೃಷಿ ಉತ್ಪಾದನೆ ಹೆಚ್ಚಳ ಹಾಗೂ ವೈವಿಧ್ಯತೆಗೆ ಒತ್ತು ನೀಡಬೇಕು.

ಸಭೆಯಿಂದ ಹೊರನಡೆದ ಮಮತಾ

ಒಂದನೇ ಪುಟದಿಂದ...

ಮಮತಾ ಬ್ಯಾನರ್ಜಿ ದೂರು ಏನು?: ನೀತಿ ಆಯೋಗದ ಆಡಳಿತ ಮಂಡಳಿಯ 9ನೇ ಸಭೆಯಿಂದ ಹೊರ ಬಂದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಮತಾ, 'ಯೋಜನಾ ಆಯೋಗವನ್ನು ಮರುಸ್ಥಾಪಿಸುವಂತೆ ಸಭೆಯಲ್ಲಿ ಹೇಳಿದೆ. ಈ ಕಾರಣಕ್ಕಾಗಿ ನನ್ನ ಮಾತು ಪೂರ್ಣಗೊಳಿಸಲು ಅವಕಾಶ ನೀಡಲಿಲ್ಲ' ಎಂದು ಹೇಳಿದರು.

'ನೀತಿ ಅಯೋಗಕ್ಕೆ ಹಣಕಾಸು ವಿಷಯವಾಗಿ ಯಾವುದೇ ಅಧಿಕಾರ ಇಲ್ಲ. ಆಯೋಗಕ್ಕೆ ವಿತ್ತೀಯ ಅಧಿಕಾರ ನೀಡಿ, ಇಲ್ಲವೇ ಈ ಹಿಂದಿನ ಯೋಜನಾ ಆಯೋಗವನ್ನೇ ಮರುಸ್ಥಾಪಿಸಿ ಎಂಬ ಬೇಡಿಕೆ ಮಂಡಿಸಿದೆ' ಎಂದು ಹೇಳಿದರು.

'ನನಗಾದ ಅನ್ಯಾಯ ಖಂಡಿಸಿ ಸಭೆಯನ್ನು ಬಹಿಷ್ಕರಿಸಿ, ಹೊರ ಬಂದೆ. ಅಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಮಾತನಾಡಲು 20 ನಿಮಿಷ ನೀಡಲಾಗಿತ್ತು. ಅಸ್ಸಾಂ, ಗೋವಾ, ಛತ್ತೀಸಗಢ ಮುಖ್ಯಮಂತ್ರಿಗಳು 10–12 ನಿಮಿಷ ಮಾತನಾಡಿದರು. ನಾನು ಮಾತನಾಡಲು ಶುರು ಮಾಡಿದ 5 ನಿಮಿಷಗಳ ನಂತರ, ಮೈಕ್ ಬಂದ್ ಮಾಡಲಾಯಿತು' ಎಂದು ಹೇಳಿದರು.

'ಕೇಂದ್ರ ಸರ್ಕಾರ ವಿಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆಯಲ್ಲೂ ತಾರತಮ್ಯ ಮಾಡುತ್ತಿದೆ. ಬೇರೆ ಕೆಲ ರಾಜ್ಯಗಳಿಗೆ ವಿಶೇಷ ಪ್ಯಾಕೇಜ್ ನೀಡಿದರೆ ನನಗೆ ಏನೂ ಸಮಸ್ಯೆ ಇಲ್ಲ. ಆದರೆ, ಇತರ ರಾಜ್ಯಗಳ ಕುರಿತು ತಾರತಮ್ಯ ಮಾಡುತ್ತೀರಿ ಏಕೆ ಎಂಬುದಾಗಿ ಪ್ರಶ್ನಿಸಿದೆ' ಎಂದರು.

'ನಾನು ಸಭೆಗೆ ಹಾಜರಾಗಿದ್ದೇನೆ. ಅದಕ್ಕೆ ಸಂತೋಷಪಡಿ. ಇದು ಪಶ್ಚಿಮ ಬಂಗಾಳಕ್ಕೆ ಮಾತ್ರವಲ್ಲ, ಎಲ್ಲ ಪ್ರಾದೇಶಿಕ ಪಕ್ಷಗಳಿಗೆ ಮಾಡಿರುವ ಅವಮಾನ ಎಂದು ಸಭೆಯಲ್ಲಿ ಹೇಳಿದೆ' ಎಂದು ಹೇಳಿದರು.

'ಮಾತು ನಿಲ್ಲಿಸುವಂತೆ ನನಗೆ ಸೂಚಿಸಲು ಅವರು ಪದೇಪದೇ ಗಂಟೆ ಬಾರಿಸುತ್ತಿದ್ದರು' ಎಂದೂ ಆರೋಪಿಸಿದರು.

ಬಹಿಷ್ಕಾರ: ಕೇಂದ್ರ ಬಜೆಟ್‌ನಲ್ಲಿ ಮಾಡಿರುವ ತಾರತಮ್ಯ ಖಂಡಿಸಿ ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸುವುದಾಗಿ ಮೊದಲು ಘೋಷಿಸಿದ್ದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್. ನಂತರ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣದ ಎ.ರೇವಂತ ರೆಡ್ಡಿ ಹಾಗೂ ಹಿಮಾಚಲ ಪ್ರದೇಶದ ಸುಖ್ವಿಂದರ್ ಸಿಂಗ್ ಸುಖು ಅವರು ಸಹ ಸಭೆ ಬಹಿಷ್ಕರಿಸುವುದಾಗಿ ಘೋಷಿಸಿದ್ದರು.

ಜಾರ್ಖಂಡ ಮುಖ್ಯಮಂತ್ರಿ ಹೇಮಂತ್ ಸೊರೇನ್, ಪಂಜಾಬ್‌ನ ಭಗವಂತ ಮಾನ್ ಹಾಗೂ ಕೇರಳದ ಪಿಣರಾಯಿ ವಿಜಯನ್ ಸಹ ಸಭೆಯಿಂದ ದೂರ ಉಳಿದಿದ್ದರು.

'ಮಮತಾ ನಡೆ ಪೂರ್ವನಿರ್ಧರಿತ'

ನೀತಿ ಆಯೋಗದ ಸಭೆ ಬಹಿಷ್ಕರಿಸಿ, ಹೊರನಡೆದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಡೆ ಪೂರ್ವನಿರ್ಧರಿತ ಹಾಗೂ ಪ್ರಚಾರ ಪಡೆಯುವ ತಂತ್ರವಾಗಿದೆ ಎಂದು ಬಿಜೆಪಿ ಟೀಕಿಸಿದೆ.

'ನಮ್ಮ ದೇಶದಲ್ಲಿ ಮಾಧ್ಯಮಗಳಲ್ಲಿ ಪ್ರಚಾರ ಪಡೆಯುವುದು ತುಂಬಾ ಸುಲಭ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದ್ದಾರೆ.

'ವಿಪಕ್ಷಗಳ ಮುಖ್ಯಮಂತ್ರಿಗಳಲ್ಲಿ ಸಭೆಗೆ ನಾನು ಮಾತ್ರ ಹಾಜರಾಗಿರುವೆ ಎಂದು ಮೊದಲು ಹೇಳಬೇಕು. ಸಭೆಯಿಂದ ಹೊರ ಬಂದು, ನನ್ನ ಮೈಕ್ ಬಂದ್ ಮಾಡಿದ್ದರಿಂದ ಸಭೆಯನ್ನು ಬಹಿಷ್ಕರಿಸಿದೆ ಎನ್ನಬೇಕು. ಆಗ, ಇಡೀ ದಿನ ಟಿವಿಗಳಲ್ಲಿ ಇದೇ ಸುದ್ದಿ ಪ್ರಸಾರವಾಗುತ್ತದೆ. ಯಾವುದೇ ಕೆಲಸ ಇಲ್ಲ, ಚರ್ಚೆ ಇಲ್ಲ. ಇದು ದೀದಿ ಕಾರ್ಯವೈಖರಿ' ಎಂದು ಟೀಕಿಸಿದ್ದಾರೆ.

'ಆಡಳಿತಕ್ಕೆ ಸಂಬಂಧಿಸಿದ ಗಂಭೀರ ವಿಷಯಗಳನ್ನು ಮುಖ್ಯಮಂತ್ರಿಯೊಬ್ಬರು ನಾಟಕೀಯತೆ ಮಟ್ಟಕ್ಕೆ ಇಳಿಸಿರುವುದು ದುಃಖದ ಸಂಗತಿ' ಎಂದು ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಿತೀಶ್ ಗೈರು

ನವದೆಹಲಿ: ಎನ್‌ಡಿಎ ಅಂಗಪಕ್ಷವಾದ ಜೆಡಿಯುನ ಮುಖ್ಯಸ್ಥ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶನಿವಾರ ನಡೆದ ನೀತಿ ಆಯೋಗದ ಸಭೆಗೆ ಗೈರಾಗಿದ್ದರು.

ಬಿಹಾರ ಉಪಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯಕುಮಾರ್ ಸಿನ್ಹಾ ಆಯೋಗದ ಸಭೆಯಲ್ಲಿ ಪಾಲ್ಗೊಂಡಿದ್ದರು.

ಆದರೆ, ಜಾರ್ಖಂಡ್ ಚುನಾವಣೆ ಕುರಿತು ಚರ್ಚಿಸಲು ಪಟ್ನಾದ ತಮ್ಮ ನಿವಾಸದಲ್ಲಿ ಪಕ್ಷದ ಸಭೆ ನಡೆಸಿದರು.

> **ದೇಶದ ಅಭಿವೃದ್ಧಿ ಕುರಿತು ಚರ್ಚಿಸುವ ನೀತಿ ಆಯೋಗದ ಸಭೆಗೆ ರಾಜ್ಯ ಸರ್ಕಾರಗಳು ತಮ್ಮ ಸಂಪೂರ್ಣ ಬೆಂಬಲ ನೀಡಬೇಕು. ಈ ರೀತಿಯ ರಾಜಕಾರಣ ನಡೆಯಬಾರದು**
> **ಅರ್ಜುನ್ ರಾಮ್ ಮೇಘವಾಲ್**
> ಕೇಂದ್ರ ಸಚಿವ

> ಒಬ್ಬ ಮುಖ್ಯಮಂತ್ರಿಯನ್ನು ನಡೆಸಿಕೊಳ್ಳುವ ರೀತಿಯೇ ಇದು? ವಿರೋಧ ಪಕ್ಷಗಳು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗ ಎಂಬುದನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ವಿಪಕ್ಷಗಳ ನಾಯಕರ ದನಿ ಅಡಗಿಸುವುದಕ್ಕಾಗಿ ಅವರನ್ನು ಶತ್ರುಗಳಂತೆ ನೋಡಬಾರದು
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

> ಮಮತಾ ಬ್ಯಾನರ್ಜಿ ಅವರೊಂದಿಗೆ ಕೇಂದ್ರ ಸರ್ಕಾರ ನಡೆದುಕೊಂಡ ರೀತಿಯನ್ನು ಒಪ್ಪಲಾಗದು. ಹತ್ತು ವರ್ಷಗಳ ಹಿಂದೆ ರಚನೆಯಾದ ನೀತಿ ಆಯೋಗ ಸದ್ಯ ಪ್ರಧಾನಿ ಕಚೇರಿಯ ಭಾಗವೇ ಆಗಿದೆ.
> ಒಕ್ಕೂಟ ವ್ಯವಸ್ಥೆಯ ಆಶಯವನ್ನು ಸಾಕಾರಗೊಳಿಸುವಲ್ಲಿ ಆಯೋಗ ವಿಫಲವಾಗಿದೆ
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಹಲವು ರಾಜ್ಯಗಳ ಮುಖ್ಯಮಂತ್ರಿಗಳು ನೀತಿ ಆಯೋಗದ ಸಭೆಯನ್ನು ಬಹಿಷ್ಕರಿಸಿರುವುದು ಸರಿಯಾಗಿಯೇ ಇದೆ. ಕೇಂದ್ರ ಸರ್ಕಾರ ಕೆಲ ಕ್ರಮಗಳು ಇಂತಹ ನಿರ್ಧಾರಕ್ಕೆ ಕಾರಣ
> **ಡಿ.ರಾಜಾ,** ಸಿಪಿಐ ಪ್ರಧಾನ ಕಾರ್ಯದರ್ಶಿ

ಬಜೆಟ್: ಡಿಎಂಕೆ ಪ್ರತಿಭಟನೆ

ಚೆನ್ನೈ (ಪಿಟಿಐ): ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ತಮಿಳುನಾಡಿಗೆ ಅನ್ಯಾಯ ಮಾಡಿದೆ ಎಂದು ದೂರಿ ಡಿಎಂಕೆ ಕಾರ್ಯಕರ್ತರು, ರಾಜ್ಯದಾದ್ಯಂತ ಶನಿವಾರ ಪ್ರತಿಭಟನೆ ನಡೆಸಿದರು.

ಮೆಟ್ರೊ ರೈಲು ಎರಡನೇ ಹಂತ ಸೇರಿದಂತೆ ತಮಿಳುನಾಡಿನ ವಿವಿಧ ಯೋಜನೆಗಳಿಗೆ ಅನುದಾನ ನೀಡದಿರುವುದನ್ನು ಪ್ರಶ್ನಿಸಿದ ಸಂಸದರು ಹಾಗೂ ಪಕ್ಷದ ಮುಖಂಡರು ಕೇಂದ್ರದ ನಿಲುವಿನ ವಿರುದ್ಧ ಕಿಡಿಕಾರಿದರು. ಧಿಕ್ಕಾರದ ಘೋಷಣೆಗಳನ್ನು ಹಾಕಿದರು.

ತಮಿಳುನಾಡಿನ ತೆರಿಗೆ ಎಲ್ಲಿಗೆ ಹೋಯಿತು? ಕೇಂದ್ರದಿಂದ ತಮಿಳುನಾಡಿಗೆ ದೊರೆಯುತ್ತಿರುವುದು ಶೂನ್ಯ ಎನ್ನುವ ಪ್ರತಿಭಟನಾ ಬರಹವುಳ್ಳ ಫಲಕಗಳನ್ನು ಥೇಣಿಯಲ್ಲಿ ನಡೆದ ಪ್ರತಿಭನೆಯಲ್ಲಿ ಕಾರ್ಯಕರ್ತರು ಪ್ರದರ್ಶಿಸಿದರು.

ಡಿಎಂಕೆ ಸಂಸದರಾದ ಟಿ.ಆರ್. ಬಾಲು, ಕನಿಮೊಳಿ, ದಯಾನಿಧಿ ಮಾರನ್ ಅವರು ರಾಜ್ಯದ ವಿವಿಧೆಡೆ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸ್ಯಾಡೊ ಗಣಿಗೆ ಯುನೆಸ್ಕೊ ಮನ್ನಣೆ

ಟೋಕಿಯೊ (ಎಪಿ): ಯುನೆಸ್ಕೊ ವಿಶ್ವ ಪಾರಂಪರಿಕ ಸಮಿತಿಯು ಜಪಾನ್‌ನ ಸ್ಯಾಡೊ ದ್ವೀಪದಲ್ಲಿರುವ ವಿವಾದಾತ್ಮಕ ಚಿನ್ನದ ಗಣಿಯನ್ನು ಸಾಂಸ್ಕೃತಿಕ ಪಾರಂಪರಿಕ ತಾಣವಾಗಿ ನೋಂದಾಯಿಸಲು ಶನಿವಾರ ನಿರ್ಧಾರ ತೆಗೆದುಕೊಂಡಿದೆ.

ಈ ಗಣಿಯಲ್ಲಿ ಎರಡನೇ ವಿಶ್ವಸಮರದಲ್ಲಿ ಕೊರಿಯಾದ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಿದ ಕರಾಳ ಇತಿಹಾಸದ ಚಿತ್ರಣವನ್ನು ಪ್ರದರ್ಶಿಸಲು ಜಪಾನ್ ಒಪ್ಪಿದ ನಂತರ ಸಮಿತಿಯು ಈ ನಿರ್ಧಾರ ತೆಗೆದುಕೊಂಡಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ನಡುವಿನ ಸಂಬಂಧಗಳಲ್ಲಿ ಆಗಿರುವ ಸುಧಾರಣೆಯನ್ನು ಈ ನಿರ್ಧಾರ ಸೂಚಿಸುತ್ತದೆ.

ಪಾರಂಪರಿಕ ತಾಣದ ಪಟ್ಟಿಗೆ ನೆಲ್ಸನ್ ಮಂಡೇಲಾಗೆ ಸಂಬಂಧಿಸಿದ ಸ್ಥಳಗಳು: ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟ ಮತ್ತು ಮಾನವ ಹಕ್ಕುಗಳ ಪ್ರತಿಪಾದಕ ನೆಲ್ಸನ್ ಮಂಡೇಲಾ ಅವರಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು 'ಯುನೆಸ್ಕೊ- ವಿಶ್ವ ಪಾರಂಪರಿಕ ತಾಣ'ದ ಪಟ್ಟಿಗೆ ಸೇರಿಸಲಾಗಿದೆ.


ಇಲ್ಲಿ ನಡೆದ, ಭಾರತ ಆಯೋಜಿಸಿದ್ದ 46ನೇ ವಿಶ್ವ ಪಾರಂಪರಿಕ ಸಮಿತಿ ಸಭೆಯಲ್ಲಿ ಈ ಘೋಷಣೆ ಮಾಡಲಾಯಿತು. ಈ ಘೋಷಣೆ ಹೊರಬೀಳುತ್ತಲೇ ದಕ್ಷಿಣ ಆಫ್ರಿಕಾ ನಿಯೋಗ ಸಂಭ್ರಮಿಸಿತು.



ಒಲಿಂಪಿಕ್ಸ್ ಅಂಚೆಚೀಟಿಯ ಲೋಕ 9



ಕೆಂಪು ಸೊಳೆ ಹಲಸು ಅರಸುತ್ತಾ..



ರವೀಶ್

ಅಕಾಲದಲ್ಲೂ ಹಣ್ಣು ಬಿಡುವ ತಳಿ

ಬಯಲುಸೀಮೆ, ಮಲೆನಾಡು, ಕರಾವಳಿ ಭಾಗದಲ್ಲಿ ಬೇರೆ ಬೇರೆ ಹಂಗಾಮಿನಲ್ಲಿ ಬರುವ, ಅಕಾಲದಲ್ಲಿ ಫಸಲು ಕೊಡುವ ಹಲಸಿನ ತಳಿಗಳನ್ನು ಅನಂತಮೂರ್ತಿ ಅವರ ತೋಟದಲ್ಲಿ ಕಾಣಬಹುದು.

ಹಳದಿ, ಕೆಂಪು, ತಿಳಿಹಳದಿ, ತಿಳಿಗೆಂಪು, ಕೇಸರಿ ಬಣ್ಣ, ಬಂಗಾರದ ವರ್ಣದ ತೊಳೆಗಳು ಇರುವ ಭದ್ರಾವತಿ ಯೆಲ್ಲೋ (ಭದ್ರಾವತಿಯ ವಿಐಎಸ್‌ಎಲ್ ಕಾಲೋನಿಯಲ್ಲಿ ದೊರೆತದ್ದು), ವರ್ಷವಿಡೀ ಹಣ್ಣು ಕೊಡುವ ಕೊಡಗಿನ ಬಿ-365 (ಮೂರ್ನಾಡಿನ ಬೆಳ್ಳಿಯಪ್ಪ ಅವರ ತೋಟದಲ್ಲಿ ಗುರುತಿಸಿದ್ದು), ಕೆಳದಿ ಬಕ್ಕೆ, ಬಂಗಾರ ವರ್ಣದ ತೊಳೆಯ ಕನಕ, ಚಂದ್ರ ಹಲಸು, ಪ್ರಕಾಶಚಂದ್ರ, ಥಾಯ್ಲೆಂಡ್ ಪಿಂಕ್, ಡ್ಯಾಂಗ್ ಸೂರ್ಯ, ಮಂಕಳಲೆ ರೆಡ್, ಜಿಕೆವಿಕೆ ರೆಡ್, ದೊಡ್ಡಬಳ್ಳಾಪುರ ಬಳಿಯ ತೂಬಗೆರೆಯ ರೆಡ್, ಲಾಲ್‌ಬಾಗ್ ಮಧುರಾ, ಸ್ವರ್ಣಾ, ಸೊಂಪಾಡಿ ಗಮ್‌ಲೆಸ್, ವಿಯಟ್ನಾಂ ಸೂಪರ್- ಹೀಗೆ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮಾತ್ರವಲ್ಲದೇ ವಿಯಟ್ನಾಂ, ಸಿಂಗಪುರ, ಮಲೇಶಿಯಾದ ಗಿಡ್ಡ ತಳಿಯ ಹಲಸಿನ ಮರಗಳು ಇವರ ತೋಟದಲ್ಲಿವೆ.

ವೆಂಕಟೇಶ ಜಿ.ಎಚ್

ಹಲಸು ತಳಿಗಳ ಮೋಹಕ್ಕೆ ಬಿದ್ದ ರೈತ ಅನಂತಮೂರ್ತಿ ಜವಳಿ ಕೆಂಪು ಸೊಳೆ ಇರುವ ವಿಶಿಷ್ಟ ರುದ್ರಾಕ್ಷಿ ತಳಿಯ ಹಲಸು ಹುಡುಕುತ್ತಾ ಪಶ್ಚಿಮಘಟ್ಟದಲ್ಲಿ ಅಲೆದಾಡಿದ್ದರು. ಇದಕ್ಕೆ ಕಾರಣವಿದೆ. ರುದ್ರಾಕ್ಷಿ ಹಲಸಿನ ತಳಿಯಲ್ಲಿ ಹಳದಿ ಬಣ್ಣದ ಸೊಳೆ ಇರುವಾಗ, ಕೆಂಪು ಬಣ್ಣದ್ದೂ ಇರಬೇಕಲ್ಲವೇ ಎಂದು ಒಳಮನಸ್ಸು ಹೇಳುತ್ತಲೇ ಇತ್ತು. ತಮ್ಮ ಕುತೂಹಲವನ್ನು ತಣಿಸಿಕೊಳ್ಳುವ ಸಲುವಾಗಿಯೇ ಹುಡುಕಾಟ ನಡೆಸಿದ್ದರು. ಒಂದು ದಿನ ಇವರು ಹುಡುಕುತ್ತಿದ್ದ ಹಲಸು ಸಿಕ್ಕಿಯೇ ಬಿಟ್ಟಿತು. ಅದನ್ನು ತಂದು ಕಸಿಮಾಡಿ ತಮ್ಮ ತೋಟದಲ್ಲಿ ಬೆಳೆಸಿದ್ದು, ಅವು ಫಲ ಕೊಡುತ್ತಿವೆ.

ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆ-ತೀರ್ಥಹಳ್ಳಿ ರಸ್ತೆಯಲ್ಲಿರುವ ಬರುವೆ ಗ್ರಾಮದ ತಮ್ಮ ತೋಟದಲ್ಲಿ ತಿರುಗಾಡುತ್ತಲೇ 74 ವರ್ಷದ ಅನಂತಮೂರ್ತಿ ಹಲಸಿನ ತಳಿಗಳ ಹುಡುಕಾಟದ ತಮ್ಮ ಮೂರೂವರೆ ದಶಕಗಳ ಅನುಭವವನ್ನು ಹಂಚಿಕೊಂಡರು.

ವರ್ಕೋಡು ಗ್ರಾಮ ಸೇವಕ ಬರುವೆ ಗ್ರಾಮದ ಅಳಿಯ. ಅವರು ಒಮ್ಮೆ ಅನಂತಮೂರ್ತಿ ಅವರ ತೋಟ ನೋಡುತ್ತಾ 'ಹಲಸಿನ ಗಿಡ ಕಸಿ ಕಟ್ಟುತ್ತೀರಾ? ನಮ್ಮಲ್ಲೊಂದು ರುದ್ರಾಕ್ಷಿ ಹಲಸಿನಮರ ಇದೆ. ಅದರಲ್ಲಿ ಬಿಡುವ ಕೆಂಪು ಸೊಳೆಯ ಹಣ್ಣು ಬಹಳ ರುಚಿ' ಅಂದರು. ಅನಂತಮೂರ್ತಿ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಏಕೆಂದರೆ, ಇವರು ಹುಡುಕುತ್ತಿದ್ದ ಬಳ್ಳಿಯೊಂದು ಕಾಲಿಗೆ ಸಿಕ್ಕಂತಾಗಿತ್ತು.

'ವರ್ಕೋಡಿಗೆ ಕೂಡಲೇ ಓಡಿಹೋದೆ. ಅಲ್ಲಿ ಶ್ರೀಕಂಠಪ್ಪ ಗೌಡರ ಮನೆಯ ಹಿತ್ತಿಲಲ್ಲಿದ್ದ ಮರವನ್ನು ಕಣ್ತುಂಬಿಕೊಂಡೆ. ಅದರ ಕುಡಿ ತಂದು ತೋಟದಲ್ಲಿ ನೆಟ್ಟೆ. ಈಗ ನಮ್ಮಲ್ಲಿ ಹತ್ತಕ್ಕೂ ಹೆಚ್ಚು ಕೆಂಪು ಸೊಳೆಯ ರುದ್ರಾಕ್ಷಿ ತಳಿ ಹಲಸಿನಮರಗಳು ಇವೆ' ಎಂದು ಅನಂತಮೂರ್ತಿ ಆ ಸಾಲು ತೋರಿಸಿದರು.

ಅನಂತಮೂರ್ತಿ ಎಪ್ಪತ್ತರ ದಶಕದಲ್ಲಿ ಸುರತ್ಕಲ್‌ನ ಆಗಿನ ಕೆಆರ್‌ಇಸಿಯಲ್ಲಿ ಎಲೆಕ್ಟ್ರಿಕ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದವರು. ಕೆಇಬಿಯಲ್ಲಿ ನೌಕರಿ. ಹತ್ತು ವರ್ಷ ಕೆಲಸ ಮಾಡಿ ಸರ್ಕಾರಿ ವ್ಯವಸ್ಥೆಗೆ ಹೊಂದಿಕೊಳ್ಳಲಾಗದೇ ರಾಜೀನಾಮೆ ಕೊಟ್ಟು ಕೃಷಿಯಲ್ಲಿ ತೊಡಗಿಕೊಂಡರು. ಹಲಸು, ಮಾವು, ಬಾಳೆ, ಗುಲಾಬಿ ಸೇರಿದಂತೆ ವಿಶೇಷವಾಗಿ ಹಣ್ಣು, ಹೂವಿನ ತಳಿಗಳಿಗೆ ಹದಿಮೂರು ಎಕರೆ ಜಮೀನನ್ನು ಪ್ರಯೋಗ ಶಾಲೆಯಾಗಿ ಮಾಡಿಕೊಂಡಿದ್ದಾರೆ.


ರುದ್ರಾಕ್ಷಿ ಹಲಸಿನ ತಳಿಗೆ ಪೇಟೆಂಟ್



ಅನಂತಮೂರ್ತಿ ಅವರ ಹಿತ್ತಿಲಿನಲ್ಲಿ ಬೆಳೆದ ಹಳದಿ ಬಣ್ಣದ ಸೊಳೆಯ ರುದ್ರಾಕ್ಷಿ ತಳಿ ಹಲಸು ಹಾಗೂ ರಿಪ್ಪನ್‌ಪೇಟೆ ಬಳಿಯ ವರ್ಕೋಡಿನ ಶ್ರೀಕಂಠಪ್ಪ ಗೌಡರ ಮನೆಯ ಹಿತ್ತಿಲಿನ ಕೆಂಪು ಬಣ್ಣದ ಸೊಳೆಯ ರುದ್ರಾಕ್ಷಿ ತಳಿ ಹಲಸು ಸೇರಿದಂತೆ ಮಲೆನಾಡಿನ (ಕೆಂಪು-ಆರ್‌ಟಿಬಿ ಹಾಗೂ ಕಿತ್ತಳೆ-ಆರ್‌ಪಿಎನ್) ನಾಲ್ಕು ತಳಿಯ ಹಲಸಿಗೆ ಕೇಂದ್ರ ಸರ್ಕಾರದ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ ಪೇಟೆಂಟ್ ನೀಡಿದೆ.

'ಪಶ್ಚಿಮ ಘಟ್ಟದಲ್ಲಿ ಮಾತ್ರ ಈ ತಳಿಯ ಮರಗಳು ಸಿಗುತ್ತವೆ. ವರ್ಕೋಡು ಗ್ರಾಮದ ಶ್ರೀಕಂಠಪ್ಪಗೌಡರ ಮನೆಯ ಹಿತ್ತಿಲಲ್ಲಿರುವ ಕೆಂಪು ಸೊಳೆಯ ರುದ್ರಾಕ್ಷಿ ತಳಿಯ ಹಲಸಿನ ಮರ ಸುಮಾರು 500 ವರ್ಷದ ಹಳೆಯದ್ದು. ರಿಪ್ಪನ್‌ಪೇಟೆಯ ನಮ್ಮ ಹಳೆಯ ಮನೆಯ ಹಿತ್ತಿಲಲ್ಲಿ ಇರುವ ಹಳದಿ ಬಣ್ಣದ ತೊಳೆಯ ರುದ್ರಾಕ್ಷಿ ಹಲಸಿನಮರ ಅಮ್ಮ ಹಾಕಿದ್ದು' ಎಂದು ಅನಂತಮೂರ್ತಿ ನೆನಪಿಸಿಕೊಳ್ಳುತ್ತಾರೆ.

ರೈತರು ಹಲಸು ಬೆಳೆಯುವುದು ಮಾತ್ರವಲ್ಲ, ತಳಿ ಸಂರಕ್ಷಣೆಗೆ ಒತ್ತು ನೀಡಿದರೆ ಪೇಟೆಂಟ್‌ನ ಶಕ್ತಿ ದೊರೆತು ಆರ್ಥಿಕವಾಗಿಯೂ ಲಾಭವಾಗಲಿದೆ ಎಂದು ಅನಂತಮೂರ್ತಿ ಹೇಳುತ್ತಾರೆ. (9448554514)



ಕೆಂಪು ರುದ್ರಾಕ್ಷಿ ತಳಿ ಹಲಸಿನ ಹಣ್ಣಿನ ಸೊಳೆಗಳು

ಬಾಲ್ಯದಿಂದಲೂ ಹಲಸಿನ ಮೋಹ

'ಮಲೆನಾಡಿನಲ್ಲಿ ಹಲಸು ತರಕಾರಿ ಮತ್ತು ಹಣ್ಣು-ಹೀಗೆ ಎರಡು ರೀತಿಯಲ್ಲೂ ಬಳಕೆಯಾಗುತ್ತದೆ. ಅರವತ್ತರ ದಶಕದಲ್ಲಿ ಆಹಾರದ ಕೊರತೆ ಇದ್ದಾಗ ಹಲಸು ಮಲೆನಾಡಿನ ಜನರ ಹಸಿವು ನೀಗಿಸಿತ್ತು. ಆಗ ಅದರ ಬೀಜ ಕೂಡ ಬೇಯಿಸಿ ತಿನ್ನುತ್ತಿದ್ದೆವು. ಹಪ್ಪಳ, ಸಾರು-ಪಲ್ಲೆ, ಬಿದಿರಿನ ಪಟ್ಟಿಯಲ್ಲಿಟ್ಟು ಬೇಯಿಸಿ ಶೀಟ್ ಹೆಸರಿನ ಸಿಹಿ ಕೂಡ ಮಾಡುತ್ತಿದ್ದ ನೆನಪು. ಹೀಗಾಗಿ ಸಹಜವಾಗಿಯೇ ನನಗೆ ಹಲಸಿನ ಬಗ್ಗೆ ಹೆಚ್ಚು ಮೋಹ. ಅದರ ಕೃಷಿ, ತಳಿ ಸಂರಕ್ಷಣೆಯಲ್ಲಿ ತೊಡಗಿಕೊಂಡೆನು' ಎಂದು ಅನಂತಮೂರ್ತಿ ಹೇಳುತ್ತಾರೆ.

10ನೇ ಪುಟಕ್ಕೆ...

ಗುರು ಪಿ.ಎಸ್.

ಅದು 2017 ಬರದ ಬಯಲು. ಒಣಗಿದ ಅಡಿಕೆ ಮರಗಳು. ಮಣ್ಣಿಗೂ ಅನಾರೋಗ್ಯ. ಭೂಮಿ ಬಗೆದರೂ ಸಿಗದ ನೀರು. ಮೇಲಿಂದ ಮೇಲೆ 23 ಬೋರ್‌ವೆಲ್ ಕೊರೆಸಿದ ನಂತರ ತಲೆ ಮೇಲೆ ಬಿದ್ದಿದ್ದು ಸಾಲದ ಹೊರೆ. ಕೃಷಿಯ ಸಹವಾಸವೇ ಬೇಡ ಎಂದುಕೊಂಡವರ ಕೈ ಕಟ್ಟಿ ಹಾಕಿದ್ದು ಮನೆ ಜವಾಬ್ದಾರಿ. ಬದುಕಿನ ಬಂಡಿ ದೂಡಲೇಬೇಕು ಎಂದುಕೊಂಡವರನ್ನು ಕರೆದು ಗ್ಯಾಸ್ ಸಿಲಿಂಡರ್ ಡೆಲಿವರಿ ಬಾಯ್ ಕೆಲಸ ಕೊಟ್ಟಿದ್ದು ಬೆಂಗಳೂರು.

ಇದು 2021 ಸಮೃದ್ಧಿಯ ಬಟ್ಟಲು. ಬರಡಾಗಿದ್ದ ಭೂಮಿಯಲ್ಲಿ ಜಲಧಾರೆ. ಅದೇ ಹೊಲದಲ್ಲೀಗ ಹಸಿರ ಸಿರಿ. ಆಸಕ್ತ ಕೃಷಿಕರಿಗೆ ಅದೇ ನೆಲವೀಗ ಯಶಸ್ಸಿನ ಕಥೆ ಹೇಳುವ ತಾಣ. ಸಿಲಿಂಡರ್ ಡೆಲಿವರಿ ಬಾಯ್ ಆಗಿದ್ದ ವ್ಯಕ್ತಿಯೇ ಈಗ ಕೃಷಿಯಲ್ಲಿ 'ಮಾಸ್ಟರ್'. ಐದೇ ಐದು ಎಕರೆ ಜಮೀನಿನಲ್ಲಿ ನಳನಳಿಸುತ್ತಿವೆ 70 ವಿಧದ ಬೆಳೆಗಳು!

ಈ ಮೇಲಿನ ಎರಡೂ ರೀತಿಯ ಸನ್ನಿವೇಶಗಳಿಗೆ ಮುಖಾಮುಖಿಯಾದವರು ತುಮಕೂರು ಸಮೀಪದ ದೊಡ್ಡಹೊಸೂರಿನ ಪ್ರಯೋಗಶೀಲ ಯುವ ರೈತ ರವೀಶ್. ರೈತರು ಸಾಮಾನ್ಯವಾಗಿ ಎದುರಿಸಬಹುದಾದ ಬರ ಪರಿಸ್ಥಿತಿ, ಸಾಲಬಾಧೆ, ಕೌಟುಂಬಿಕ ಸಂಕಷ್ಟಗಳನ್ನು ಮೆಟ್ಟಿನಿಂತು, ಹೊಸಹಾದಿ ತುಳಿದವರು. ಬರಡುನೆಲವನ್ನು ನಂದನವನ ಆಗಿಸಿದವರು.

> ಇದು ಇಬ್ಬರು ಪ್ರಗತಿಪರ ರೈತರ ಯಶೋಗಾಥೆ. ಅನಂತಮೂರ್ತಿ ಅವರು ಅಪರೂಪದ ಹಲಸು ತಳಿಗಳ ಸಂರಕ್ಷಣೆ ಮತ್ತು ಕಸಿ ಮೂಲಕ ಮಹತ್ತರ ಕಾಯಕದಲ್ಲಿ ತೊಡಗಿದ್ದಾರೆ. ಇವರ ತೋಟದಲ್ಲಿ 24ಕ್ಕೂ ಹೆಚ್ಚು ತಳಿಯ ಹಲಸಿನ ಮರಗಳಿವೆ. ಹಳದಿ ಬಣ್ಣದ ಸೊಳೆಯ ರುದ್ರಾಕ್ಷಿ ತಳಿ ಹಲಸಿಗೆ ಪೇಟೆಂಟ್ ಕೂಡ ಪಡೆದಿದ್ದಾರೆ. ಇತ್ತ ಯುವ ರೈತ ರವೀಶ್, ಸತ್ವ ಕಳೆದುಕೊಂಡ ಮಣ್ಣಿನಿಂದಾಗಿ ಒಣಗಿನಿಂತ ತೋಟದಲ್ಲಿ ಐದು ವರ್ಷಗಳಲ್ಲಿ ಹಸಿರು ತೊನೆಯುವಂತೆ ಮಾಡಿದ್ದಾರೆ.

ಅರೆಶುಷ್ಕ ಪ್ರದೇಶದಲ್ಲಿ ಕೃಷಿಗೆ ಮಳೆಯೇ ಆಧಾರ. ಮಳೆ ಮುನಿಸಿಕೊಂಡು, ಅಂತರ್ಜಲವೂ ಬತ್ತಿ ಹೋದಾಗ ರವೀಶ್ ಅವರ ತಂದೆ ಕಂಗಾಲಾದರು. ಅಡಿಕೆ, ತೆಂಗಿನಮರಗಳೆಲ್ಲ ಒಣಗಿಹೋದವು. ತಂದೆಯ ಮುಖ ಚಿಂತೆಯಿಂದ ಮುದುಡಿ ಹೋದಾಗ ರವೀಶ್, ಕೃಷಿಗೆ ಬೆನ್ನು ಮಾಡಿ ಬೆಂಗಳೂರು ಸೇರಿದರು. ಹಾಲಿನ ಡೇರಿಯಲ್ಲಿ ಕೆಲಸ. ಅಲ್ಲಿ ಬರುತ್ತಿದ್ದ ಅತ್ಯಲ್ಪ ಸಂಬಳ ಯಾವುದಕ್ಕೂ ಸಾಲದಾಯಿತು. ಬಳಿಕ ಅಡುಗೆ ಅನಿಲ ಸಿಲಿಂಡರ್ ವಿತರಿಸುವ ಕೆಲಸಕ್ಕೆ ಸೇರಿಕೊಂಡರು.

ಬೆವರು ಮತ್ತು ಕಣ್ಣೀರು ಬೆರೆಸಿ ದುಡಿಯುತ್ತಿದ್ದ ರವೀಶ್ ಜೀವನವನ್ನು ಬದಲಿಸಿದ್ದು, 2017ರ ನವೆಂಬರ್‌ನಲ್ಲಿ ತುಮಕೂರಿನಲ್ಲಿ ನಡೆದ ಆ ಕಾರ್ಯಕ್ರಮ. ಹವಾಮಾನ ವೈಪರೀತ್ಯದಿಂದಾಗುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಲೆಂದು ಆಯೋಜಿಸಿದ್ದ ಕಾರ್ಯಕ್ರಮ ಅದು. ಗಾಂಧೀ ಸಹಜ ಬೇಸಾಯ ಶಾಲೆಯ ನಿಸರ್ಗವಾದಿ ಡಾ.ಮಂಜುನಾಥ್ ಎಚ್. ಅವರು, 'ಸಹಜ ಕೃಷಿಯಿಂದ ಹವಾಮಾನ ವೈಪರೀತ್ಯದ ಸವಾಲುಗಳನ್ನು ಎದುರಿಸಲು ಸಾಧ್ಯ' ಎಂದು ಹೇಳಿದ್ದು ರವೀಶ್ ತಲೆಯಲ್ಲಿ ಮಿಂಚು ಹರಿಸಿತು.

ಡಾ.ಮಂಜುನಾಥ್ ಅವರನ್ನು, 'ನಮ್ಮ ಡಾಕ್ಟ್ರು' ಎಂದೇ ಕರೆಯುವ ರವೀಶ್, 'ನಮ್ಮ ತೋಟಕ್ಕೆ ಬಂದು ಸಲಹೆ ಕೊಡಿ' ಎಂದು ಕೇಳಿಕೊಂಡರು. ಡಾ.ಮಂಜುನಾಥ್ ಸೇರಿ ಐದು ಜನರ ತಂಡ ತೋಟದಲ್ಲಿ ಹಾಜರಿತ್ತು. ಈ ತಂಡ ನೀಡಿದ್ದ ಸಲಹೆ, ರವೀಶ್ ಅವರಲ್ಲಿ ಸಮರ್ಪಣಾ ಮನೋಭಾವವನ್ನು ಜಾಗೃತಗೊಳಿಸುವುದರ ಜೊತೆಗೆ ವೈಜ್ಞಾನಿಕ ದೃಷ್ಟಿಕೋನ ಬೆಳೆಸಿತು.

2018ರಲ್ಲಿ ಮತ್ತೆ ಕೃಷಿಯತ್ತ ಹೊರಳಿದರು. ಒಣಗಿ ಹೋಗುತ್ತಿದ್ದ ಭೂಮಿ ಮೇಲೆ ಅಡಿಕೆ ಹಾಳೆ ಹೊದಿಸಿದರು. ಈ ಮುಚ್ಚಿಗೆ (mulching) ಪದ್ಧತಿಯಿಂದ ಮಣ್ಣಿನ ತೇವಾಂಶ ಉಳಿಯಲು ಸಾಧ್ಯವಾಯಿತು. ಆಗ, ಮಣ್ಣಿನಲ್ಲಿ ಸೇರಿರುವ ಜೀವಾಣುಗಳು ಕೆಲಸ ಮಾಡತೊಡಗಿದವು. ಯಾವಾಗ ಭೂಮಿ ನೀರು ಹಿಡಿದಿಟ್ಟುಕೊಳ್ಳಲು ಆರಂಭವಾಯಿತೋ ಆಗ ರಂಗಾದವು ಅಡಿಕೆ ಮರಗಳು.

ಬಹುಬೆಳೆ ಪದ್ಧತಿಯತ್ತ ಹೊರಳಿದ ರವೀಶ್, ಐದು ಎಕರೆ ಜಮೀನನ್ನು ನಾಲ್ಕು ಭಾಗವಾಗಿ ವಿಂಗಡಿಸಿದರು.

10ನೇ ಪುಟಕ್ಕೆ...

ಭೂಮಿ ಹಾಳು ಮಾಡುವ ಕೆಲಸಕ್ಕೆ ಸಬ್ಸಿಡಿ!

ಸರ್ಕಾರಗಳು 'ಹಸಿರು ಕ್ರಾಂತಿ' ನೀತಿ ರೂಪಿಸಿದ ಮೇಲೆ, ರಾಸಾಯನಿಕ ಗೊಬ್ಬರ ಬಳಸಿ ಆಹಾರ ಉತ್ಪಾದನೆ ಮಾಡುವುದು ಹೆಚ್ಚಾಯಿತು. ರೈತರು ಕೂಡ ಇನ್ನೂ ಹೆಚ್ಚು ಬೆಳೆಗಳನ್ನು ಬೆಳೆಯುವ ಉದ್ದೇಶದಿಂದ ದುಪ್ಪಟ್ಟು ಪ್ರಮಾಣದ ರಾಸಾಯನಿಕಗಳನ್ನು ಭೂಮಿಗೆ ತುಂಬಿದರು. ಆಗ ಪ್ರಕೃತಿ ಹಾಳಾಯಿತು. ಈಗ, ಕೃಷಿ ಇಲಾಖೆಗಳು ಕೂಡ ರೈತರಿಗೆ 'ಯೂರಿಯಾ ತಗೊಳಿ, 'ಡಿಎಬಿ ತಗೊಳಿ' ಎಂದು ಹೇಳುತ್ತವೆ. ಅವುಗಳನ್ನು ಖರೀದಿಸಲು ಸಹಾಯಧನವನ್ನೂ ಸರ್ಕಾರ ನೀಡುತ್ತದೆ. ಹೀಗೆ, ಭೂಮಿ ಹಾಳು ಮಾಡುವ ಕೆಲಸಕ್ಕೆ ಸಬ್ಸಿಡಿ ನೀಡುವ ಬದಲು, ನೈಸರ್ಗಿಕ ಕೃಷಿಯಡಿ ಬಹುಬೆಳೆ ಬೆಳೆಯುವವರಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು ಎಂಬ ಸಲಹೆ ರವೀಶ್ ಅವರದ್ದು.

ಸಾಗರದಿ ಪಥ ತೋರುವ ದೀಪಸ್ತಂಭ

ಗಣಪತಿ ಹೆಗಡೆ

ಬೇಸಿಗೆ ರಜೆ ಕಳೆಯಲು ಕಾರವಾರಕ್ಕೆ ಬಂದಿದ್ದ ದೂರದ ಬೆಂಗಳೂರಿನ ಅಶ್ವಿನ್, ಟ್ಯಾಗೋರ್ ಕಡಲತೀರದಲ್ಲಿ ಸಂಜೆಯ ವೇಳೆ ಓಡಾಡುವಾಗ ಸಮುದ್ರದಿಂದ ಪ್ರತಿ ಹತ್ತು ಸೆಕೆಂಡಿಗೆ ಬೆಳಕೊಂದು ಹಾಯುತ್ತಿರುವುದುನ್ನು ಕಂಡು ಅಚ್ಚರಿಗೆ ಒಳಗಾದರು. ಸಮುದ್ರಕ್ಕಿಂತ ಎತ್ತರದಿಂದ ಬರುತ್ತಿದ್ದ ಬೆಳಕು ಹಡಗು ಅಥವಾ ದೋಣಿಯಿಂದ ಬರುತ್ತಿಲ್ಲ ಎಂಬುದು ಅವರಿಗೆ ಖಾತ್ರಿಯಾಯಿತು. ಈ ಬೆಳಕಿನ ಕುರಿತಾಗಿಯೇ ಕುತೂಹಲಗೊಂಡ ಅವರು ಮರುದಿನ ಬೆಳಿಗ್ಗೆ ಮತ್ತದೇ ಜಾಗಕ್ಕೆ ಬಂದು ಸಮುದ್ರದತ್ತ ದಿಟ್ಟಿಸತೊಡಗಿದರು. ಆದರೆ, ಅಲ್ಲಿ ಅವರಿಗೆ ಬೆಳಕು ಕಾಣಲಿಲ್ಲ.

'ಅರೇ ನಿನ್ನೆ ಬೆಳಕು ಕಂಡ ಜಾಗದಲ್ಲಿ ದೊಡ್ಡ ಗುಡ್ಡ ಇದೆಯಲ್ಲ. ಬಹುಶಃ ಅದರ ಮೇಲೆ ನಿಂತು ಯಾರೋ ಪ್ರಖರ ಟಾರ್ಚ್ ಮೂಲಕ ಬೆಳಕು ಚೆಲ್ಲಿದ್ದಿರಬಹುದು' ಎಂದು ಮನಸ್ಸಿನಲ್ಲೇ ಅಂದುಕೊಂಡರೂ ಕುತೂಹಲದ ಅನಾವರಣಕ್ಕೆ ಸಿಕ್ಕಸಿಕ್ಕವರಲ್ಲಿ ಮಾಹಿತಿ ಕೇಳತೊಡಗಿದರು.

ಹೀಗೆ ಬೆಳಕಿನ ಕುತೂಹಲ ತಣಿಸಲು ಹೊರಟವರಿಗೆ ಕಾರವಾರದ ಕಡಲತೀರದಿಂದ ಹತ್ತು ಕಿ.ಮೀ ದೂರದಲ್ಲಿ ಅರಬ್ಬಿ ಸಮುದ್ರದ ನಡುವೆ ನೆಲೆನಿಂತ ಐತಿಹಾಸಿಕ ತಾಣವೊಂದರ ಪರಿಚಯವಾಯಿತು. ಈ 'ದೀಪಸ್ತಂಭ' ಶತಮಾನಗಳಿಂದ ಸಾವಿರಾರು ಹಡಗುಗಳಿಗೆ ಮಾರ್ಗದರ್ಶನ ಮಾಡಿದ್ದನ್ನು ಅರಿತು ಮತ್ತಷ್ಟು ಚಕಿತರಾದರು.

ಶತಮಾನದ ಇತಿಹಾಸ


ವಿಶಾಲವಾದ ಸಮುದ್ರದಲ್ಲಿ ದೂರದ ದೇಶಗಳಿಂದ ಸಾಗಿ ಬಂದ ಹಡಗುಗಳಿಗೆ ಸೂಕ್ತ ಪಥದಲ್ಲಿ ಸಾಗಲು ದಾರಿ ತೋರಿಸುವ 'ದೀಪಸ್ತಂಭ' ಕಾರವಾರದ ಸಮೀಪದಲ್ಲಿರುವ ದೇವಗಡ ದ್ವೀಪದಲ್ಲಿದೆ. ಸೈಜುಗಲ್ಲುಗಳಿಂದ ನಿರ್ಮಾಣಗೊಂಡ 20 ಅಡಿ ಎತ್ತರದ ಸ್ತಂಭವು ಪ್ರಖರ ಬೆಳಕು ಸೂಸುವ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿಂದ ಬೆಳಗುವ ಬೆಳಕು ದ್ವೀಪದಿಂದ 25 ನಾಟಿಕಲ್ ಮೈಲು ದೂರದವರೆಗೆ (46.25 ಕಿ.ಮೀ) ಗೋಚರಿಸಬಲ್ಲ ಸಾಮರ್ಥ್ಯ ಹೊಂದಿದೆ.

ಸುಮಾರು ನಾಲ್ಕೂವರೆ ದಶಕಗಳ ಹಿಂದಿನವರೆಗೂ ಹಡಗುಗಳಿಗೆ 'ದೀಪಸ್ತಂಭ'ವೇ ಮಾರ್ಗದರ್ಶನಕ್ಕೆ ಆಧಾರವಾಗಿತ್ತು. ಉಪಗ್ರಹ ಆಧಾರಿತ ನೌಕಾಯಾನ ವ್ಯವಸ್ಥೆ ಬಲಗೊಂಡ ಬಳಿಕ ದೀಪಸ್ತಂಭಗಳ ಮಹತ್ವ ಕಡಿಮೆಯಾಗಿದೆ.

9ನೇ ಪುಟಕ್ಕೆ...

ಮನ ಸೆಳೆಯುವ ತಾಣ

ದೀಪಸ್ತಂಭ(ಲೈಟ್‌ಹೌಸ್) ಒಳಗೊಂಡಿರುವ ಕಾರವಾರ ಸಮೀಪದ ದೇವಗಡ ಆಕರ್ಷಣೀಯ ದ್ವೀಪ ಪ್ರದೇಶ. ಸಮುದ್ರದ ನಡುವಿನ ಈ ಸ್ಥಳದಲ್ಲಿನ ಪರಿಸರ, ಬಂಡೆಕಲ್ಲುಗಳು ನೋಡುಗರನ್ನು ಆಕರ್ಷಿಸುತ್ತವೆ. ದೀಪಸ್ತಂಭದ ಮೇಲಿನಿಂದ ನಿಂತು ನೋಡಿದರೆ ಗೋಚರಿಸುವ ದ್ವೀಪದ ಸೌಂದರ್ಯಕ್ಕೆ ಮಾರು ಹೋಗದವರಿಲ್ಲ. ಉಪ್ಪುನೀರಿನ ಸಮುದ್ರದ ನಡುವೆ ಇದ್ದರೂ ದ್ವೀಪದಲ್ಲಿ ಎರಡು ಸಿಹಿನೀರಿನ ಬಾವಿಗಳಿವೆ. ಹಿಂದೆಲ್ಲ ಇಲ್ಲಿಗೆ ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರು ದೋಣಿ ಮೂಲಕ ಭೇಟಿ ನೀಡುತ್ತಿದ್ದರು. ಆದರೆ, ಈಚಿನ ವರ್ಷಗಳಲ್ಲಿ ಇದನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಲಾಗಿದೆ.



ಕಾರವಾರದ ದೇವಗಡ ದ್ವೀಪದಲ್ಲಿರುವ ದೀಪಸ್ತಂಭ
ಚಿತ್ರಗಳು: ಗಣಪತಿ ಹೆಗಡೆ



ದೀಪಸ್ತಂಭ ಇರುವ ಅರಬ್ಬಿ ಸಮುದ್ರದ ನಡುವಿನ ದೇವಗಡ ದ್ವೀಪ.

ರಸೂಲನ್ ಬಾಯಿ ಎಂಬ ಸಂಗೀತಗಾರ್ತಿಯ ದುರಂತ ಕಥೆ

ಜಗದೀಶ್ ಕೊಪ್ಪ

ಇದು ಎಪ್ಪತ್ತರ ದಶಕದ ಕಥೆ.

ಉತ್ತರ ಪ್ರದೇಶದ ಅಲಹಬಾದ್ ನಗರದ ಆಕಾಶವಾಣಿ ಕಟ್ಟಡಕ್ಕೆ ಹೊಂದಿಕೊಂಡಿದ್ದ ಜಾಗದಲ್ಲಿ ವೃದ್ಧೆಯೊಬ್ಬರು ಚಹಾ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದರು. ತಮ್ಮ ಅಂಗಡಿಯಲ್ಲಿ ಇದ್ದ ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದ ಅಪೂರ್ವ ಗಾಯಕಿಯೊಬ್ಬರ ಠುಮ್ರಿ ಹಿಂದೂಸ್ತಾನಿ ಗಾಯನವನ್ನು ಕೇಳುತ್ತಿದ್ದ ಅವರು ಅದ್ಭುತ ಕಂಠಸಿರಿಗೆ ಮನಸೋತು ತಲೆದೂಗುತ್ತಿದ್ದರು. ಆ ವೃದ್ಧೆಯ ದುರಂತವೆಂದರೆ, ಆ ಕಂಠಸಿರಿಯ ಗಾಯಕಿ ರಸೂಲನ್ ಬಾಯಿ ನಾನೇ ಎಂದು ಹೇಳಿಕೊಳ್ಳಲಾಗದ ಅಸಹಾಯಕತೆ ಅವರನ್ನು ಕಾಡುತ್ತಿತ್ತು. ಐವತ್ತು ಮತ್ತು ಅರವತ್ತರ ದಶಕಗಳಲ್ಲಿ ತಮ್ಮ ಸುಮಧುರ ಕಂಠದ ಠುಮ್ರಿ ಗಾಯನದ ಮೂಲಕ ಭಾರತದಲ್ಲಿ ಹೆಸರಾಗಿದ್ದ ರಸೂಲನ್ ಬಾಯಿ ಅವರು ತೀವ್ರ ಬಡತನದಲ್ಲಿ ಬದುಕಿದ ದುರಂತ ಕಥನವಿದು.

ಬನಾರಸ್ ಘರಾಣೆಯ ಪ್ರಸಿದ್ಧ ಠುಮ್ರಿ ಗಾಯನಕ್ಕೆ ಹೆಸರಾಗಿದ್ದ ರಸೂಲನ್ ಬಾಯಿಯವರು ಭೈರವಿ ರಾಗದಲ್ಲಿ ಹಾಡಿರುವ 'ಹೃದಯ ಘಾಸಿಗೊಂಡಿದೆ ಪ್ರಿಯಾ, ಹೂ ಪಕಳೆಗಳನ್ನು ನನ್ನತ್ತ ಎಸೆಯಬೇಡ' ಎನ್ನುವ ಶೋಕಗೀತೆ ಆ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಈ ಗೀತೆ 1947 ರ ಸ್ವಾತಂತ್ರ್ಯ ನಂತರ ದೇಶದಲ್ಲಿ ಜಾರಿಗೆ ಬಂದ ದೇವದಾಸಿ ವೃತ್ತಿಯ ಮೇಲಿನ ನಿಷೇಧದ ನಂತರ ಬೀದಿಗೆ ಬಿದ್ದ ಅನೇಕ ನುರಿತ ಕಲಾವಿದೆಯರ ಎದೆಯ ಪಾಡಾಗಿರದೆ, ಸ್ವತಃ ರಸೂಲನ್ ಬಾಯಿಯವರ ವೈಯಕ್ತಿಕ ಬದುಕಿನ ಶೋಕಗೀತೆಯಾಗಿತ್ತು. ಒಂದು ಕಾಲದಲ್ಲಿ ತಮ್ಮ ಮಧುರಕಂಠದಲ್ಲಿ ಠುಮ್ರಿ ಗಾಯನದ ಮೂಲಕ ಲಕ್ನೋ ಸಂಸ್ಥಾನದ ಆಸ್ಥಾನ ಗಾಯಕಿಯಾಗಿದ್ದ ರಸೂಲನ್ ಬಾಯಿಯವರು ಬನಾರಸ್ ನಗರದಲ್ಲಿ ವಾಸವಾಗಿದ್ದುಕೊಂಡು ಆ ಕಾಲದ ಶ್ರೇಷ್ಠ ಗಾಯಕಿಯಾಗಿ ಹಲವಾರು ಕಲಾವಿದರು ಮತ್ತು ಕಲಾವಿದೆಯರ ಪಾಲಿಗೆ ಮಾದರಿಯಾಗಿದ್ದರು. 1974 ರಲ್ಲಿ ಅವರು ನಿಧನರಾಗುವ ವೇಳೆಗೆ ಸರ್ವಸ್ವವನ್ನು ಕಳೆದುಕೊಂಡು ಏಕಾಂಗಿಯಾಗಿದ್ದರು.



ರಸೂಲನ್ ಬಾಯಿ

ಠುಮ್ರಿ ಗಾಯನದಲ್ಲಿ ಜನಪ್ರಿಯರಾಗಿದ್ದ ರಸೂಲನ್ ಬಾಯಿ ಬದುಕೊಂದು ದುರಂತ ಕಥನ. ದೇಶದ ಮೇಲಿನ ಅಭಿಮಾನದಿಂದ ಮದುವೆಯಾದ ಗಂಡನಿಂದಲೇ ದೂರ ಉಳಿದ ಅವರು ಅನುಭವಿಸಿದ ಸಂಕಟಗಳು ಅಷ್ಟಿಷ್ಟಲ್ಲ..

1902 ರಲ್ಲಿ ಉತ್ತರ ಪ್ರದೇಶದ ಮಿರ್ಜಾಪುರ ಎಂಬ ಊರಿನ ಕಚ್ಚಾಬಜಾರ್ ಎಂಬ ಪ್ರದೇಶದಲ್ಲಿ ಬಡ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ರಸೂಲನ್ ಬಾಯಿಯವರಿಗೆ ಸಂಗೀತವು ಅವರ ತಾಯಿ ಅದಾಲತ್ ಬಾಯಿಯವರಿಂದ ಬಳುವಳಿಯಾಗಿ ಬಂದಿತ್ತು. ಕೇವಲ ಐದನೇ ವಯಸ್ಸಿನಲ್ಲಿ ಹಿಂದೂಸ್ತಾನಿ ರಾಗಗಳನ್ನು ಗುರುತಿಸುವ ಸಾಮರ್ಥ್ಯ ಅವರಿಗಿತ್ತು. ತವೈಫ್ ಎಂದು ಕರೆಯಲಾಗುತ್ತಿದ್ದ ನೃತ್ಯ ಮತ್ತು ಸಂಗೀತವನ್ನೇ ವೃತ್ತಿಯಾಗಿಸಿಕೊಂಡ ಕುಟುಂಬದಲ್ಲಿ ಜನಿಸಿದ ರಸೂಲನ್ ಬಾಯಿ ಪಾರಂಪರಿಕವಾಗಿ ಬಂದ ಪದ್ಧತಿಯಂತೆ ಸಂಗೀತವನ್ನು ಮುಂದುವರಿಸಿದರು. 1864 ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರವು ಸಿಫಿಲಿಸ್ ಎಂಬ ಲೈಂಗಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಲಕ್ನೋ, ಬನಾರಸ್, ದೆಹಲಿ, ಕೊಲ್ಕತ್ತ ಮುಂತಾದ ನಗರಗಳಲ್ಲಿ ತವೈಫ್ ವೃತ್ತಿಯಲ್ಲಿರುವ ಕಲಾವಿದೆಯರು ಮತ್ತು ವೇಶ್ಯೆಯರು ಕಟ್ಟುನಿಟ್ಟಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕೆಂದು ನಿಯಮವನ್ನು ಜಾರಿಗೆ ತಂದಾಗ, ಅನೇಕ ಕಲಾವಿದೆಯರು ಬಿಹಾರ ಮತ್ತು ಉತ್ತರ ಪ್ರದೇಶದ ಗ್ರಾಮಾಂತರ ಪ್ರದೇಶಗಳಿಗೆ ತೆರಳಿ ಅಲ್ಲಿನ ಜಮೀನ್ದಾರರ ಆಶ್ರಯದಲ್ಲಿ ಬದುಕತೊಡಗಿದರು. ಅಂತಹ ಕುಟುಂಬಗಳಲ್ಲಿ ರಸೂಲನ್ ಬಾಯಿಯವರ ಕುಟುಂಬವೂ ಒಂದಾಗಿತ್ತು.

ಬಾಲ್ಯದಲ್ಲಿ ಉಸ್ತಾದ್ ಶಮಿಖಾನ್ ಮತ್ತು ಸಾರಂಗಿ ಕಲಾವಿದರಾದ ಆಶಿಕ್ ಖಾನ್ ಹಾಗೂ ನಜ್ಜುಖಾನ್ ಬಳಿ ಅಭ್ಯಾಸ ಮಾಡಿದ ರಸೂಲನ್ ಬಾಯಿ ತಾರುಣ್ಯದಲ್ಲಿ ಹೆಸರಾಂತ ಗಾಯಕಿಯಾಗಿ ಪ್ರಸಿದ್ಧಿಯಾದರು. ಧನಂಜಯ ಘರ್ ಎಂಬ ಪುಟ್ಟ ಸಂಸ್ಥಾನವೊಂದರಲ್ಲಿ ಅವರು ನೀಡಿದ ಕಾರ್ಯಕ್ರಮವು ರಸೂಲನ್ ಬಾಯಿಯವರ ಪ್ರತಿಭೆಯನ್ನು ಬೆಳಕಿಗೆ ತಂದಿತು. ಲಕ್ನೋ ಸೇರಿದಂತೆ ಉತ್ತರ ಪ್ರದೇಶದ ಐದು ಸಂಸ್ಥಾನಗಳಲ್ಲಿ ಆಸ್ಥಾನ ಗಾಯಕಿಯಾಗಿ ಕಾರ್ಯನಿರ್ವಹಿಸುತ್ತಾ, ವಾರಾಣಸಿ ನಗರದಲ್ಲಿ ನೆಲೆಸಿ ತಮ್ಮ ಸೊಗಸಾದ ಹಾಡುಗಾರಿಕೆಯ ಮೂಲಕ ಠುಮ್ರಿ, ಟಪ್ಪಾ, ಖಜ್ರಿ, ಹೋರಿ, ಚೈತಿ ಪ್ರಕಾರದ ಲಘು ಸಂಗೀತವನ್ನು ಶೋತೃಗಳಿಗೆ ಉಣಬಡಿಸುವುದರ ಜೊತೆಗೆ ಲೋಕ ಸಂಗೀತ ಎಂದು ಕರೆಯಲಾಗುತ್ತಿದ್ದ ಜನಪದ ಪ್ರೇಮಗೀತೆಗಳನ್ನು ಸಹ ಹಾಡುತ್ತಿದ್ದರು.

ಠುಮ್ರಿ ಗಾಯನದಲ್ಲಿ ರಸೂಲನ್ ಬಾಯಿ ಹಾಗೂ ಸಿದ್ದೇಶ್ವರಿ ದೇವಿ ಇಬ್ಬರೂ ಬನಾರಸ್ ಘರಾಣೆಯ ಸಂಗೀತದಲ್ಲಿ ಪ್ರಸಿದ್ಧಿಯಾಗಿದ್ದರು. ಸಿದ್ದೇಶ್ವರಿಯವರ ಠುಮ್ರಿ ಗಾಯನದಲ್ಲಿ ಹೆಚ್ಚಾಗಿ ಕೃಷ್ಣ ಮತ್ತು ರಾಧೆಯ ಗೀತೆಗಳ ಜೊತೆಗೆ ಭಜನೆಗಳಂತಹ ಕೃತಿಗಳು ಪ್ರಾಧಾನ್ಯತೆ ಪಡೆದಿದ್ದರೆ, ರಸೂಲನ್ ಬಾಯಿಯವರ ಸಂಗೀತದಲ್ಲಿ ಪ್ರೇಮ ಮತ್ತು ವಿರಹಗೀತೆಗಳು ಹೆಚ್ಚು ಬಳಕೆಯಾಗುತ್ತಿದ್ದವು.

ಆ ಕಾಲಘಟ್ಟದಲ್ಲಿ ರಸೂಲನ್ ಬಾಯಿ, ಬಡಿ ಮೋತಿಬಾಯಿ, ನೈನಾದೇವಿ ಮತ್ತು ಸಿದ್ದೇಶ್ವರಿ ದೇವಿ ಹಾಗೂ ಗಜಲ್ ರಾಣಿ ಎಂದು ಕರೆಯಲಾಗುತ್ತಿದ್ದ ಬೇಗಂ ಅಕ್ತರ್ ಇವರಿಂದಾಗಿ ಬನಾರಸ್ ಘರಾಣೆಯು ಜನಪ್ರಿಯತೆಯ ಶಿಖರವನ್ನು ಮುಟ್ಟಿತ್ತು. ಇಂತಹ ಲಘು ಸಂಗೀತದ ಪ್ರಕಾರಗಳಿಂದಾಗಿ ವಿಷ್ಣುದಿಗಂಬರ್ ಪಲುಸ್ಕರ್ ಮತ್ತು ವಿಷ್ಣುನಾರಾಯಣ ಭಕ್ತಾಂಡೆಯಂತಹ ಮಹಾನುಭಾವರಿಂದ ಶುದ್ಧ ಹಿಂದೂಸ್ತಾನಿ ಸಂಗೀತಕ್ಕೆ ಹಾಕಿದ್ದ ಭದ್ರ ಬುನಾದಿ ಕುಸಿಯುತ್ತಿದೆ ಎಂಬ ಆರೋಪಗಳು ಸಹ ಕೇಳಿ ಬಂದವು.

ವಾರಾಣಸಿ ನಗರದಲ್ಲಿದ್ದ ಸಮಯದಲ್ಲಿ ರಸೂಲನ್ ಬಾಯಿ ಸುಲೇಮಾನ್ ಎಂಬ ರೇಷ್ಮೆ ವ್ಯಾಪಾರಿಯನ್ನು ವಿವಾಹವಾಗಿದ್ದರು. ವಜೀರ್ ಎಂಬ ಪುತ್ರನೂ ಜನಿಸಿದ್ದ. ಆದರೆ, 1947ರಲ್ಲಿ ಭಾರತ ಮತ್ತು ಪಾಕ್ ವಿಭಜನೆಯಾದಾಗ ಸುಲೇಮಾನ್ ತನ್ನ ಪುತ್ರನೊಂದಿಗೆ ಪಾಕಿಸ್ತಾನಕ್ಕೆ ಹೊರಟು ನಿಂತಾಗ, ತಾನು ಹುಟ್ಟಿಬೆಳೆದ ನೆಲವನ್ನು ತ್ಯಜಿಸಲಾರದೆ ರಸೂಲನ್ ಬಾಯಿ ಭಾರತದಲ್ಲಿ ಏಕಾಂಗಿಯಾಗಿ ಉಳಿದರು. ಗ್ರಾಮಾಫೋನ್ ಧ್ವನಿಮುದ್ರಿಕೆಗಳಲ್ಲಿ ಹೆಚ್ಚಿನ ಅವಕಾಶ ಅರಸಿಕೊಂಡು 1960 ರ ದಶಕದಲ್ಲಿ ಗುಜರಾತಿನ ಅಹಮದಾಬಾದ್ ನಗರಕ್ಕೆ ಬಂದು ನೆಲೆ ನಿಂತ ರಸೂಲನ್ ಬಾಯಿ, ಸ್ವಂತ ಮನೆ ನಿರ್ಮಿಸಿಕೊಂಡು ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದರು.

1969 ರಲ್ಲಿ ಗುಜರಾತಿನ ಕೋಮುಗಲಭೆಯಲ್ಲಿ ಅವರ ಮನೆಯನ್ನು ಸುಟ್ಟುಹಾಕಲಾಯಿತು. ತಮ್ಮ ಹಣ, ಒಡವೆ, ಆಸ್ತಿಯ ದಾಖಲೆಗಳನ್ನು ಕಳೆದುಕೊಂಡ ರಸೂಲನ್ ಬಾಯಿ ಅಕ್ಷರಶಃ ಅನಾಥರಾದರು. ಈ ಸಂದರ್ಭದಲ್ಲಿ ವಾರಾಣಸಿಯ ಕಲಾವಿದೆ ಹಾಗೂ ದೆಹಲಿಯ ವಾಸಿಯಾಗಿದ್ದ ನೈನಾದೇವಿಯವರು ರಸೂಲನ್ ಬಾಯಿ ಅವರಿಗೆ ಆಶ್ರಯ ನೀಡಿದರು. ಸಂಗೀತ ಕಛೇರಿಗಳಲ್ಲಿ ಅವರು ಹಾಡುತ್ತಿದ್ದ ಒಂದು ಶೋಕಗೀತೆ 'ಓ ರಾಮಾ, ಈ ರಾತ್ರಿ ನನ್ನ ಅಮೂಲ್ಯವಾದ ಮುತ್ತನ್ನು ಇಲ್ಲಿ ಕಳೆದುಕೊಂಡಿದ್ದೀನಿ. ಅದನ್ನು ಹುಡುಕಿ ಕೊಡುವಿಯಾ?' ಅವರ ಬದುಕಿನ ಶೋಕಗೀತೆಯಂತೆ ಕೇಳುಗರಿಗೆ ಭಾಸವಾಗುತ್ತಿತ್ತು. ಅವರಿಗೆ ಅರಿವಿಲ್ಲದಂತೆ ಕಣ್ಣಂಚಿನಿಂದ ನೀರು ಜಾರುತ್ತಿತ್ತು.

ಅವರ ಕಷ್ಟ ಹಾಗೂ ಅನಾರೋಗ್ಯದ ಸಂದರ್ಭದಲ್ಲಿ ಸಮಕಾಲೀನ ಕಲಾವಿದೆಯರಾದ ಸಿದ್ದೇಶ್ವರಿದೇವಿ, ಬೇಗಂ ಅಕ್ತರ್ ಹಾಗೂ ನೈನಾದೇವಿ ಅವರು ರಸೂಲನ್ ಬಾಯಿಯವರಿಗೆ ಆಸರೆಯಾಗಿ ನಿಂತರು. ಹೀಗೆ ತಮ್ಮ ಕೊನೆಯ ದಿನಗಳನ್ನು ಅನಾಮಿಕರಂತೆ ಬದುಕಿದ ರಸೂಲನ್ ಬಾಯಿ 1974 ರಲ್ಲಿ ತಮ್ಮ 72 ನೇ ವಯಸ್ಸಿನಲ್ಲಿ ನಿಧನರಾದರು.

ಕಲಾವಿದರಿಗೆ ಸಾವಿಲ್ಲ, ಅವರು ಗಂಧರ್ವರು ಎಂಬ ಮಾತಿನಂತೆ ರಸೂಲನ್ ಬಾಯಿ ಇಂದಿಗೂ ತಮ್ಮ ಠುಮ್ರಿ ಗಾಯನದ ಧ್ವನಿಮುದ್ರಿಕೆಗಳ ಮೂಲಕ ನಮ್ಮ ನಡುವೆ ಜೀವಂತವಾಗಿದ್ದಾರೆ.

ಒಲಿಂಪಿಕ್ಸ್ ಅಂಚೆಚೀಟಿಯ ಲೋಕ

ನಾಗೇಶ್ ಶೆಣೈ ಪಿ.

'ಇದೋ ನೋಡಿ, ಇವು ಅಥೆನ್ಸ್‌ನಲ್ಲಿ ನಡೆದ 1896ರ ಮೊದಲ ಆಧುನಿಕ ಒಲಿಂಪಿಕ್ಸ್ ವೇಳೆ ಬಿಡುಗಡೆ ಮಾಡಿದ್ದ ಹನ್ನೆರಡು ಅಂಚೆ ಚೀಟಿಗಳು. ಇವುಗಳಲ್ಲಿ ಎಂಟು ಬೇಗನೇ ಸಿಕ್ಕವು. ಉಳಿದ ನಾಲ್ಕನ್ನು ಪಡೆಯಲು ಕೆಲವು ವರ್ಷಗಳೇ ಬೇಕಾದವು. ಕುತೂಹಲದ ವಿಷಯವೆಂದರೆ ಒಲಿಂಪಿಕ್ಸ್ ವೇಳೆ ಸಂಪನ್ಮೂಲದ ಕ್ರೋಡೀಕರಣದ ಭಾಗವಾಗಿ ಸ್ಟ್ಯಾಂಪ್‌ಗಳನ್ನು ಹೊರತರಲಾಗಿತ್ತು'

'ಅಥೆನ್ಸ್ ನಂತರದ ನಾಲ್ಕು ಒಲಿಂಪಿಕ್ಸ್‌ಗಳ ವೇಳೆ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿರಲಿಲ್ಲ. ಈ ಪುಟ ನೋಡಿ....1920ರ ಆ್ಯಂಟ್‌ವರ್ಪ್ (ಬೆಲ್ಜಿಯಂ) ಒಲಿಂಪಿಕ್ಸ್ ವೇಳೆ ಬಿಡುಗಡೆಯಾದ ಅಂಚೆ ಚೀಟಿಗಳಿವು. ಆ ಸಲ ಮೂರು ಪುಟ್ಟ ಅಂಚೆಚೀಟಿಗಳು ಬಿಡುಗಡೆಯಾಗಿದ್ದವು....'

– ಹೀಗೆ ಅಂಚೆಚೀಟಿಗಳನ್ನು ಅಚ್ಚುಕಟ್ಟಾಗಿ ಜೋಡಿಸಿ, ಪುಟ್ಟ ಟಿಪ್ಪಣಿ ಹೊಂದಿರುವ ಆಲ್ಬಮ್ಮಿನ ಒಂದೊಂದೇ ಪುಟಗಳನ್ನು ತೆರೆಯುತ್ತ ಹೋದರು ಜಗನ್ನಾಥ ಮಣಿ. ಬೆಂಗಳೂರಿನ ರಾಜಾಜಿನಗರದಲ್ಲಿರುವ ಉದ್ಯಮಿ ಜಗನ್ನಾಥ ಮಣಿ ಅವರು ಒಲಿಂಪಿಕ್ಸ್‌ಗೆ ಸಂಬಂಧಪಟ್ಟ ಅಂಚೆಚೀಟಿಗಳ ಅತ್ಯುತ್ತಮ ಸಂಗ್ರಹ ಹೊಂದಿದ್ದಾರೆ. ಇದುವರೆಗೆ ನಡೆದಿರುವ ಒಲಿಂಪಿಕ್ಸ್‌ಗಳ ಆತಿಥ್ಯ ವಹಿಸಿದ ದೇಶಗಳು ಮತ್ತು ಜಗತ್ತಿನ ಇತರೆ ದೇಶಗಳು ಬಿಡುಗಡೆ ಮಾಡಿದ ಅಂಚೆಚೀಟಿಗಳು, ವಿಂಟೇಜ್ ಲೇಬಲ್ಸ್, ವಿಶೇಷ ಕವರ್‌ಗಳು ಅವರ ಅಮೂಲ್ಯ ಸಂಗ್ರಹದಲ್ಲಿವೆ.

1896ರಲ್ಲಿ ಬಿಡುಗಡೆ ಮಾಡಿದ 12 ಅಂಚೆ ಚೀಟಿಗಳಲ್ಲಿ ಪ್ರಾಚೀನ ಮಲ್ಲಯುದ್ಧ, ಗ್ರೀಕ್ ದೇವತೆಗಳು, ರಥಗಳ ಸ್ಪರ್ಧೆ, ನಾಲ್ಕು ಅಶ್ವಗಳನ್ನು ಒಳಗೊಂಡ ರಥಗಳ ಚಿತ್ರಗಳು ಇದ್ದವು.


'ಒಲಿಂಪಿಕ್ಸ್‌ಗೆ ಹತ್ತು ವರ್ಷಗಳು ತುಂಬಿದಾಗ (1906) ಗ್ರೀಸ್ ದೇಶ ಕ್ರೀಡೋತ್ಸವ ನಡೆಸಿ ಮತ್ತೊಮ್ಮೆ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿತ್ತು. ಅವುಗಳೂ ಇಲ್ಲಿವೆ ನೋಡಿ' ಎಂದು ಮತ್ತೊಂದು ಪುಟ ತೆರೆದಿಟ್ಟರು.

1924ರ ಪ್ಯಾರಿಸ್ ಒಲಿಂಪಿಕ್ಸ್ ವೇಳೆ ಆತಿಥೇಯ (ಫ್ರಾನ್ಸ್) ದೇಶದ ಜೊತೆಗೆ ಇತರ ದೇಶಗಳೂ ಒಲಿಂಪಿಕ್ಸ್ ಅಂಚೆಚೀಟಿಗಳನ್ನು ಬಿಡುಗಡೆ ಮಾಡುವ ಪರಿಪಾಟ ಆರಂಭಿಸಿದ್ದವು. ಆ ವರ್ಷ ಇತರ ಐದು ದೇಶಗಳು (ಸಿರಿಯಾ, ಝೆಕೊಸ್ಲಾವಾಕಿಯಾ, ಲೆಬನಾನ್, ಉರುಗ್ವೆ, ಕೋಸ್ಟರಿಕಾ) ಅಂಚೆಚೀಟಿಗಳನ್ನು ಹೊರತಂದಿದ್ದವು.

ಒಲಿಂಪಿಕ್ಸ್‌ನ ಬಹುಮುಖ್ಯ ಸಂಪ್ರದಾಯಗಳಲ್ಲಿ ಒಂದು ಕ್ರೀಡಾಜ್ಯೋತಿ. ಮೊದಲ ಬಾರಿ ಅದು ಅಂಚೆಚೀಟಿಯಲ್ಲಿ ಕಾಣಿಸಿದ್ದು 1932ರ ಲಾಸ್ ಏಂಜಲೀಸ್ ಕ್ರೀಡೆಗಳಲ್ಲಿ. ಒಲಿಂಪಿಯಾದಲ್ಲಿ ಜ್ಯೋತಿಯಾತ್ರೆ ಆರಂಭವಾಗಿದ್ದು ಬರ್ಲಿನ್ ಒಲಿಂಪಿಕ್ಸ್ ಸಂದರ್ಭದಲ್ಲಿ. ಹೀಗಾಗಿ ಜ್ಯೋತಿ ಹಿಡಿದು ಓಡುವ ಕ್ರೀಡಾಪಟುವಿನ ಚಿತ್ರವಿರುವ ಅಂಚೆಚೀಟಿಯನ್ನು 1936ರಲ್ಲಿ ಜರ್ಮನಿ ಹೊರತಂದಿತು. ಆ ವರ್ಷ ಜರ್ಮನಿ ಮಾತ್ರ ಅಂಚೆ ಚೀಟಿ ಹೊರತಂದಿದು ವಿಶೇಷ.



ಡೊಮಿನಿಕಾ ದೇಶ ಬಿಡುಗಡೆ ಮಾಡಿರುವ ಈ ಅಂಚೆಚೀಟಿಯಲ್ಲಿ ಭಾರತ ತಂಡ ಹಾಕಿ ಆಡುತ್ತಿರುವ ಚಿತ್ರವಿದೆ.



ಜಗನ್ನಾಥ ಮಣಿ

'ಈ ಅಂಚೆಚೀಟಿ ವಿಶೇಷವಾದದ್ದು. 1960ರ ರೋಮ್ ಒಲಿಂಪಿಕ್ಸ್‌ಗೆ ಎರಡು ವರ್ಷ ಮೊದಲು ಅಂದರೆ 1958ರ ಅಕ್ಟೋಬರ್‌ನಲ್ಲಿ ಡೊಮಿನಿಕಾ ರಿಪಬ್ಲಿಕ್ ದೇಶ ಹೊರತಂದ ಅಂಚೆಚೀಟಿ ಇದು. ಎಡಭಾಗದ ಮೇಲೆ ಭಾರತದ ಧ್ವಜವಿದೆ. ಭಾರತದ ಆಟಗಾರರು ಹಾಕಿ ಆಡುತ್ತಿರುವ ಚಿತ್ರವೂ ಇದೆ. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಸಂಬಂಧಿಸಿದ ಮೊದಲ ಅಂಚೆಚೀಟಿ ಇದು...' ಎಂದು ವಿವರಿಸಿದರು.

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಮಿನಿಯೇಚರ್ ಷೀಟ್ (ವಿಷಯದ ಹಿನ್ನೆಲೆ ಹೊಂದಿರುವ ಕಾಗದದ ಮಧ್ಯೆ ಅಂಚೆಚೀಟಿ ಅಡಕವಾಗಿರುವುದು), ವಿಶೇಷ ಕವರ್ ಬಿಡುಗಡೆ ಮಾಡಲಾಯಿತು. 93ಕ್ಕೂ ಹೆಚ್ಚು ದೇಶಗಳು ಒಲಿಂಪಿಕ್ಸ್ ನೆನಪಿನಲ್ಲಿ ಅಂಚೆಚೀಟಿಗಳನ್ನು ಹೊರತಂದವು. 1968ರ ಮೆಕ್ಸಿಕೊ ಒಲಿಂಪಿಕ್ಸ್ ಸಂದರ್ಭದಲ್ಲಿ ಭಾರತ ಮೊದಲ ಬಾರಿ ಒಲಿಂಪಿಕ್ಸ್ ಅಂಚೆಚೀಟಿ ಬಿಡುಗಡೆ ಮಾಡಿತು.


1980ರ ಮಾಸ್ಕೊ ಒಲಿಂಪಿಕ್ಸ್ ವೇಳೆ ಅಮೆರಿಕವೂ ಅಂಚೆಚೀಟಿಗಳನ್ನು ಬಿಡುಗಡೆಮಾಡಿತ್ತು. ಆದರೆ ಅಫ್ಗಾನಿಸ್ತಾನದ ಮೇಲೆ ರಷ್ಯಾ ಆಕ್ರಮಣ ವಿರೋಧಿಸಿ ಅಮೆರಿಕ ನೇತೃತ್ವದಲ್ಲಿ ಕೆಲವು ರಾಷ್ಟ್ರಗಳು ಮಾಸ್ಕೊ ಒಲಿಂಪಿಕ್ಸ್‌ಗೆ ಬಹಿಷ್ಕಾರ ಹಾಕಿದ್ದವು. ಆ ವರ್ಷ ಅಮೆರಿಕದ ಅಂಚೆಚೀಟಿಗಳಲ್ಲಿ ಒಲಿಂಪಿಕ್ಸ್‌ನ ಐದು ಬಳೆಗಳ ಲಾಂಛನ ಇರಲಿಲ್ಲ. 2008ರ ಬೀಜಿಂಗ್ ಒಲಿಂಪಿಕ್ಸ್ ವೇಳೆ ಪಂಚಕೋನಾಕೃತಿಯ ಅಂಚೆಚೀಟಿ ಬಿಡುಗಡೆ ಆಯಿತು. ಇದರ ಜೊತೆಗೆ ಸ್ಟಿಕ್ಕರ್ ರೀತಿಯ ಅಂಚೆಚೀಟಿಯೂ ಹೊರಬಂತು.

ಅಟ್ಲಾಂಟಾದಲ್ಲಿ (1996) ನಡೆದ ಕ್ರೀಡೆಗಳ ವೇಳೆ ಅಂಚೆಚೀಟಿಗಳ ಹಿಂಭಾಗದಲ್ಲಿ ಅದಕ್ಕೆ ಸಂಬಂಧಿಸಿದ ಪುಟ್ಟಮಾಹಿತಿಯ ವಿವರಣೆಯನ್ನೂ ನೀಡಲಾಗಿತ್ತು. ಹೀಗೆ ಸ್ಟ್ಯಾಂಪ್‌ಗಳ ಹಿಂಬದಿಯಲ್ಲಿ ಬರಹ ಮೂಡಿರುವುದು ವಿಶ್ವದಲ್ಲೇ ಮೊದಲು ಇರಬೇಕು ಎನ್ನುವುದು ಅವರ ಅನಿಸಿಕೆ.

2016ರ ರಿಯೊ ಡಿ ಜನೈರೊ (ಬ್ರೆಜಿಲ್) ಒಲಿಂಪಿಕ್ಸ್ ವೇಳೆ ಮೊದಲ 3ಡಿ ಅಂಚೆಚೀಟಿಗಳು ಕನ್ನಡಕ ಸಹಿತ ಬಿಡುಗಡೆ ಆದವು.

ಈಗ ಪ್ಯಾರಿಸ್ ಒಲಿಂಪಿಕ್ಸ್ ನಡೆಯುತ್ತಿದೆ. ಆದರೆ ಆತಿಥ್ಯ ವಹಿಸಿದ್ದು ಖಚಿತವಾದಾಗಲೇ (2017) ಫ್ರಾನ್ಸ್ ಅಂಚೆ ಇಲಾಖೆ ಎರಡು ಅಂಚೆಚೀಟಿಗಳನ್ನು ಹೊರತಂದಿತ್ತು.

1968ರಿಂದ 2016ರವರೆಗೆ ಭಾರತ ಒಲಿಂಪಿಕ್ಸ್ ಸಂದರ್ಭದಲ್ಲಿ ಅಂಚೆಚೀಟಿಗಳನ್ನು ಬಿಡುಗಡೆ ಮಾಡುತ್ತ ಬಂದಿತ್ತು. ಆದರೆ ಟೋಕಿಯೊ (2021ರಲ್ಲಿ ನಡೆದಿತ್ತು) ಒಲಿಂಪಿಕ್ಸ್ ವೇಳೆ ಭಾರತ ಅಂಚೆಚೀಟಿಗಳನ್ನು ಬಿಡುಗಡೆಯಾಗಲಿಲ್ಲ. ಪ್ಯಾರಿಸ್ ಒಲಿಂಪಿಕ್ಸ್‌ಗೂ ಅಂಚೆಚೀಟಿಗಳನ್ನು ಬಿಡುಗಡೆ ಮಾಡುವ ಮಾಹಿತಿ ಇದುವರೆಗೂ ಹೊರಬಂದಿಲ್ಲ.



ಲಂಡನ್ ಒಲಿಂಪಿಕ್ಸ್ (2012)ವೇಳೆ ಇಂಗ್ಲೆಂಡ್ ಹೊರತಂದ ಅಂಚೆಚೀಟಿಗಳು



1924ರ ಒಲಿಂಪಿಕ್ಸ್ ವೇಳೆ ಬಿಡುಗಡೆಗೊಂಡ ಅಂಚೆಚೀಟಿಗಳು

ಸಾಗರದಿ ಪಥ ತೋರುವ ದೀಪಸ್ತಂಭ

8ನೇ ಪುಟದಿಂದ...

ಆದರೂ, ನೌಕೆಗಳಿಗೆ ತುರ್ತು ಸಂದರ್ಭಗಳಲ್ಲಿ ದೀಪಸ್ತಂಭವೇ ಆಧಾರವಾಗುತ್ತಿದೆ ಎಂಬುದಾಗಿ ಹಡಗಿನ ಕ್ಯಾಪ್ಟನ್‌ಗಳು ಹೇಳುತ್ತಾರೆ.

1860ರಲ್ಲಿ ಬ್ರಿಟಿಷರು ಸ್ಥಾಪಿಸಿದ ಸ್ತಂಭವು ಸ್ಥಾಪನೆಗೊಂಡ ನಾಲ್ಕು ವರ್ಷದ ಬಳಿಕ, ಅಂದರೆ 1864ರಲ್ಲಿ ಅಧಿಕೃತವಾಗಿ ಕಾರ್ಯಾರಂಭ ಮಾಡಿತು ಎಂಬುದಾಗಿ ಇಲ್ಲಿರುವ ಫಲಕಗಳಲ್ಲಿ ಉಲ್ಲೇಖಿಸಲಾಗಿದೆ.

ಮೊದಲೆಲ್ಲ ದೀಪಸ್ತಂಭದ ತುದಿಯಲ್ಲಿ ದೊಡ್ಡಗಾತ್ರದ ಲಾಟೀನು ಉರಿಸಲಾಗುತ್ತಿತ್ತು. ಅದರ ಬೆಳಕನ್ನು ಕಂಡು ನಾವಿಕರು ಬಂದರಿನ ಪಥ ಗುರುತಿಸುತ್ತಿದ್ದರು ಎಂಬುದಾಗಿ ಇತಿಹಾಸ ಹೇಳುತ್ತದೆ. ಕಾಲಕ್ರಮೇಣ ತಂತ್ರಜ್ಞಾನ ಬದಲಾದಂತೆ ಸೌರವಿದ್ಯುತ್ ಬಳಕೆ ಮಾಡಿ ಬೆಳಕು ಉರಿಸಲು ಆರಂಭಿಸಲಾಯಿತು. 1933ರ ವೇಳೆಗೆ ದೇವಗಡ ದ್ವೀಪದಲ್ಲಿರುವ ದೀಪಸ್ತಂಭದಲ್ಲಿ ಬಲ್ಬ್ ಅಳವಡಿಸುವ ಕೆಲಸ ನಡೆದಿತ್ತು. ಆದರೆ, 1999ರಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬಲ್ಬ್‌ಗಳು ಅಳವಡಿಕೆಯಾದವು. ಸದ್ಯ ಇಲ್ಲಿ ತಲಾ 70 ವ್ಯಾಟ್ ಸಾಮರ್ಥ್ಯದ ಮೂರು ಬಲ್ಬ್‌ಗಳನ್ನು ಅಳವಡಿಸಿದ್ದು, ಅವುಗಳ ಹೊರಭಾಗದಲ್ಲಿ ವೃತ್ತಾಕಾರದ ಸ್ಫಟಿಕದ ಫಲಕ ಅಳವಡಿಸಲಾಗಿದೆ. ಬೆಳಕನ್ನು ಸುತ್ತಲೂ ಚೆಲ್ಲುತ್ತ ದೂರದವರೆಗೆ ಪಸರಿಸಲು ಈ ಫಲಕ ಆಧಾರವಾಗಿದೆ.

ಕೇಂದ್ರ ಸರ್ಕಾರದ ಅಧೀನದಲ್ಲಿರುವ ಲೈಟ್‌ಹೌಸ್ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯಾಚರಿಸುವ 17 ದೀಪಸ್ತಂಭಗಳು ಪಶ್ಚಿಮ ಕರಾವಳಿ ತೀರದಲ್ಲಿವೆ. ಅವುಗಳ ಪೈಕಿ ಕಾರವಾರದಲ್ಲಿ ಬ್ರಿಟಿಷರು ನಿರ್ಮಿಸಿದ ದೀಪಸ್ತಂಭಕ್ಕೆ ವಿಶೇಷ ಮಹತ್ವವಿದೆ.



ದೇವಗಡ ದ್ವೀಪದಲ್ಲಿನ ದೀಪಸ್ತಂಭದ ಪಕ್ಕದಲ್ಲಿರುವ ಬ್ರಿಟಿಷ್ ಕಾಲದ ಫಿರಂಗಿ.

'ದೇವಗಡ ದ್ವೀಪ ಬಿಟ್ಟರೆ ಅರಬ್ಬಿ ಸಮುದ್ರದಲ್ಲಿ ಸಮೀಪದಲ್ಲೆಲ್ಲೂ ದ್ವೀಪಗಳಿರಲಿಲ್ಲ. ಅಲ್ಲದೆ ಗಟ್ಟಿಮುಟ್ಟಾದ ಬಂಡೆಕಲ್ಲುಗಳನ್ನು ಒಳಗೊಂಡ ದ್ವೀಪವು ಸುರಕ್ಷತೆ ದೃಷ್ಟಿಯಿಂದಲೂ ಉತ್ತಮ ಎಂದು ಭಾವಿಸಿದ್ದರು. ಈ ದ್ವೀಪದ ಕಲ್ಲುಗಳಲ್ಲಿ ಚಿಪ್ಪಿಗಳು ಹೆಚ್ಚಾಗಿ ಬೆಳೆದಿದ್ದವು. ಇದೇ ಕಾರಣಕ್ಕೆ ಬ್ರಿಟಿಷರು ದೇವಗಡದ ಬದಲು ಈ ದ್ವೀಪಕ್ಕೆ 'ಆಯ್‌ಸ್ಟರ್ ರಾಕ್ ದ್ವೀಪ' ಎಂದು ನಾಮಕರಣ ಮಾಡಿದ್ದರು. ಇಲ್ಲಿ ನಿರ್ಮಿಸಿದ ದೀಪಸ್ತಂಭಕ್ಕೆ ರಕ್ಷಣೆಯನ್ನೂ ಬಿಗುಗೊಳಿಸಿದ್ದರು. ಸ್ತಂಭದ ಸುತ್ತ ಫಿರಂಗಿಗಳನ್ನು ಇರಿಸಲಾಗಿತ್ತು. ಈಗ ಅಲ್ಲಿ ಒಂದು ಫಿರಂಗಿ ಉಳಿದುಕೊಂಡಿದ್ದು ಇತಿಹಾಸ ಸಾರಿ ಹೇಳುತ್ತಿದೆ' ಎನ್ನುತ್ತಾರೆ ನೌಕಾದಳದ ನಿವೃತ್ತ ಕ್ಯಾಪ್ಟನ್ ಅರುಣ ಗಾಂವಕರ್.

'ದೀಪಸ್ತಂಭದ ಮಹತ್ವ ಈಗಿನ ನೌಕಾಯಾನಿಗಳಿಗೆ ಅಷ್ಟಾಗಿ ಅರಿವಿಗೆ ಬರುವುದಿಲ್ಲ. ಉಪಗ್ರಹ ಆಧಾರಿತ ನೌಕಾಯಾನಕ್ಕೆ ಮುನ್ನ ನಾವು ದೀಪಸ್ತಂಭ ಬೀರುವ ಬೆಳಕು ಆಧರಿಸಿ ಹಡಗನ್ನು ಸರಿಯಾದ ಪಥದಲ್ಲಿ ಸಾಗುವಂತೆ ಮಾಡಬೇಕಿತ್ತು. ಕಾರವಾರ ದೇವಗಡ, ಗೋವಾದ ಆಗೊಂದಾ ದೀಪಸ್ತಂಭಗಳಿಂದ ಬಂದ ಬೆಳಕು ಸಂಧಿಸುವ ರೇಖೆ ಆಧರಿಸಿ ಹಡಗನ್ನು ಅದೇ ಪಥದಲ್ಲಿ ಸಾಗಿಸುತ್ತಿದ್ದೆವು. ಹೀಗೆ ಪ್ರತಿ 30 ರಿಂದ 40 ನಾಟಿಕಲ್ ಮೈಲಿ ದೂರಕ್ಕೆ ಒಂದರಂತೆ ಇರುವ ದೀಪಸ್ತಂಭಗಳೇ ಹಡಗುಗಳ ಪಥ ಸರಿಯಾಗಿಸುತ್ತಿದ್ದವು' ಎಂದು ಅವರು ವಿವರಿಸಿದರು.

ಮುನ್ನೋಟ 28-07-2024 ರಿಂದ 04-08-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವೃತ್ತಿಯಲ್ಲಿ ಆಹ್ಲಾದಕರ ವಾತಾವರಣವಿರುತ್ತದೆ. ಬಡ್ತಿ ಕೂಡ ಸಿಗಬಹುದು. ಉದ್ಯೋಗ ಸ್ಥಳದಲ್ಲಿ ಹಿರಿಯ ಅಧಿಕಾರಿಗಳ ಸಹಾಯ ದೊರೆಯುತ್ತದೆ. ಹಿರಿಯರ ಆರೋಗ್ಯದ ಬಗ್ಗೆ ಗಮನ ಹರಿಸಿ. ಆದಾಯ ಮಧ್ಯಮಗತಿಯಲ್ಲಿರುತ್ತದೆ. ಕೆಲವರಿಗೆ ಬೆನ್ನುನೋವು ಕಾಣಿಸಬಹುದು. ಮಾನಸಿಕ ಖಿನ್ನತೆ ಕೆಲವರನ್ನು ಕಾಡುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ವೃದ್ಧಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯ ಉತ್ತಮವಾಗಿದ್ದರೂ ಖರ್ಚು ಅಷ್ಟೇ ಇರುತ್ತದೆ. ಬೇರೆ ಮೂಲಗಳಿಂದ ಹಣ ಬರುತ್ತದೆ. ಆತ್ಮವಿಶ್ವಾಸವನ್ನು ವೃದ್ಧಿಸಿಕೊಳ್ಳುವುದು ಉತ್ತಮ. ಸ್ವಂತ ವ್ಯಾಪಾರ ಅಥವಾ ಉದ್ಯೋಗ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಕಾರ್ಯಕ್ಷೇತ್ರದಲ್ಲಿ ಸ್ವಲ್ಪ ಅಭಿವೃದ್ಧಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯಕ್ಕೆ ಮೀರಿದ ಖರ್ಚು ಇರುತ್ತದೆ. ಶೀಘ್ರ ಕೋಪದಿಂದ ಬಂಧುಗಳ ನಡುವೆ ಭಿನ್ನಾಭಿಪ್ರಾಯವನ್ನು ತಂದುಕೊಳ್ಳುವಿರಿ. ವಾರದ ಮಧ್ಯದಲ್ಲಿ ಉಲ್ಲಾಸವಿರುತ್ತದೆ. ಶತ್ರುಗಳಿಂದ ಕಾಟ ಜಾಸ್ತಿಯಾಗಬಹುದು. ಕುಟುಂಬದ ಸದಸ್ಯರಲ್ಲಿ ಅನಾರೋಗ್ಯ ಕಾಣಿಸಬಹುದು. ನಿಮ್ಮ ಸಂಗಾತಿಯ ಹಿತಾಸಕ್ತಿಗಳಿಗಾಗಿ ಹಣ ಖರ್ಚಾಗುತ್ತದೆ. ಗಣಿಗಾರಿಕೆ ಮಾಡುವವರಿಗೆ ಹಿನ್ನಡೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವೈಯಕ್ತಿಕ ಅಭಿಮಾನದ ಜೊತೆಗೆ ಅಲಂಕಾರಕ್ಕೂ ಗಮನ ಕೊಡುವಿರಿ. ಬಹಳ ಚಾಣಾಕ್ಷತನದಿಂದ ಮಾತನಾಡುವಿರಿ. ಹೆಚ್ಚು ದೇವರ ಬಗ್ಗೆ ಗಮನ ಹರಿಸುವಿರಿ. ಸರ್ಕಾರಿ ಸಂಸ್ಥೆಗಳಿಗೆ ಭೂಮಿಯನ್ನು ಒದಗಿಸುವ ಕೆಲಸ ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ, ಅದರಲ್ಲೂ ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಬಹಳ ಬುದ್ಧಿವಂತಿಕೆಯಿಂದ ನಡೆದುಕೊಳ್ಳುವಿರಿ. ನಿಮ್ಮ ನಡವಳಿಕೆಗಳಲ್ಲಿ ವ್ಯವಹಾರದ ಬಗ್ಗೆ ಹೆಚ್ಚು ಗಮನವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ವೃತ್ತಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು. ಕೆಲವೊಂದು ಸಮಯದಲ್ಲಿ ಬಂಧುಗಳು ನಿಮ್ಮ ಸಹಕಾರಕ್ಕೆ ಬರುವರು. ಕೃಷಿಯಿಂದ ಹೆಚ್ಚಿನ ಆದಾಯವಿರುತ್ತದೆ. ನಿರೀಕ್ಷಿತ ಭೂಮಿ ಕೊಳ್ಳಲು ಹಣ ಒದಗಿ ಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಶ್ರೀಮಂತರಂತೆ ಕಾಣಿಸಿಕೊಳ್ಳಲು ಪ್ರಯತ್ನ ಪಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಕೃಷಿ ಉತ್ಪನ್ನಗಳಿಂದ ಹೆಚ್ಚು ಆದಾಯವಿರುತ್ತದೆ. ಸರ್ಕಾರಿ ದಲ್ಲಾಳಿಗಳಿಗೆ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಬಂಧುಗಳ ಜೊತೆ ಕಿರಿಕಿರಿ ಮಾಡಿಕೊಳ್ಳುವುದು ಬೇಡ. ಸ್ಥಿರಾಸ್ತಿ ವಿಚಾರದಲ್ಲಿ ಮುಂದುವರೆಯಬಹುದು. ರಾಜಕಾರಣಿಗಳಿಗೆ ಎದುರಾಳಿಗಳನ್ನು ಮಣಿಸುವ ವಿಷಯವೊಂದು ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭ ಬಹಳ ಸಂತೋಷದಾಯಕವಾಗಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳಿಂದಲೇ ಹೊಸ ಶತ್ರುಗಳು ಹುಟ್ಟಿಕೊಳ್ಳುವರು. ರಾಜಕೀಯ ಪ್ರವೇಶ ಮಾಡಬೇಕೆನ್ನುವವರಿಗೆ ಅನುಕೂಲಕರವಾದ ವಾತಾವರಣ ದೊರೆಯುವ ಸಾಧ್ಯತೆಯಿದೆ. ಮಕ್ಕಳಿಂದ ನಿರೀಕ್ಷಿತ ಪ್ರಮಾಣದ ಸಹಾಯ ದೊರೆಯುವುದಿಲ್ಲ. ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ಓದಬೇಕು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಈ ವಾರ ಗೌರವದ ಜೊತೆಗೆ ಶೌರ್ಯವೂ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಹಳ ಶ್ರಮಪಟ್ಟು ಕೆಲಸಮಾಡುವಿರಿ. ಕೃಷಿಯಲ್ಲಿ ಉತ್ಸಾಹ ಹೆಚ್ಚಾಗಿ, ಅದರಲ್ಲಿ ಹೆಚ್ಚು ಕಾಲ ತೊಡಗಿಕೊಳ್ಳುವಿರಿ. ರಾಜಕಾರಣವನ್ನು ವೃತ್ತಿಯಾಗಿ ಮಾಡಿಕೊಳ್ಳಬೇಕೆನ್ನುವವರಿಗೆ ಈಗ ಸಂದರ್ಭ ಒದಗಿಬರುತ್ತದೆ. ವಾಯುಯಾನ ವಿಷಯವನ್ನು ಅಭ್ಯಾಸಮಾಡುತ್ತಿರುವವರಿಗೆ ಉತ್ತಮ ಫಲಿತಾಂಶವಿರುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಇಷ್ಟವಿಲ್ಲದಿದ್ದರೂ ಕೆಲವು ಕಾರ್ಯಗಳಲ್ಲಿ ಭಾಗವಹಿಸಬೇಕಾದ ಅನಿವಾರ್ಯತೆ ನಿಮಗಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಶತ್ರುಗಳು ಹೂಡುವ ತಂತ್ರಗಳನ್ನು ಅವರಿಗೆ ತಿರುಗಿಸಬಹುದು. ಹೊರ ದೇಶದಲ್ಲಿರುವವರು ಆಸ್ತಿ ಮಾಡಿಕೊಳ್ಳಬಹುದು. ವಿದೇಶದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಪ್ರಮಾಣದ ಫಲಿತಾಂಶವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶುದ್ಧ ಮನಸ್ಸಿನಿಂದ ಕೆಲಸ ಮಾಡುವಿರಿ. ಆದಾಯ ಸ್ವಲ್ಪ ಕಡಿಮೆ ಇದ್ದರೂ ಹಣ ನಿರ್ವಹಣೆಯನ್ನು ಮಾಡುವಿರಿ. ಯಾವುದೇ ಕೆಲಸ ಮಾಡಲು ಮುನ್ನುಗ್ಗಿ ಹೋಗುವಿರಿ. ಎಲ್ಲರ ಕಷ್ಟಕ್ಕೆ ಸಹಾಯ ಹಸ್ತ ಚಾಚುವಿರಿ. ಆಸ್ತಿ ಮಾಡುವ ವಿಚಾರದಲ್ಲಿ ಯಶಸ್ಸನ್ನು ಕಾಣಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರ ಶಾಂತಚಿತ್ತತೆ ಎಲ್ಲರ ಗಮನ ಸೆಳೆಯುತ್ತದೆ. ಯುವಕರ ಒರಟು ಮಾತುಗಳು ಅವರಿಗೆ ತೊಂದರೆ ತರಬಹುದು. ಕೆಲಸಗಳನ್ನು ಶ್ರದ್ಧೆಯಿಂದ ಮಾಡುವುದು ಒಳ್ಳೆಯದು. ವಿದೇಶದಲ್ಲಿ ಕೆಲಸ ಮಾಡುತ್ತಿರುವವರಿಗೆ ಈಗ ಆದಾಯ ಹೆಚ್ಚುತ್ತದೆ. ಬಯಸಿದ್ದ ಆಸ್ತಿಯನ್ನು ಈಗ ಕೊಳ್ಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮಲ್ಲಿ ತಾಳ್ಮೆ ಕಡಿಮೆ ಇರುತ್ತದೆ. ಮಾತಿನಲ್ಲಿ ಜಾಣ್ಮೆಯಿಂದ ಕೆಲಸ ತೆಗೆಯುವಿರಿ. ಆದಾಯವು ನಿರೀಕ್ಷೆಯ ಮಟ್ಟಕ್ಕಿರುತ್ತದೆ. ಬಂಧುಗಳ ಮನೆಯ ಧರ್ಮಕಾರ್ಯಗಳಲ್ಲಿ ಭಾಗವಹಿಸುವಿರಿ. ಆಸ್ತಿ ವಿಚಾರದಲ್ಲಿ ಹೆಚ್ಚಿನ ಆತುರ ಬೇಡ. ವಿದ್ಯಾರ್ಥಿಗಳಿಗೆ ಉತ್ತಮ ಮುನ್ನಡೆ ಇರುತ್ತದೆ.

ಪದಬಂಧ 2852



ಮೇಲಿನಿಂದ ಕೆಳಕ್ಕೆ

1. ಆಡಳಿತದಲ್ಲೇರುವ ಮತ್ತು 3
2. ಏರಿಳಿತವಿಲ್ಲದೆ ಒಂದೇ ರೀತಿಯಾಗಿ ಯೋಚಿಸುವವ 5
3. ಗೋಕುಲದಲ್ಲಿ ಪುಚ್ಛವಿರುವ ಪಶುಗಳನ್ನು ಪಾಲಿಸಿದ ಪುಟ್ಟ ಕೃಷ್ಣ 5
4. ಅನುಕಂಪದ ಹಸ್ತವನ್ನು ತೋರುವವ 5
7. ಕಳೆದು ಹೋದ ಸಮಯ 4
8. ಶಿವನ ಮಗನಲ್ಲಿ ಮದನನನ್ನು ಕಾಣಬಹುದು 3
9. ವಿಕೋಪದಲ್ಲಿ ಕೆಳಗುರುಳುವ ಸ್ಥಿತಿ 3
13. ಬಾಹ್ಯಾಕಾಶಕ್ಕೆ ಹಾರಿ ಬಿಡುವ ಸಾಧನ 3
15. ನಮ್ಮನ್ನು ಪಾಲಿಸುವ ವಿಮಾ ದಾಖಲೆ 3
17. ಮಹಾ ಪ್ರಯತ್ನಗಳಲ್ಲಿ ಕಷ್ಟಪಡುವವ 3
18. ಅರಣ್ಯದಲ್ಲಿ ಕಟ್ಟಿಕೊಂಡ ನಿವಾಸ 4
19. ಒಪ್ಪವಾಗಿ ಬಾಚದೆ ಅಡ್ಡಾದಿಡ್ಡಿಯಾಗಿ ಕಾಣುವ ಶಿರ 5
20. ಮುಂಜಾವಿನಲ್ಲಿ ಕಿವಿಗೆ ಹಿತವೆನಿಸುವ ಸಂಗೀತ ಆಲಾಪನೆ 5
21. ಮಹಾಶಿವನಂತೆ ಘೋರವಾದದ್ದು 5
22. ಮಡಗಿದ ಹಾಗೆ ಇರಬೇಕಾದ ವ್ಯಕ್ತಿ 3
23. ಉಗ್ರೇಶ್ವರನ ಮಡದಿಯಾದ ಶಿವೆ 3
27. ಸುಸಂಸ್ಕೃತನ ನೆತ್ತರು 3

ಎಡದಿಂದ ಬಲಕ್ಕೆ

1. ಸುಲಭವಾಗಿ ಪ್ರಯಾಸವಿಲ್ಲದೆ ಆಗಬಹುದಾದದ್ದು 4
3. ಬಾಲ ಬೆಳಸಿಕೊಂಡ ಹುಡುಗ 3
5. ಸಾಲವಾಗಿ ಪಡೆಯಬಹುದಾದ ಸಾಂಬಾರ ಪದಾರ್ಥ 3
6. ತಲೆಗೆ ಸುತ್ತಿಕೊಳ್ಳುವ ಪೇಟಾ 3
8. ಚೆನ್ನಾಗಿ ಬೆರೆಯಲು ಮೇಲೆ ಕೆಳಗೆ ಅಲ್ಲಾಡಿಸು 3
10. ತಲೆಯಲ್ಲಾಗುವ ಸ್ಫೋಟಕ ಹೊಡೆತ 3
11. ಪಟ್ಟಾಭಿಷೇಕದ ಚಪ್ಪಲಿ 3
12. ರಕ್ಷಣೆಗೆ ಒಳಪಟ್ಟವ 3
14. ಶಿವನ ಕೈಲಿರುವ ತಲೆಬುರುಡೆ 3
16. ರಸಭರಿತ ಮಾವು 3
18. ದೇವರಿಗೆ ಮುಡುಪಿಡುವ ರೊಕ್ಕ 3
20. ಉಚ್ವಾಸ ನಿಶ್ವಾಸದ ಪ್ರಾಣ ವಾಯು 3
22. ಹೊಟ್ಟೆಯಲ್ಲಿ ತುಂಬಿದ ಮಗು 3
24. ಬಾಯಾರಿ ಸುಸ್ತಾಗಿರುವವ 3
25. ದಕ್ಷಿಣ ಭಾರತದ ಮೂಲ ಪುರುಷ 3
26. ಮಳೆ ಸುರಿಸುವ ಕರುಣೆ 3
28. ಜಿಗಿದು ಮೇಲೆಕ್ಕೇರುವ ಕ್ರೀಡೆ 3
29. ಮಧುವನದಲ್ಲಿ ನರ್ತಿಸಿದ ಕೃಷ್ಣಪ್ರಿಯೆ 3
30. ಪೈಸೆ ಪೈಸೆ ಎಣಿಸಿ ಲೆಕ್ಕ ಬರೆಯುವವ 3
31. ದಶರಥವಂಶಜನ ಕುಲದಲ್ಲಿ ಬೆಳೆದ ಮದುಮಗ 4

ಪದಬಂಧ ಉತ್ತರ -2851

ಮೇಲಿಂದ ಕೆಳಕ್ಕೆ

2. ಕ್ಷತ್ರಿಯವಂಶ 3.ಮನುಜಮತ 4.ಆಲದಮರ 5.ಬಾಲಪ್ರಪಂಚ 10.ವಂದಿತ 12.ಸವಿತಾ 14.ತಳಕುನೋಟ 15. ಕವಿಕಲ್ಪನೆ 16.ಶಯನಗೃಹ 17.ಧಾರಾನಗರ

ಎಡದಿಂದ ಬಲಕ್ಕೆ

1. ಅಕ್ಷರಧಾಮ 4.ಆನೆಅಂಬಾರಿ 6.ಯತಿರಾಜ 7.ದಪತಿಪ್ರ 8.ಮಹಿಮ 9.ಕುಶಲವಂತ 11.ರಸಸಂಚಯ 13.ಹಿತಚಿಂತಕ 16.ಶತಾವಧಾನ 18.ವಿದಾಯ 19.ಕುಲಾಂತಕ 20.ನವದಾನ 21.ಚಿಟಚಿಟನೆ 22.ಹರಿಹರರು

ಜನಕನ್ನಡಂ ಗೆಲ್ಗೆ : ಬರಗೂರು ಆಶಯ

ಸಂದರ್ಶನ: ರಾಜಪ್ಪ ದಳವಾಯಿ

ಬಂಡಾಯ ಸಾಹಿತ್ಯದ ಮುಂಚೂಣಿಯ ಲೇಖಕ ಬರಗೂರು ರಾಮಚಂದ್ರಪ್ಪ ಅವರು ಕವಿತೆ, ಕತೆ, ಕಾದಂಬರಿಗಳಂತಹ ಸೃಜನಶೀಲ ಬರವಣಿಗೆ ಜೊತೆಗೆ ವಿಚಾರ ಮತ್ತು ವಿಮರ್ಶೆಗೆ ಹೆಸರಾದವರು. ಸಾಹಿತ್ಯದಷ್ಟೇ ಸಿನಿಮಾ ಮಾಧ್ಯಮವನ್ನು ಗಾಢವಾಗಿ ಪ್ರೀತಿಸುವ ಇವರು, ಹಲವಾರು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಕನ್ನಡ ಪರ ಧ್ವನಿ ಎತ್ತುವುದರಲ್ಲೂ ಸದಾ ಮುಂದು. ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಹಲವು ರಚನಾತ್ಮಕ ಕೆಲಸಗಳ ಮೂಲಕ ಗಮನ ಸೆಳೆದವರು. ಅವರೊಂದಿಗಿನ ಸಂದರ್ಶನದ ಸಂಕ್ಷಿಪ್ತ ರೂಪವಿದು.

• ನಿಮ್ಮ ಶಿಕ್ಷಣದ ಹೆಜ್ಜೆಗಳು ಯಾವ ರೀತಿ ಇದ್ದವು...

ಶಿಕ್ಷಣವೇ ನನ್ನ ಮೊದಲ ಆದ್ಯತೆ ಆಗಿತ್ತು. ಅಂದಿನ ಮಾಧ್ಯಮಿಕ ಶಾಲೆಯವರೆಗೆ ನಮ್ಮೂರು ಬರಗೂರಲ್ಲೇ ಓದಿದೆ. ಆನಂತರ ಪ್ರೌಢಶಾಲೆಗೆ ತಾಲ್ಲೂಕು ಕೇಂದ್ರ ಸಿರಾಕ್ಕೆ ಬಂದೆ. ಅಲ್ಲಿ ಆರು ತಿಂಗಳು ಅಷ್ಟೆ. ತುಮಕೂರಲ್ಲಿ ನನ್ನ ಎರಡನೇ ಅಣ್ಣ ಜಯರಾಮಯ್ಯ ಟಿ.ಸಿ.ಎಚ್. ಓದುತ್ತಾ ಇದ್ದದ್ರಿಂದ ಅವರ ಜೊತೆಗೆ ಬಂದು ಸರ್ಕಾರಿ ಪ್ರೌಢಶಾಲೆ ಸೇರಿದೆ. ಐಚ್ಛಿಕ ವಿಷಯ ತೆಗೆದುಕೊಳ್ಳಬೇಕಿತ್ತು. ತಂಗಿ ಅಮ್ಮಾಜಮ್ಮ ನನ್ನ ಕಣ್ಣೆದುರೇ ಸತ್ತದ್ದು ನೋಡಿದ ವೈದ್ಯ ಆಗ್ಬೇಕು ಅನ್ನಿಸಿ ವಿಜ್ಞಾನವನ್ನು ಐಚ್ಛಿಕ ವಿಷಯವಾಗಿ ತಗೊಂಡಿದ್ದೆ. ಆದ್ರೆ ಎಂಬಿಬಿಎಸ್ ಓದೋಕೆ ಆಗಲಿಲ್ಲ. ಕನ್ನಡ ಸಾಹಿತ್ಯಾನ ಮೇಜರ್ ಸಬ್ಜೆಕ್ಟ್ ಆಗಿ ತಗೊಂಡು ಬಿ.ಎ. ಸೇರಿದೆ. ಮುಂಚೆ ನನಗಿದ್ದ ಇನ್ನೊಂದು ಆಸೆ ಅಂದ್ರೆ ಸರ್ಕಾರಿ ಬಸ್ಸಿನ ಡ್ರೈವರ್ ಆಗೋದು, ನನ್ನ ಅಣ್ಣನನ್ನು ನಮ್ಮ ತಂದೆ ಕಂಡಕ್ಟರ್ ಕೆಲಸಕ್ಕೆ ಸೇರಿಸಬೇಕು ಅಂತಿದ್ರು. ಕಂಡಕ್ಟರ್‌ಗಿಂತ ದೊಡ್ಡೋನ್ ಆಗ್ಬೇಕು ಅಂತ ಡ್ರೈವರ್ ಆಗೋ ಕನಸು ಕಟ್ಟಿದ್ದೆ. ಹೀಗೇ ಏನೇನೋ ತಿರುವುಗಳು. ಬಿ.ಎ. ಮುಗಿಸಿ ಹೈಸ್ಕೂಲ್ ಮೇಷ್ಟ್ರಾದೆ. ರಾಜೀನಾಮೆ ಕೊಟ್ಟು ಎಂ.ಎ. ಓದಲು ಬೆಂಗಳೂರಿಗೆ ಬಂದೆ. ರಾಜೀನಾಮೆ ಕೊಟ್ಟಾಗ ಆ ಊರಿನ-(ಪಾವಗಡ ತಾಲ್ಲೂಕು ಕೊಂಡೇತಿಮ್ಮನಹಳ್ಳಿ) ವಿದ್ಯಾರ್ಥಿಗಳು ನಾನು ಬಿಟ್ಟು ಹೋಗಬಾರದು ಅಂತ ಮುಷ್ಕರ ಮಾಡಿದ್ರು. ಅದೊಂದು ಅವಿಸ್ಮರಣೀಯ ಅವಧಿ.

• ನಿಮ್ಮ ಆರಂಭಿಕ ಸಾಹಿತ್ಯದ ಓದು-ಬರಹ ಹೇಗಿತ್ತು? ಬೆಳವಣಿಗೆಯ ಹಾದಿ ಬಗ್ಗೆ ಹೇಳ್ತೀರ?

ಸಾಹಿತ್ಯದ ಆರಂಭಿಕ ಓದು-ಬರಹ ಅನ್ನೋದು ನಾನು ಈಗಲೂ ಮೆಚ್ಚುವ ಜನಪ್ರಿಯ ಸಾಹಿತ್ಯದ ವಲಯಕ್ಕೆ ಸೇರಿತ್ತು. ಚಿಕ್ಕಂದಿನಲ್ಲಿ ಚಂದಮಾಮ, ಬಾಲಮಿತ್ರ ಅನ್ನೊ ಮಕ್ಕಳ ಮಾಸಪತ್ರಿಕೆ ಓದ್ತಾ ಇದ್ದೆ. ಆನಂತರ ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗೆ ಬಂದೆ. ಮುಂದೆ ಅ.ನ.ಕೃಷ್ಣರಾಯರು, ನಾಡಿಗೇರ ಕೃಷ್ಣರಾಯರು, ಬೀಚಿ, ಬಸವರಾಜ ಕಟ್ಟೀಮನಿ, ನಿರಂಜನ, ತ್ರಿವೇಣಿ, ಎಂ.ಕೆ.ಇಂದಿರಾ–ಹೀಗೆ ಇನ್ನೂ ಹಲವರ ಪುಸ್ತಕಗಳನ್ನು ಓದಿದೆ. ಪದವಿ ತರಗತಿಗೆ ಬಂದಾಗ ಕುವೆಂಪು,



ಬರಗೂರು ರಾಮಚಂದ್ರಪ್ಪ

ಬೇಂದ್ರೆ, ಕೆ.ಎಸ್.ನ. ಮುಂತಾದವರನ್ನು ಓದಿದೆ. ನನಗೆ ಮೊದಲಿಂದಲೂ ಪತ್ರಿಕೆಗಳಲ್ಲಿ ನನ್ನ ಬರಹಗಳು ಬರಬೇಕು ಅನ್ನೋ ಆಸೆ. ಯಾಕೆಂದ್ರೆ ಹೆಚ್ಚು ಜನಕ್ಕೆ ತಲುಪಬೇಕು ಅನ್ನೋದು ಅಂದಿಗೂ ಇಂದಿಗೂ ನನ್ನ ಬಯಕೆ. ನನ್ನ ಆರಂಭಿಕ ಬರಹಗಳು–ಅದೂ ಹಾಸ್ಯ ವಿಡಂಬನೆಯ ಬರಹಗಳು ಪ್ರಕಟ ಆದದ್ದು 'ಜನಪ್ರಗತಿ' ವಾರಪತ್ರಿಕೆಯಲ್ಲಿ, ಆನಂತರ ಎರಡು ಮೂರು ಸಣ್ಣ ಕತೆಗಳು 'ಮಲ್ಲಿಗೆ' ಮಾಸ ಪತ್ರಿಕೆಯಲ್ಲಿ ಬಂದವು. ಮುಂದೆ ನನ್ನ ಬಹಳಷ್ಟು ಕತೆ, ಕವಿತೆಗಳನ್ನು ಪ್ರಕಟಿಸಿದ್ದು 'ಪ್ರಜಾವಾಣಿ' ಪತ್ರಿಕೆ. ನಾನು ಎರಡನೇ ಬಿ.ಎ. ಇದ್ದಾಗಲೇ 'ಮುಳ್ಳುಹಾದಿ' ಅಂತ ನಾಟಕ ಬರೆದೆ. ಆನಂತರ ಎಂಟು ನಾಟಕ ಬರೆದರೂ ಕಳಪೆ ಅಂತ ಗೊತ್ತಾಗಿ ಪ್ರಕಟಿಸಲಿಲ್ಲ! ನಾಟಕ ರಚನೆ ಬಿಟ್ಟು ಕವಿತೆ, ಕತೆ, ಕಾದಂಬರಿಗೆ ಹೊರಳಿದೆ. ಈಗ ಹೆಚ್ಚು ವಿಚಾರ, ವಿಮರ್ಶೆ.

• ಸಾಹಿತ್ಯ ಮತ್ತು ಸಾಹಿತಿಯನ್ನು ನೀವು ನೋಡುವ ಬಗೆ...

ಸಾಹಿತ್ಯ ಅನ್ನೋದು ಲೋಕಾಂತವನ್ನು ಏಕಾಂತಕ್ಕೆ ತಂದು ಸೃಷ್ಟಿಸುವ ಒಂದು ಪ್ರಕ್ರಿಯೆ. ಲೋಕಾಂತ ಮತ್ತು ಏಕಾಂತ ಪ್ರತ್ಯೇಕವಲ್ಲ. ಸಾಹಿತಿಗಳಾದ ನಾವು ಮೆರವಣಿಗೆಯ ನಡುವೆಯೂ 'ಮೌನ'ವನ್ನು ಅನುಭವಿಸಬೇಕು. ಸಂತೆಯ ಸದ್ದು, ಗದ್ದಲದ ನಡುವೆಯೂ 'ನಿಶ್ಯಬ್ದ'ವಾಗಬೇಕು. ಕೊರಳಲ್ಲಿ ಘೋಷಣೆಗಳು ಮೊಳಗುವಾಗ ಕರುಳಿನ ಕರೆಗೂ ಓಗೊಡಬೇಕು. ಸ್ಫೋಟ ಗುಣ ಒಳಗೊಂಡು ಸಂತ ಗುಣವೂ ಇರಬೇಕು. ಶತಮಾನಗಳ ಸಾಮಾಜಿಕ 'ಮೌನ'ಗಳಿಗೆ 'ಮಾತು' ಕೊಡುವ ಮನುಷ್ಯರಾಗಬೇಕು. ಮಾತಿನ ಹಿಂದೆ ಮೌನ, ಸಂಭ್ರಮದ ಹಿಂದೆ ಸಂಕಟ, ಸುಖದ ಹಿಂದೆ ದುಃಖ, ನಲಿವಿನ ಹಿಂದೆ ನೋವು ಸದಾ ಹಿಂಬಾಲಿಸುತ್ತದೆಯೆಂಬ ಅರಿವು ಇರುವ ಸಾಹಿತಿ ಮತ್ತು ಸಾಹಿತ್ಯ ವ್ಯಕ್ತಿ ವೈಪರೀತ್ಯವಾಗದೆ ಸಾಮಾಜಿಕವಾಗುತ್ತದೆ. ಸಾಹಿತಿಗೆ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಬೇಕು ಎಂದು ನಂಬಿದವನು ನಾನು. ಸಾಮಾಜಿಕ ಪ್ರಜ್ಞೆಯೆಂದರೆ ಜಾತಿಪರ ಪ್ರಜ್ಞೆ ಅಲ್ಲ. ರಾಜಕೀಯ ಪ್ರಜ್ಞೆಯೆಂದರೆ ಪಕ್ಷಪರ ಪ್ರಜ್ಞೆ ಅಲ್ಲ. ಜಾತಿಗಳು, ಸಾಮಾಜಿಕ ವಾಸ್ತವ. ಆದರೆ ಅದು ಜಾತಿವಾದ ಆಗಬಾರದು. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ವಾಸ್ತವ. ಯಾವುದಾದರೂ ಪಕ್ಷದ ಬಗ್ಗೆ ಸಹಾನುಭೂತಿಯಿದ್ದರೆ ತಪ್ಪಲ್ಲ. ಆದರೆ ಆ ಪಕ್ಷದ ವಕ್ತಾರರಂತೆ ವರ್ತಿಸಬಾರದು. ಮಾನಸಿಕ ದೂರ ಸಾಹಿತಿಗಳ ಒಂದು ಮುಖ್ಯ ಮಾನದಂಡವಾಗಬೇಕು. ಇದು ನಾನು ಪ್ರತಿಪಾದಿಸುವ ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ. ಈ ಮೂಲಕ ನಮ್ಮ ಸಾಹಿತ್ಯವು ಓದುಗರಲ್ಲಿ ಸಮಾಜಮುಖಿಯಾದ ಮಾನವೀಯ ಮಾನಸಿಕ ಪರಿಸರವನ್ನು ರೂಪಿಸಬಹುದು. ಈ ಪ್ರಕ್ರಿಯೆಗೆ ಪೂರಕವಾಗಿ ನಮಗೆ ಪರಂಪರೆಯ ಪ್ರಜ್ಞೆಯೂ ಬೇಕು. ಸಮಕಾಲೀನ ಪ್ರಜ್ಞೆಯೂ ಬೇಕು. ಹಳೆಯದೆಲ್ಲವೂ ಪ್ರಸ್ತುತ ಎಂದರೆ ನಾವು ಬದುಕಿಲ್ಲ ಎಂದರ್ಥ. ಹಳೆಯದೆಲ್ಲವೂ ಅಪ್ರಸ್ತುತ ಎಂದರೆ ನಾವು ಬೆಳೆದಿಲ್ಲ ಎಂದರ್ಥ. ಇದು ನಮ್ಮ ಅರಿವಿನಲ್ಲಿ ಇದ್ದರೆ ಜನರಲ್ಲೂ ಅರಿವು ಮೂಡಿಸಬಹುದು.

• ಕನ್ನಡ ಕಟ್ಟುವ ಬಗೆ ಕುರಿತು ನಿಮ್ಮ ಅಭಿಪ್ರಾಯ?

ಕರ್ನಾಟಕದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಆಡಳಿತದಲ್ಲಿ ಕನ್ನಡಕ್ಕೇ ಅಗ್ರಸ್ಥಾನ ಇರಬೇಕು. ಕನ್ನಡವನ್ನು ಒಂದು ಭಾಷೆಯನ್ನಾಗಿಯಾದರೂ ಕಲಿಯದೆ ಶಿಕ್ಷಣ ಪೂರೈಸಬಾರದು. ಉದ್ಯೋಗಕ್ಕೆ ಅರ್ಹ ವಿದ್ಯಾರ್ಹತೆ ಅನುಭವಗಳ ಜೊತೆಗೆ ಕನ್ನಡ ಭಾಷೆಯ ಓದು-ಬರಹವೂ ಒಂದು ಮಾನದಂಡವಾಗಬೇಕು. ರಾಜ್ಯದ ಒಳಗಿನ ಆಡಳಿತವೂ ಕನ್ನಡದಲ್ಲೇ ನಡೆಯಬೇಕು. ಈ ನಿಟ್ಟಿನಲ್ಲಿ ಏನೂ ಆಗಿಯೇ ಇಲ್ಲ ಎಂದು ಹೇಳುವಂತಿಲ್ಲ. ಆದರೆ ನಾವು ಭಾಷೆಯನ್ನು ಜನಗಳ ಮೂಲಕ ನೋಡುವ ಕ್ರಮವನ್ನು ರೂಢಿಸಿಕೊಳ್ಳಬೇಕು. ಜನಗಳ ಮೂಲಕ ಭಾಷೆಯನ್ನು ನೋಡುವ ಆದ್ಯತೆಗೂ ಭಾಷೆಯ ಮೂಲಕ ಮಾತ್ರ ಜನಗಳನ್ನು ನೋಡುವ ವಿಧಾನಕ್ಕೂ ವ್ಯತ್ಯಾಸ ಇದೆ. ನನ್ನ ಮಾತನ್ನ ಹೀಗೂ ಹೇಳಬಹುದು. ಕನ್ನಡ ಜನರನ್ನು ಬದುಕಿಸಿ, ಅವರು ಕನ್ನಡವನ್ನು ಬದುಕಿಸಿಕೊಳ್ತಾರೆ. ಕನ್ನಡವನ್ನು ಓದಿದರೆ ಉದ್ಯೋಗ ಸಿಗುತ್ತೆ ಅನ್ನುವಂಥ ವಾತಾವರಣ ಸೃಷ್ಟಿಸಿ, ಈ ಮೂಲಕ ಕನ್ನಡವನ್ನು 'ಅನ್ನದ ಭಾಷೆ' ಮಾಡಿ. ಕನ್ನಡ ಜನರು ಕನ್ನಡವನ್ನು ಉಳಿಸಿ ಬೆಳುಸ್ತಾರೆ. ಅಂದ್ರೆ ಭಾಷೆ ಮತ್ತು ಬದುಕಿಗೆ ಸಂಬಂಧ ಕಲ್ಪಿಸುವ ನೀತಿಗಳು ನಮಗೀಗ ಬೇಕು. ಉಳಿದಂತೆ ಕನ್ನಡವು ಜನಗಳಲ್ಲಿ ವೈವಿಧ್ಯತೆಯಿಂದ ವಿವಿಧ ವಿಧಾನಗಳಲ್ಲಿ ಬಳಕೆಯಾಗುತ್ತದೆ. ಭಾಷೆಯ ಬಳಕೆಗೆ ಬೈಲಾ ಬೇಕಿಲ್ಲ. ಬಳಕೆಯು ಬಂಧಮುಕ್ತ ಬೆಳವಣಿಗೆ. ಜನಕನ್ನಡಂ ಗೆಲ್ಗೆ– ಎನ್ನುವುದು ನನ್ನ ಮನದಾಳದ ಮಾತು. ನನ್ನ ಘೋಷವಾಕ್ಯ.



ಜೇನು ಕೃಷಿ

ಐದು ಎಕರೆಯ ಕ್ರಾಂತಿ ಕಥನ

8ನೇ ಪುಟದಿಂದ...

ಬೆಳೆಯ ಸ್ವರೂಪ, ಮಣ್ಣಿನ ಫಲವತ್ತತೆ, ನೀರಿನ ಲಭ್ಯತೆ ಮತ್ತು ಇರುವ ಜಾಗದ ಆಧಾರದ ಮೇಲೆ ಈ ಬೆಳೆಗಳನ್ನು ವಿಭಾಗಿಸಿದರು. ಕಡಿಮೆ ನೀರು ಬೇಡುವ ಬೆಳೆಗಳನ್ನೆಲ್ಲ ಒಂದೆಡೆ, ಹೆಚ್ಚು ನೀರು ಬೇಕಾಗುವ ಬೆಳೆಗಳನ್ನೆಲ್ಲ ಇನ್ನೊಂದೆಡೆ ಬೆಳೆಯಲು ಆರಂಭಿಸಿದರು. ಅಂದರೆ, 'ಮಳೆ ಜಾಸ್ತಿಯಾದರೂ ತೋಟ ಬದುಕಬೇಕು, ಕಡಿಮೆಯಾದರೂ ಬದುಕಬೇಕು' ಎನ್ನುವ ಸೂತ್ರವದು.

ಮೊದಲ ಹಂತದಲ್ಲಿ ಅಥವಾ ಜೋಡಣೆಯಲ್ಲಿ ಅಡಿಕೆ ಮತ್ತು ತೆಂಗಿನಂತಹ ಎತ್ತರದ ಮರಗಳು, ನಂತರದಲ್ಲಿ ಸ್ಟಾರ್‌ಫ್ರೂಟ್ ಮತ್ತು ಬಟರ್‌ಫ್ರೂಟ್‌ನಂತಹ ಮಧ್ಯಮ ಎತ್ತರದ ಮರಗಳನ್ನು ಬೆಳೆಸಿದರೆ, ಬಾಳೆ, ಪಪ್ಪಾಯದಂತಹ ಚಿಕ್ಕಗಾತ್ರದ ಮರಗಳು ಮೂರನೇ ಜೋಡಣೆಯಲ್ಲಿ ತಲೆ ಎತ್ತಿದವು. ಅದರ ನಂತರ ನೆರಳನ್ನಾಶ್ರಯಿಸಿ ಬೆಳೆಯುವ ಕೊಕ್ಕೊ, ನಿಂಬೆಯಂತಹ ಬೆಳೆಗಳು ನಳನಳಿಸತೊಡಗಿದವು. ಆಮೇಲಿನ ಜೋಡಣೆಯಲ್ಲಿ ಏಲಕ್ಕಿ, ಮೆಣಸಿನಕಾಯಿ ಸೇರಿದಂತೆ ಹಲವು ತರಕಾರಿಗಳು ಇದ್ದರೆ, ನೆಲದಡಿಯಲ್ಲಿ ಗೆಡ್ಡೆ, ಗೆಣಸು, ಶುಂಠಿ ಮತ್ತು ಅರಿಸಿನ ಬೆಳೆಯತೊಡಗಿದರು.

ಕಾಡು ಕೃಷಿ

ಮೂರೂವರೆ ಎಕರೆಯಲ್ಲಿ ಈ ಎಲ್ಲ ಬೆಳೆಗಳನ್ನು ಬೆಳೆಯುತ್ತಿದ್ದರೆ, ಉಳಿದ ಒಂದೂವರೆ ಎಕರೆಯನ್ನು ಕಾಡು ಕೃಷಿಗೆ ಮೀಸಲಿಟ್ಟಿದ್ದಾರೆ. ತೋಟದೊಳಗೆ ಕಾಲಿಟ್ಟರೆ ನೀವು ಕಾಡಿನಲ್ಲಿ ನಡೆದಂತೆಯೇ ಅನಿಸುತ್ತದೆ. ಶ್ರೀಗಂಧ, ಬೀಟೆ, ಕಾಡುಪೇರಲೆ, ಕಾಡುಮಾವು, ಕಾಡುಹಲಸು, ಹುಣಸೆ, ಬಿದಿರು, ನೇರಳೆ, ಕಾಡುಹತ್ತಿ ಸೇರಿದಂತೆ ಅನೇಕ ಜಾತಿಯ ವೃಕ್ಷಸಂಕುಲ ಒಂದೆಡೆಯಿದ್ದರೆ, ತುಂಬೆರ್ತಿಯಾ, ಗ್ರಾಂಡಿಫ್ಲೋಲಿಯಾ, ಎಲಿಕೋನಿಯಾ, ಮಲ್ಲಿಗೆ, ಸಂಪಿಗೆ ಸೇರಿದಂತೆ ಹಲವು ಬಳ್ಳಿಜಾತಿಯ ಹೂಗಳ ಸಂಕುಲವೂ ಮತ್ತೊಂದೆಡೆ ಹಬ್ಬಿ ನಿಂತಿವೆ.

ಕಾಡಿನಂತಿರುವ ಈ ವಾತಾವರಣದಲ್ಲಿ ಸಹಜವಾಗಿ ಪರಭಕ್ಷಕ ಜೀವಿಗಳು ಬಂದು ನೆಲೆಸಿವೆ. ಕಣಜ, ಹಕ್ಕಿಗಳು, ಹಾವು ಸೇರಿದಂತೆ ಕ್ರಿಮಿಕೀಟಗಳನ್ನು ತಿನ್ನುವ ಅನೇಕ ಜೀವಿಗಳಿಗೆ ಸಹಜ ನೆಲೆಯಾಗಿದೆ. ಜೊತೆಗೆ, ಜೇನು, ದುಂಬಿ, ಜೀರುಂಡೆ ಸೇರಿದಂತೆ ಪರಾಗಸ್ಪರ್ಶ ಪ್ರಕ್ರಿಯೆಗೆ ಇಂಬುನೀಡುವ ಹಲವು ಜೀವವೈವಿಧ್ಯಗಳ ಆವಾಸಸ್ಥಾನವೂ ಇದಾಗಿದೆ. ಇನ್ನು, ಕಾಡಿನಮರಗಳ ಹಣ್ಣುಗಳು ನೆಲಕ್ಕೆ ಬಿದ್ದು ಹಾಗೇ ಗೊಬ್ಬರವಾಗುತ್ತವೆ. ಇದಲ್ಲದೆ, ಹಕ್ಕಿಗಳ ಹಿಕ್ಕೆ ಕೂಡ ನೆಲತಾಗಿ, ತರಗೆಲೆಗಳ ಜೊತೆ ಸೇರಿ ಗೊಬ್ಬರವಾಗಿ ತೋಟಗಾರಿಕೆ ಬೆಳೆಗಳ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ.

ಮಾರುಕಟ್ಟೆ ಜ್ಞಾನವೂ ಅಪಾರ

'ಕೃಷಿ ಕೈ ಹಿಡಿಯಬೇಕೆಂದರೆ ಮಣ್ಣಿನ ಆರೋಗ್ಯ ಸರಿಯಾಗಬೇಕು. ಮಣ್ಣಿನ ಆರೋಗ್ಯ ಸರಿಯಾಗಬೇಕು ಎಂದರೆ ಹೊಲದಲ್ಲಿ ಜೀವವೈವಿಧ್ಯ ಇರಬೇಕು' ಎಂಬುದನ್ನು ಅರಿತ ರವೀಶ್, ನಿಯಮಿತವಾಗಿ ಮಣ್ಣಿನ ಪರೀಕ್ಷೆ ಮಾಡಿಸುವುದರ ಜೊತೆಗೆ, ತಮ್ಮ ಜಮೀನನ್ನು ಪ್ರಾಣಿ–ಪಕ್ಷಿಗಳ ನೆಲೆಯನ್ನಾಗಿಸಿದ್ದಾರೆ. 'ನಮ್ಮ ಹೊಲದಲ್ಲಿ ಇಲಿಗಳೇ ಉಳುಮೆ ಮಾಡುವುದು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಅವರು, ಜೀವನ ಸುಧಾರಿಸಿಕೊಳ್ಳಲು ಯಾವ ರೀತಿ 'ಆದಾಯ' ಪಡೆಯಬೇಕು ಎಂಬುದನ್ನೂ ಚೆನ್ನಾಗಿ ಅರಿತಿದ್ದಾರೆ.

ಎಸ್ಸೆಸ್ಸೆಲ್ಸಿ ನಂತರ ಡಿಪ್ಲೊಮಾವರೆಗೆ ಓದಿರುವ ರವೀಶ್ ಅವರ ಮಾರುಕಟ್ಟೆ ಜ್ಞಾನ ಮಾತ್ರ ಗಮನಾರ್ಹ. ಮಧ್ಯವರ್ತಿಗಳನ್ನು ಹತ್ತಿರಕ್ಕೆ ಬಿಟ್ಟುಕೊಳ್ಳದ ಅವರು, ವಾಟ್ಸ್‌ಆ್ಯಪ್ ಗ್ರೂಪ್‌ಗಳ ಮೂಲಕ ನೇರವಾಗಿ ಗ್ರಾಹಕರನ್ನು ತಲುಪುತ್ತಾರೆ. ಉತ್ಪನ್ನಗಳ ಮೌಲ್ಯವರ್ಧನೆ ಅವರ ಮತ್ತೊಂದು ಶಕ್ತಿ. ಚಾಕೊಲೇಟ್ ಮಾಡುವವರಿಗೆ ಕೊಕ್ಕೊದ ಬೀಜ ಕೊಟ್ಟರೆ ಕೆ.ಜಿಗೆ ಸುಮಾರು ₹400 ಸಿಗುತ್ತದೆ. ಅದನ್ನೇ ಪೌಡರ್ ರೂಪದಲ್ಲಿ ಕೊಟ್ಟರೆ ಕೆ.ಜಿಗೆ ₹800 ಸಿಗುತ್ತದೆ. ಇನ್ನು, ಅರಿಸಿನವನ್ನು ನೇರವಾಗಿ ಕೊಟ್ಟರೆ ಕೆ.ಜಿಗೆ ₹30ರಿಂದ ₹40 ಸಿಗುತ್ತದೆ. ಪೌಡರ್ ಮಾಡಿಕೊಟ್ಟರೆ ₹150ದಿಂದ ₹200ವರೆಗೆ ಹೋಗುತ್ತದೆ ಎಂದು ಅನುಭವ ಹಂಚಿಕೊಳ್ಳುತ್ತಾರೆ ರವೀಶ್.

ಯಾವುದೇ ರಾಸಾಯನಿಕ ಬಳಸದೆ ಸಹಜ ಕೃಷಿಯನ್ನೇ ಶಕ್ತಿಯನ್ನಾಗಿಸಿಕೊಂಡಿರುವ ರವೀಶ್, 'ಸಹಜ ಕೃಷಿಯಲ್ಲಿ ಪ್ರಾರಂಭದಲ್ಲಿ ಲಾಭ ಕಡಿಮೆಯಾಗಬಹುದು. ಆದರೆ, ವರ್ಷಗಳು ಕಳೆದಂತೆ ನಿರ್ವಹಣೆ ಮತ್ತು ಖರ್ಚು ಕಡಿಮೆಯಾಗಿ ಉತ್ತಮ ಲಾಭ ನಿರೀಕ್ಷಿಸಬಹುದು' ಎನ್ನುತ್ತಾರೆ.

ಲಭ್ಯವಿರುವ ವೈಜ್ಞಾನಿಕ ವಿಧಾನ, ಮಾಹಿತಿ ಹಾಗೂ ಸೂಕ್ತ ವ್ಯಕ್ತಿಗಳಿಂದ ಮಾರ್ಗದರ್ಶನ ಪಡೆದರೆ ಬರಡು ನೆಲವನ್ನೂ ಹಸಿರು ಮುಕ್ಕಳಿಸುವ ಬನವನ್ನಾಗಿಯೂ ಮಾಡಬಹುದು. (ಸಂಪರ್ಕಕ್ಕೆ– 99004 14891)

ಕೆಂಪು ಸೊಳೆ ಹಲಸು ಅರಸುತ್ತಾ..

8ನೇ ಪುಟದಿಂದ...

ಅನಂತಮೂರ್ತಿ ಅವರು ಸರ್ಕಾರಿ ನೌಕರಿ ತೊರೆದ ನಂತರ ರಿಪ್ಪನ್‌ಪೇಟೆಯಲ್ಲಿ ಮೋಟಾರು ರಿಪೇರಿ ವರ್ಕ್‌ಶಾಪ್ ಇಟ್ಟುಕೊಂಡಿದ್ದರು. ಜಮೀನು, ತೋಟದಲ್ಲಿ ಪಂಪ್‌ಸೆಟ್ ದುರಸ್ತಿಗೆಂದು ರೈತರು ಕರೆಯುತ್ತಿದ್ದರು. ಅಲ್ಲಿಗೆ ಹೋದಾಗ ಹಲಸು, ಮಾವಿನಹಣ್ಣು ತಿನ್ನಲು ಕೊಡುತ್ತಿದ್ದರು. ಅವುಗಳ ರುಚಿ ನೋಡಿ ಅಪರೂಪ ಅನ್ನಿಸಿದರೆ ಅದರ ಕುಡಿ ತಂದು ತೋಟದಲ್ಲಿ ನೆಡುತ್ತಿದ್ದರು. ಇಲ್ಲವೇ ಕಸಿ ಮಾಡುತ್ತಿದ್ದರು. ಅದರ ಬೇರೆ ಬೇರೆ ತಳಿಗಳ ಸಂರಕ್ಷಿಸುವ ಇವರ ಆಸಕ್ತಿಗೆ ಇದು ನೀರೆರೆಯಿತು. ಇಬ್ಬರು ತಂಗಿಯರಿಗೆ ವರಾನ್ವೇಷಣೆಗೆ ಹೋದಾಗಲೂ ಇವರು ಹಲಸು, ಮಾವಿನ ತಳಿ ಹುಡುಕಿ ತಂದಿದ್ದರು!

'ಹಲಸಿನಲ್ಲಿ ಎರಡು ನಮೂನೆ. ಒಂದರ ಹಣ್ಣು ಅಂಬಲಿ ರೀತಿ ನೀರಾಗುತ್ತದೆ. ಅದು ತಿನ್ನಲು ಮಜಾ ಬರೊಲ್ಲ. ಹಣ್ಣು ಕ್ರಂಚಿ ಇರಬೇಕು. ಬಯಲುಸೀಮೆಯಲ್ಲಿನ ಹಲಸಿನ ತಳಿಗಳಲ್ಲಿ ಹಣ್ಣು ಕ್ರಂಚಿಯಾಗಿಯೇ ಇರುತ್ತದೆ. ಮಲೆನಾಡಿನಲ್ಲಿ ಕಾಣಸಿಗುವ ತಳಿಗಳನ್ನು ಬಯಲುಸೀಮೆಯಲ್ಲಿ ನೆಟ್ಟರೆ ಅಂಬಲಿಯಂತೆ ಇರುವ ಹಣ್ಣು ಅಲ್ಲಿ ಕ್ರಂಚಿ ಆಗಿರುತ್ತದೆ. ಮಣ್ಣಿನ ಗುಣ, ವಾತಾವರಣ, ನೀರಿನ ಲಭ್ಯತೆ ಇದೆಲ್ಲವೂ ಹಣ್ಣಿನಲ್ಲಿನ ಸೊಳೆಯ ದೃಢತೆ ನಿರ್ಧರಿಸುತ್ತವೆ' ಎನ್ನುತ್ತಾರೆ ಅನಂತಮೂರ್ತಿ.

ಹಲಸು ಕೃಷಿ, ತಳಿ ಸಂರಕ್ಷಣೆಯಲ್ಲಿ ಅನಂತಮೂರ್ತಿ ಪುತ್ರ, ಎಂ. ಟೆಕ್ ಪದವೀಧರ ಅಮೋಘ, ಉಪನ್ಯಾಸಕಿ ವೃತ್ತಿ ತೊರೆದು ಬಂದಿರುವ ಸೊಸೆ ಕೀರ್ತಿ ಭಟ್ ಕೂಡ ಕೈಜೋಡಿಸಿದ್ದು, ಅಪರೂಪದ ತಳಿ ಸಂರಕ್ಷಣೆಯ ವಾರಸುದಾರಿಕೆಯನ್ನು ವಹಿಸಿಕೊಂಡಿದೆ.

ಅಕಾಲದಲ್ಲೂ ಹಣ್ಣು ಬಿಡುವ ತಳಿ..

ಬಯಲುಸೀಮೆ, ಮಲೆನಾಡು, ಕರಾವಳಿ ಭಾಗದಲ್ಲಿ ಬೇರೆ ಬೇರೆ ಹಂಗಾಮಿನಲ್ಲಿ ಬರುವ ಅಕಾಲದಲ್ಲಿ ಫಸಲು ಕೊಡುವ ಹಲಸಿನ ತಳಿಗಳನ್ನು ಅನಂತಮೂರ್ತಿ ಅವರ ತೋಟದಲ್ಲಿ ಕಾಣಬಹುದು.

ಹಳದಿ, ಕೆಂಪು, ತಿಳಿಹಳದಿ, ತಿಳಿಗೆಂಪು, ಕೇಸರಿ ಬಣ್ಣ, ಬಂಗಾರದ ವರ್ಣದ ತೊಳೆಗಳು ಇರುವ ಭದ್ರಾವತಿ ಯೆಲ್ಲೋ (ಭದ್ರಾವತಿಯ ವಿಐಎಸ್‌ಎಲ್ ಕಾಲೊನಿಯಲ್ಲಿ ದೊರೆತದ್ದು), ವರ್ಷವಿಡೀ ಹಣ್ಣು ಕೊಡುವ ಕೊಡಗಿನ ಬಿ–365 (ಮೂರ್ನಾಡಿನ ಬೆಳ್ಳಿಯಪ್ಪ ಅವರ ತೋಟದಲ್ಲಿ ಗುರುತಿಸಿದ್ದು), ಕೆಳದಿ ಬಕ್ಕೆ, ಬಂಗಾರ ವರ್ಣದ ತೊಳೆಯ ಕನಕ, ಚಂದ್ರ ಹಲಸು, ಪ್ರಕಾಶಚಂದ್ರ, ಥೈಲ್ಯಾಂಡ್ ಪಿಂಕ್, ಡ್ಯಾಂಗ್ ಸೂರ್ಯ, ಮಂಕಳಲೆ ರೆಡ್, ಜಿಕೆವಿಕೆ ರೆಡ್, ದೊಡ್ಡಬಳ್ಳಾಪುರ ಬಳಿಯ ತೂಬಗೆರೆಯ ರೆಡ್, ಲಾಲ್‌ಬಾಗ್ ಮಧುರಾ, ಸ್ವರ್ಣಾ, ಸೊಂಪಾಡಿ ಗಮ್‌ಲೆಸ್, ವಿಯಟ್ನಾಂ ಸೂಪರ್– ಹೀಗೆ ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ಮಾತ್ರವಲ್ಲದೇ ವಿಯಟ್ನಾಂ, ಸಿಂಗಪುರ, ಮಲೇಶಿಯಾದ ಗಿಡ್ಡ ತಳಿಯ ಹಲಸಿನಮರಗಳು ಇವರ ತೋಟದಲ್ಲಿವೆ.

ಪ್ರಜಾವಾಣಿಯಿಂದ 'ಶ್ರೀವಿಜಯ'ನ ಪತ್ತೆ

'ಪ್ರಜಾವಾಣಿ'ಯ ಕೃಷಿ ಪುರವಣಿಯಲ್ಲಿ 35 ವರ್ಷಗಳ ಹಿಂದೆ ವಿಜಯನಗರದ ಎಂ.ಸಿ ಲೇಔಟ್‌ನಲ್ಲಿ ಮನೆ ಪಕ್ಕದಲ್ಲಿ ಬೆಳೆದ ಹಲಸಿನ ಮರ ಟೆರೇಸ್‌ಗೂ ಚಾಚಿತ್ತು. ಮರದ ಟೊಂಗೆಗಳೇ ಕಾಣದಷ್ಟು ಹಣ್ಣು ಬಿಟ್ಟಿರುವ ಬಗ್ಗೆ ಚಿತ್ರ ಸಮೇತ ಲೇಖನ ಬಂದಿತ್ತು. ಅದು ವರ್ಷವಿಡೀ ಹಣ್ಣು ಬಿಡುವ ಹಲಸಿನ ಮರ ಎಂಬುದು ಉಲ್ಲೇಖಗೊಂಡಿತ್ತು. ಅದನ್ನು ಓದಿ ಬೆಂಗಳೂರಿಗೆ ತೆರಳಿ ಆ ಮನೆಯ ಮಾಲೀಕ ಶ್ರೀನಿವಾಸಮೂರ್ತಿ ಅವರನ್ನು ಕಂಡು, ಹಣ್ಣು ತಿಂದು ಮರದ ಬಗ್ಗೆ ಮಾಹಿತಿ ಪಡೆದಿದ್ದೆನು' ಎಂದು ಅನಂತಮೂರ್ತಿ ನೆನಪಿಸಿಕೊಳ್ಳುತ್ತಾರೆ.

ಎಂಸಿ ಲೇಔಟ್‌ನಲ್ಲಿ ಬೆಳೆದಿದ್ದ ಆ ಮರದ ಕುಡಿ ತಂದು ತೋಟದಲ್ಲಿ ನೆಟ್ಟಿದ್ದಾರೆ. ಅದು ಈಗ ದೊಡ್ಡ ಮರ ಆಗಿದೆ. ಆ ತಳಿಗೆ 'ಶ್ರೀವಿಜಯ' (ಶ್ರೀನಿವಾಸಮೂರ್ತಿ–ವಿಜಯನಗರ) ಎಂದು ಅನಂತಮೂರ್ತಿ ಹೆಸರಿಟ್ಟಿದ್ದಾರೆ.



ಪೇಟೆಂಟ್ ದೊರಕಿರುವ ಹಳದಿ ರುದ್ರಾಕ್ಷಿ ತಳಿಯ ಮೂಲ ಮರ

ಮೊದಲ ಓದು

ಸಾಹಿತಿ ನೋಟಕ್ಕೆ ದಕ್ಕಿದ ಲೋಕವಿದು!


ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎ.ವಿ. ನಾವಡ ಅವರ ಈ ಸಂಶೋಧನಾತ್ಮಕ ಕೃತಿ, ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಉತ್ತಮ ಮಾರ್ಗಸೂಚಿ. ಶೋಧಬಿಂಬ, ಭಾವಬಿಂಬ ಹಾಗೂ ಕೃತಿಬಿಂಬ ಎಂಬ ಮೂರು ಭಾಗಗಳಿದ್ದು, 41 ಲೇಖನಗಳು ಸಾಹಿತ್ಯಾಸಕ್ತರಿಗೆ ರಸಗವಳ. ತಮ್ಮ ಸಂಶೋಧನೆಗೆ ದಕ್ಕಿದ ಫಲಿತಾಂಶಗಳಿಗೆ ಅಭಿಪ್ರಾಯವನ್ನೂ ದಾಖಲಿಸಿ ಓದುಗರ ಮುಂದಿಟ್ಟಿದ್ದಾರೆ. ಬಿಡಿಬಿಡಿಯಾಗಿದ್ದ ತಮ್ಮದೇ ಲೇಖನಗಳಿಗೆ ಪುಸ್ತಕದ ರೂಪ ಕೊಟ್ಟಿದ್ದಾರೆ.

ಮೊದಲ ಭಾಗದಲ್ಲಿ ಸಂಶೋಧನ ಲೇಖಕ, ಲೇಖನಗಳ ಪರಿಚಯವಿದೆ. ಎರಡನೇ ಭಾಗದಲ್ಲಿ 9 ಮಹನೀಯರ ವ್ಯಕ್ತಿ ಪರಿಚಯವಿದೆ. ಮೂರನೇ ಭಾಗದಲ್ಲಿ ಪುಸ್ತಕಗಳಿಗೆ ಬರೆದ ಮುನ್ನುಡಿಗಳಿದ್ದು, ಲೇಖಕರ ತೆರೆದ ಮನಸಿನ ಪ್ರತಿಬಿಂಬದಂತಿದೆ.

ಕ್ರೈಸ್ತ ಧರ್ಮಪ್ರಚಾರಕ್ಕೆಂದು ಜರ್ಮನಿಯಿಂದ ಬಂದ ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಅವರು ಕನ್ನಡ ಕಲಿತು, ಕನ್ನಡ ತಪಸ್ವಿಯಾಗಿ, ಕನ್ನಡದ ಸೇವೆ ವೇಳೆ ಎದುರಿಸಿದ ಸಂಕಷ್ಟಗಳು, ಮುಂದೆ ನಿಘಂಟು ರಚಿಸಿರುವ ಘಟನೆಗಳು ಆಧಾರಸಹಿತ ದಾಖಲಾಗಿವೆ. ಕಿಟೆಲ್‌ರ ಗ್ರಂಥಗಳ ಆಶಯಗಳನ್ನು ಸಕಾರಣಗಳಿಂದ ವಿವರಿಸಿದ್ದು, ಲೇಖಕರ ಸಂಶೋಧನೆಯ ಆಳಕ್ಕೆ ಕನ್ನಡಿ ಹಿಡಿದಂತಿದೆ. ಕನ್ನಡಕ್ಕೆ ಕಿಟೆಲರ ಕೊಡುಗೆಯನ್ನು ವಿಭಿನ್ನರೂಪದಲ್ಲಿ ಓದುಗನ ಕೈಗಿಟ್ಟಿರುವುದು ಕೃತಿಯ ವಿಶೇಷ.

ದಾಸ ಸಾಹಿತ್ಯ, ವಚನ ಸಾಹಿತ್ಯ, ಜಾನಪದ ಸಾಹಿತ್ಯ, ಕಾದಂಬರಿ, ಕೀರ್ತನೆ, ಮಹಾಕಾವ್ಯ, ವ್ಯಾಕರಣ, ಅನುವಾದ, ವಿಮರ್ಶೆ–ಹೀಗೆ ಕನ್ನಡ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳ ಹದವಾದ ಹೂರಣವಿದೆ. ವ್ಯಕ್ತಿಚಿತ್ರ, ಸಂಶೋಧನೆ, ವ್ಯಾಖ್ಯಾನಗಳ ಮಿಳಿತವೂ ಇದೆ.

ಒಂದು ವಿಷಯವನ್ನು ಚರ್ಚಿಸುವಾಗ ಅವುಗಳಿಗೆ ಸಂಬಂಧಿಸಿದ ವಿದ್ವಾಂಸರ ಅಭಿಪ್ರಾಯ, ಚರ್ಚೆ, ಟಿಪ್ಪಣಿಗಳನ್ನು ಪುಸ್ತಕದಲ್ಲಿ ಕಾಣಬಹುದು. ಹಳೆಯ ಪದ ಪ್ರಯೋಗಗಳು ಪುಸ್ತಕವನ್ನು ಮತ್ತಷ್ಟು ಸಮೃದ್ಧಗೊಳಿಸಿದೆ. ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಲು ಲೇಖಕರು ವ್ಯಕ್ತಪಡಿಸುವ ಕಾಳಜಿ, ಉತ್ಸಾಹ, ಕಳಕಳಿ ಸಾಹಿತ್ಯ ಕೃಷಿಗೆ ದಿಕ್ಸೂಚಿಯಂತಿದೆ. ಕನ್ನಡ ಸಾಹಿತ್ಯ ಸಂಶೋಧಕರಿಗೆ ಈ ಕೃತಿ ಕೈಪಿಡಿಯಾಗಬಲ್ಲದು.



ಪು: 348 ₹390

ನೋಟಕ್ಕೆ ದಕ್ಕಿದ ಲೋಕ

ಲೇ: ಪ್ರೊ. ಎ.ವಿ. ನಾವಡ

ಪ್ರ: ರೂಪ

ಸಂ: 9342274331

ಸುಸ್ಥಿರ ಸಮಾಜಕ್ಕೆ ಸಂವಿಧಾನವೇ ಶಕ್ತಿ

ಹೆಸರು ಮತ್ತು ವಿನ್ಯಾಸದ ಸ್ವರೂಪದಲ್ಲಿ ಈ ಕಿರು ಹೊತ್ತಿಗೆಗಳು ಬೇರೆ ಬೇರೆ ಅನ್ನಿಸಿದರೂ ಅವುಗಳ ಆಂತರ್ಯದ ಸಾರ ಭಾರತೀಯ ಸಮಾಜವನ್ನೇ ಕೇಂದ್ರೀಕರಿಸಿದೆ. ದೇಶದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ–ಸಾಂಸ್ಕೃತಿಕ ನೆಲೆಯಲ್ಲಿ ಬೇರೂರಿರುವ ಸಮಸ್ಯೆಗಳನ್ನು ಗುರುತಿಸುವ ಮತ್ತು ಅದಕ್ಕೆ ಬೇರೆ ಬೇರೆ ಚಿಂತಕರ ವ್ಯಾಖ್ಯಾನಗಳ ಮೂಲಕ ಪರಿಹಾರ ಮಾರ್ಗವನ್ನು ಸೂಚಿವ ಪ್ರಯತ್ನವನ್ನು ಲೇಖಕ ಮಾಡಿದ್ದಾರೆ.

ಲೇಖಕ ಅಬ್ದುಲ್ ರಹಮಾನ್ ಹಸನ್ ಸಾಹೇಬ ಮಾಸಾಪತಿ (ಎ.ಎಚ್. ಮಾಸಾಪತಿ) ವೃತ್ತಿಯಿಂದ ಅಧ್ಯಾಪಕರಾಗಿ ರಾಜ್ಯದ ಹಲವು ಕಡೆ ಕೆಲಸ ಮಾಡಿದ್ದಾರೆ. ಅವರು ಈ ಕೃತಿಗಳಲ್ಲಿ ಭಾರತೀಯ ಸಮಾಜ, ರಾಜಕೀಯ ವ್ಯವಸ್ಥೆ, ಸಂವಿಧಾನ ಅನುಷ್ಠಾನ, ಆರ್ಥಿಕ ಪರಿಸ್ಥಿತಿ ಸೇರಿದಂತೆ ಇಲ್ಲಿನ ಭೌಗೋಳಿಕ ಪರಿಸರದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಭಾಷಾ ಸಮಸ್ಯೆ ರಾಷ್ಟ್ರೀಯ ಶಿಕ್ಷಣದ ಧೋರಣೆ ಕುರಿತು ಸಂಕ್ಷಿಪ್ತ ವಿವರವನ್ನು ನೀಡಿದ್ದಾರೆ.

ದೇಶವನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಲು ಅದಕ್ಕೆ ಸೂಕ್ತ ಸಾರ್ವಜನಿಕ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು. ಅಂದರೆ, ಅದಕ್ಕೆ ಪ್ರಧಾನವಾಗಿ ರಾಜಕೀಯ ಕಾಳಜಿಯೇ ಮುಖ್ಯ ಎನ್ನುವ ಲೇಖಕರು ಸುಸ್ಥಿರ ಅಭಿವೃದ್ಧಿಯ ಆಯಾಮಗಳನ್ನು ಗುರುತಿಸುತ್ತಾರೆ. ಅದಕ್ಕೆ ಆಡಳಿತಾತ್ಮಕವಾಗಿ ಪರಿಹಾರಗಳನ್ನು ಕಂಡುಕೊಳ್ಳಬೇಕು ಎನ್ನುವ ನಿಲುವನ್ನು ಪ್ರಕಟಿತ್ತಾರೆ.

ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಿಂದ ಗ್ರಾಮೀಣ ಆರ್ಥಿಕ ಅಭಿವೃದ್ಧಿ ಸಾಧ್ಯ ಎನ್ನುವ ಅಂಶವನ್ನು ಮಹಾತ್ಮ ಗಾಂಧಿ ಅವರ ಆರ್ಥಿಕ ಮತ್ತು ರಾಜಕೀಯ ವಿಚಾರದ ಹಿನ್ನೆಲೆಯಲ್ಲಿ ಮಾಸಾಪತಿ ಅವರು ವಿವರಿಸುತ್ತಾರೆ. ನೂರಾರು ವರ್ಷಗಳ ದೀರ್ಘಕಾಲದ ಸಾಂಪ್ರದಾಯಿಕ ದೇಸಿ ಕೃಷಿ ಪದ್ಧತಿಯನ್ನು ಸರಳ ವಿಮರ್ಶೆಯ ನೋಟದಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಂಚ ವಾರ್ಷಿಕ ಯೋಜನೆಯ ಸ್ವರೂಪ ಮತ್ತು ಅವುಗಳ ಆದ್ಯತೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮುದಾಯದ ಸಹಭಾಗಿತ್ವ ಬಹುಮುಖ್ಯ. ಸಂವಿಧಾನದ ಆಶಯದಂತೆ ದೇಶದಲ್ಲಿ ಧರ್ಮನಿರಪೇಕ್ಷ ರಾಜಕೀಯ ವ್ಯವಸ್ಥೆ ಇರಬೇಕು. ಮುಸ್ಲಿಮರ ವೈಯಕ್ತಿಕ ಕಾನೂನು ಧಾರ್ಮಿಕವಾದದ್ದು. ಅದು ಧರ್ಮ ಆಚರಣೆಯ ಮಾಡುವವರ ಖಾಸಗಿ ಆಯ್ಕೆ. ಅದರಲ್ಲಿ ಯಾವುದೇ ರೂಪದ ರಾಜಕೀಯ ಹಸ್ತಕ್ಷೇಪ ಸಲ್ಲದು. ಸಂವಿಧಾನ ನೀಡಿದ ಮೂಲಭೂತ ಹಕ್ಕಿನ ಅನುಗುಣವಾಗಿ ಜನ ತಮ್ಮ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಂವಿಧಾನದತ್ತವಾಗಿರುವ ಮೂಲಭೂತ ಹಕ್ಕುಗಳು ಮತ್ತು ರಾಜನಿರ್ದೇಶಕ ತತ್ವಗಳನ್ನು ಪಾಲಿಸುವ ಸಮನ್ವಯ ಸೂತ್ರವನ್ನು ವ್ಯವಸ್ಥೆ ಮಾನವೀಯ ನೆಲೆಯಲ್ಲಿ ಕಂಡುಕೊಳ್ಳಬೇಕು ಎನ್ನುವ ಆಶಯವನ್ನು ಲೇಖಕ ವ್ಯಕ್ತಪಡಿಸಿದ್ದಾರೆ.

ರಾಜಕೀಯ ಸಮಾಜಶಾಸ್ತ್ರ ಮತ್ತು ನೂತನ ಮಾನತಾವಾದ (ಪುಟ 120, ಬೆಲೆ 200), ಅಭಿವೃದ್ಧಿ ಮತ್ತು ಸಾರ್ವಜನಿಕ ಆಡಳಿತ ವ್ಯವಸ್ಥೆ (ಪುಟ 128, ಬೆಲೆ 150) ಕೃತಿಗಳನ್ನು ವಿಕಾಸ ಪ್ರಕಾಶನ ಪ್ರಕಟಿಸಿದೆ. ಸಂಪರ್ಕ: 7996799070

ಶಾಸನ ಮತ್ತು ಸಾಮಾಜಿಕ ಪರಿವರ್ತನೆ (ಪುಟ 160, ಬೆಲೆ 110) ಕೃತಿಯನ್ನು ಸಾಹಿತ್ಯ ನಂದನ ಪ್ರಕಟಿಸಿದೆ.



ಪು: 132 ₹100

ಗ್ರಾಮೀಣ ಆರ್ಥಿಕ ವ್ಯವಸ್ಥೆ ಮತ್ತು ಸುಧಾರಣೆಗಳು

ಲೇ: ಪ್ರೊ. ಎ.ಎಚ್. ಮಾಸಾಪತಿ

ಪ್ರ: ಸಾಹಿತ್ಯ ನಂದನ


ಸಂ: 080-23354619

ಯಾತ್ರಿಕನ ಕಣ್ಣಲ್ಲಿ ವಸಾಹತು ಇಂಡಿಯಾ

ಅಮೆರಿಕದ ವಿಲ್ ಡುರಾಂಟ್ (ವಿಲಿಯಂ ಜೇಮ್ಸ್ ಡುರಾಂಟ್) ಇತಿಹಾಸ ತಜ್ಞ. ಪತ್ನಿ ಏರಿಯಲ್ ಜೊತೆ ಸೇರಿ 'ದಿ ಸ್ಟೋರಿ ಆಫ್ ಸಿವಿಲೈಸೇಷನ್' ಎಂಬ ಹನ್ನೊಂದು ಸಂಪುಟಗಳ ಕೃತಿಯನ್ನು ರಚಿಸುತ್ತಾರೆ. ಆಗ ಇಂಡಿಯಾದ ಬಗ್ಗೆ ಹುಟ್ಟಿದ ಕುತೂಹಲದಿಂದ 1930ರಲ್ಲಿ ಭಾರತಕ್ಕೆ ಭೇಟಿ ನೀಡುತ್ತಾರೆ. ತಮ್ಮ ಪ್ರವಾಸದ ಅನುಭವವನ್ನು 'ದಿ ಕೇಸ್ ಫಾರ್ ಇಂಡಿಯಾ'ದಲ್ಲಿ ಕಟ್ಟಿಕೊಟ್ಟಿದ್ದಾರೆ. ಪತ್ರಕರ್ತ ಕೆ.ಎನ್.ವೆಂಕಟಸುಬ್ಬರಾವ್ ಅದನ್ನು 'ಇಂಡಿಯಾ ಅಂದು' ಎಂಬ ಹೆಸರಿನಲ್ಲಿ ಕನ್ನಡ ಓದುಗರಿಗೆ ಅವರ ಓದಿನ ಅನುಭವದ ಭಾವವನ್ನು ದಾಟಿಸಿದ್ದಾರೆ.

ಕೃತಿಯು ಇಂಡಿಯಾ, ಗಾಂಧೀ, ಸಂಗ್ರಾಮ/ಕ್ರಾಂತಿ, ದಿ ಕೇಸ್ ಫಾರ್ ಇಂಗ್ಲೆಂಡ್ ಎಂಬ ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ. ಜನಾಂಗಿಕ ಮತ್ತು ಭಾಷಾ ಸಾಮ್ಯತೆಯನ್ನು ಲೇಖಕ ಆರಂಭದಲ್ಲೇ ಗುರುತಿಸುತ್ತಾರೆ. ಇಂಗ್ಲೆಂಡ್ ವಸಾಹತು ಸರ್ಕಾರ ಇಂಡಿಯಾವನ್ನು ಶೋಚನೀಯವಾಗಿ ಶೋಷಣೆ ಮಾಡಿದೆ. ಉತ್ತರ ಭಾರತದ ಬಹುತೇಕರು ಗ್ರೀಕರಂತೆ, ರೋಮನ್ನರಂತೆ, ನಮ್ಮಂತೆ ಇಂಡೋ ಯೂರೋಪಿಯನ್ ಅಥವಾ ಆರ್ಯನ್ ವರ್ಗಕ್ಕೆ ಸೇರಿದವರಾಗಿದ್ದಾರೆ ಎನ್ನುವುದು ಡುರಾಂಟ್ ದನಿ.

ಬ್ರಿಟಿಷರು ಭ್ರಷ್ಟಾಚಾರದ ಮೂಲಕ ಆಡಳಿತವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಮೀರ್ ಜಾಫರನಿಗೆ ಬಂಗಾಳದ ಅಧಿಕಾರ ನೀಡಲು ಮೇಜರ್ ಜನರಲ್ ರಾಬರ್ಟ್ ಕ್ಲೈವ್ ಲಂಚ ಪಡೆದಿದ್ದ. ಸೇನೆಯಲ್ಲಿ ತಾರತಮ್ಯ ಮಾಡುತ್ತಿದ್ದರು. ಜಾತಿ ವ್ಯವಸ್ಥೆಯ ಸೂಕ್ಷ್ಮವನ್ನು, 'ಜಾತಿ ವ್ಯವಸ್ಥೆ ನಾಲ್ಕು ವರ್ಗಗಳಿಂದ ರೂಪುಗೊಂಡಿದೆ; ನೈಜ ಬ್ರಾಹ್ಮಣರು ಅಂದರೆ ಬ್ರಿಟಿಷ್ ಅಧಿಕಾರಿಗಳು, ನೈಜ ಕ್ಷತ್ರಿಯರು ಅಂದರೆ ಬ್ರಿಟಿಷ್ ಸೇನೆ, ನೈಜ ವೈಶ್ಯರು ಅಂದರೆ ಬ್ರಿಟಿಷ್ ವಣಿಕರು ಮತ್ತು ನಿಜವಾದ ಶೂದ್ರ ಮತ್ತು ಅಸ್ಪೃಶ್ಯರು ಅಂದರೆ ಹಿಂದೂ ಜನರು' ಹೀಗೆ ಡುರಾಂಟ್ ನೋಡುತ್ತಾರೆ. ಗಾಂಧಿ ಧಾರ್ಮಿಕ ವ್ಯಕ್ತಿ. ಸ್ವಾತಂತ್ರ್ಯ ಚಳವಳಿಯ ವೀರಗಾಥೆಯೂ ಸೇರಿ ದಾಸ್ಯಕ್ಕೆ ತುತ್ತಾಗಿರುವ ಇಂಡಿಯಾ ಪರಿಸ್ಥಿತಿಯನ್ನು ವಿಮರ್ಶಾ ದೃಷ್ಟಿಯಲ್ಲಿ ನೋಡಿದ್ದಾರೆ. ಇಂಡಿಯಾ ಆಧುನಿಕತೆಗೆ ಒಡ್ಡಿಕೊಳ್ಳುತ್ತಾ ತನ್ನ ಸಿರಿವಂತಿಕೆಯನ್ನು ಬರಿದುಮಾಡಿಕೊಂಡಿದೆ ಎನ್ನುವ ವಿಷಾದ ಭಾವ ಕೃತಿಯ ರೂಪ.



ಪು: 172 ₹175

ಇಂಡಿಯಾ ಅಂದು

ಮೂಲ: ವಿಲ್ ಡುರಾಂಟ್

ಭಾವಾನುವಾದ: ಕೆ.ಎನ್. ವೆಂಕಟಸುಬ್ಬರಾವ್

ಪ್ರ: ಕಾಮಧೇನು ಪುಸ್ತಕ ಭವನ

ಸಂ: 9945002444

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಾಡದಟು

ಕಾಡದಟು (ನಾ). ಕಾಡುತನದ ಪರಾಕ್ರಮ; ನಾಗರಿಕವಲ್ಲದ ಶೌರ್ಯ

(ಕಾಡು + ಅದಟು)


ಆಮಂತ್ರಣ ಮುಗಿದ ಮಾರನೆಯ ಬೆಳಗ್ಗೆ ರಾಮಲಕ್ಷ್ಮಣರು ಸುಗ್ರೀವ ಮತ್ತು ಅವನ ಸಂಗಡಿಗರನ್ನು ನಿರೀಕ್ಷಿಸುತ್ತ ಕುಳಿತಿರುತ್ತಾರೆ. ಹೊತ್ತೇರುತ್ತಿದ್ದರೂ ಆ ವಾನರರು ಬಾರದಿರಲು ಲಕ್ಷ್ಮಣನು ಅಣ್ಣನಿಗೆ ಹೇಳುವ ಮಾತಿನಲ್ಲಿ ಕುವೆಂಪು ಅವರು ವಾನರರದು ನಾಗರಿಕವಲ್ಲದ ಶೌರ್ಯ, ಅದು ಕಾಡುತನದ ಪರಾಕ್ರಮ ಎಂದು ತಿಳಿಸಲು 'ಕಾಡದಟು' ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ.

ಇನ್ನೆಗಂ
ಹೆರರ ಕಯ್ ಹಾರೈಸದೆಮ್ಮಾರ್ಪನಾಂ ನೆಮ್ಮಿ
ಮುಂಬರಿದ ನಮಗೀಗಳೇಕೀ ಕಪಿಧ್ವಜರ
ಕಾಡದಟಿನೊಂದು ಹಂಗು?

ಚಿತ್ರ-ಕಥೆ



ವಿಠ್ಠಲನ ಸನ್ನಿಧಾನದಲ್ಲಿ ಭಕ್ತ ಸಾಗರ...



ಗಮನಸೆಳೆದ ಆಂಜನೇಯನ ವೇಷಧಾರಿ.

ಚಂದ್ರಭಾಗ ತೀರದಲ್ಲಿ ವಿಠ್ಠಲ.. ವಿಠ್ಠಲ..



ಅತ್ತ ವಿಠ್ಠಲನ ಜಪ, ಇತ್ತ ತುತ್ತು ಅನ್ನಕ್ಕಾಗಿ ಬಾಲೆಯ ಕಸರತ್ತು.



ವಿಠ್ಠಲನ ಆರಾಧಿಸುತ್ತಿರುವ ಸಂತರು.

ಅತ್ತ ಆಷಾಢದ ಸಂಭ್ರಮ. ಇತ್ತ ಆಗಸದಲ್ಲಿ ಮೋಡಗಳ ಮೇಳ. ಈ ಮಧ್ಯೆ ವರುಣನ ಸಿಂಚನ. ಇಂತಹ ತಂಪಾದ ವಾತಾವರಣದ ಮಧ್ಯೆಯೇ ಮಹಾರಾಷ್ಟ್ರದ ಪಂಢರಪುರದ ವಿಠ್ಠಲನ ಸನ್ನಿಧಾನದ ಮಾರ್ಗದುದ್ದಕ್ಕೂ ವಾರಕರಿ ಸಂತ ಪರಂಪರೆಯ ಅನಾವರಣ. ನೂರಾರು ಕಿಲೋಮೀಟರ್ ದೂರದಿಂದ ಉತ್ಸಾಹದಿಂದ ಹೆಜ್ಜೆ ಹಾಕುತ್ತ ಬಂದ ಲಕ್ಷಾಂತರ ಜನರಿಂದ ಹರಿದ ಭಕ್ತಿಯ ಹೊಳೆ...

ಆಷಾಢ ಏಕಾದಶಿ ಪ್ರಯುಕ್ತ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಆಂಧ್ರ ಪ್ರದೇಶ, ತೆಲಂಗಾಣದಿಂದ ಬಂದಿದ್ದ 15 ಲಕ್ಷಕ್ಕೂ ಅಧಿಕ ಭಕ್ತರು, ಚಂದ್ರಭಾಗ ನದಿಯಲ್ಲಿ ಸ್ನಾನ ಮಾಡಿ ಸಂಭ್ರಮಿಸಿದರು. ಅಲ್ಲಿ ಎತ್ತ ನೋಡಿದರೂ ಜನವೋ ಜನ. ಕಿವಿಗೆ ವಿಠ್ಠಲನದ್ದೇ ಗುಣಗಾನದ ಇಂಪು. ಗ್ರಾಮೀಣ ಸೊಗಡಿನ ಪ್ರತಿಫಲನ. ಭಜನೆ, ಕೀರ್ತನೆ, ಆರಾಧನೆ ಮೂಲಕ ವಾರಕರಿಗಳಿಂದ ಸಾಂಸ್ಕೃತಿಕ ರಸದೌತಣ. ಹೀಗೆ ಹತ್ತಾರು ವೈವಿಧ್ಯಮಯ ಸನ್ನಿವೇಶಗಳನ್ನು 'ಪ್ರಜಾವಾಣಿ'ಯ ಕಲಬುರಗಿಯ ಹಿರಿಯ ಛಾಯಾಗ್ರಾಹಕ ತಾಜುದ್ದೀನ್ ಆಜಾದ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ.




ಯಾತ್ರಿಕರಿಂದ ಗ್ರಾಮೀಣ ಸೊಗಡಿನ ಆಟದ ಸಂಭ್ರಮ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಬ್ಬಾ ಚಕ್ಕು ಕೇಶ್ರಪ್ಪ ಕಥೆಯ — ಸಿಕ್ಕಿಕೊಂಡ ಬೆರಳು ಗುಂಡನಿಗಾಯ್ತು ಉರುಳು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಬೌಲಿಂಗ್ ಆಡಲು ಮಾಲ್‌ಗೆ ಹೋಗಿದ್ದ. ಆ ಆಟವನ್ನು ಟಿ.ವಿಯಲ್ಲಷ್ಟೇ ಗುಂಡ ನೋಡಿದ್ದ. ಅದನ್ನು ಹೇಗೆ ಆಡುವುದು ಎಂದು ಸರಿಯಾಗಿ ಆತನಿಗೆ ತಿಳಿದಿರಲಿಲ್ಲ. ಬಾಲ್‌ನಲ್ಲಿದ್ದ ಮೂರು ಗುಂಡಿಗಳಲ್ಲಿ ಬಲಗೈಯ ಮೂರು ಬೆರಳುಗಳನ್ನು ಇಟ್ಟು ಗುಂಡ ಅದನ್ನು ಉರುಳಿಸಲು ಯತ್ನಿಸಿದ. ಆ ಬಾಲ್‌ನ ಭಾರಕ್ಕೆ ಗುಂಡನಿಗೆ ಬೆರಳುಗಳನ್ನು ಬಿಡಿಸಿಕೊಳ್ಳಲು ಆಗಲಿಲ್ಲ. ಎಸೆದ ಆ ವೇಗಕ್ಕೆ ಗುಂಡನೂ ಬಾಲ್ ಜೊತೆಗೇ ಉರುಳಿಕೊಂಡು ಹೋದ.

ಗಣಿತದಲ್ಲಿ ಗರ್ದಿ ಗಮ್ಮತ್ತು

ಸೂಚ್ಯಾಂಕ ಸ್ವಾರಸ್ಯ

ಇಲ್ಲಿ ಕೊಟ್ಟಿರುವ ಕ್ರಮವಾದ ಮೂರು ಸಂಖ್ಯೆಗಳಂತೆ ಒಂದು ಸಂಖ್ಯಾಪಟ್ಟಿಯನ್ನು ತಯಾರಿಸಲಾಗಿದೆ. ಪ್ರತಿ ಮೂರು ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿದು ಆ ಮೊತ್ತದ ಅಂಕಿಗಳನ್ನು ಮತ್ತೆ ಕೂಡಿಸಿದರೆ ಅದರ ಸೂಚ್ಯಾಂಕ ಯಾವಾಗಲೂ ಮೂರು ಆಗುತ್ತದೆ.

0+	1+	2	=3						
3+	4+	5	=12	1+	2	=3			
6+	7+	8	=21	2+	1	=3			
9+	10+	11	=30	3+	0	=3			
12+	13+	14	=39	3+	9	=12	1+	2	=3

ಹೀಗೆ ನೀವೇ ಮುಂದುವರಿಸಿ

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ಕ	ಳಿ
	ಕ	ಳಿ

2

	ಕ	ಲ
	ಕ	ಲ

3

	ಸ	ಳೆ
	ಸ	ಳೆ

4

	ದ	ನೆ
	ದ	ನೆ

5

	ಜ	ರಿ
	ರಿ	ರಿ

6

	ಳ	ದಿ
	ಳ	ದಿ

ಅಕ್ಷರ ಪಟ್ಟಿ

ಸ	ಹ	ಓ	ಗು
ವಂ	ನಿಂ	ಕೆ	ವಿ
ಬ	ಜೀ	ಹಾ	ಮೊ

ಕೊಂಚ-ತಂತ್ರ

ಋತುಮಾನಗಳಿಗೆ ತಕ್ಕಂತೆ ತಿಂಗಳುಗಳನ್ನು ಗಣನೆಗೆ ತಂದುಕೊಂಡರೆ ಯಾವ ತಿಂಗಳಿಂದ ಯಾವ ತಿಂಗಳ ಅವಧಿಯನ್ನು ಮಳೆಗಾಲ ಎನ್ನುತ್ತಾರೆ ಗೊತ್ತೇ? ಜೂನ್‌ನಿಂದ ಸೆಪ್ಟಂಬರ್ ತಿಂಗಳ ಅವಧಿಗೆ ಮಳೆಗಾಲ ಎನ್ನುತ್ತಾರೆ. ಇದನ್ನು ನೆನಪಿಡಲು 'ಜೂಸೆ' ಶಬ್ದವನ್ನು ನೆನಪಿಡಿ. ಜೂ = ಜೂನ್, ಸೆ = ಸೆಪ್ಟೆಂಬರ್.

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಗಳಿಗೆ ಪದಪಟ್ಟಿಯಿಂದ ಸೂಕ್ತವಾದ ಜೋಡಿ ಪದ ಆಯ್ದು ಹೊಂದಿಸಿ ನಾಲ್ಕಕ್ಷರ ಅರ್ಥಬದ್ಧ ಪದ ಮಾಡಿ.

ಪಟ	ದಂಟು	ರತ್ನ	ವಾಸ	ಸಾಕ್ಷಿ
ವಸ್ತ್ರ	ಮಿತಿ	ಪಾರು	ಕರು	ಬೊಟ್ಟು

1	ಮುತ್ತು	
2	ದೃಷ್ಟಿ	
3	ಗಡಿ	
4	ಕರ	
5	ಇತಿ	
6	ಗಾಳಿ	
7	ಕರ	
8	ವನ	
9	ಮನ	
10	ದನ	

ಪದ ಶೋಧ

ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಂದು ಪಕ್ಷಿ ಹೆಸರನ್ನು ಹುಡುಕಿ.

1. ಜಗಮೆಚ್ಚಿದ ಮಗ
....
2. ಜನ್ಮರಹಸ್ಯ
....
3. ಕುಲಗೌರವ
....
4. ಕೋಟಿಗೊಬ್ಬ
....
5. ಗರುಡರೇಖೆ
....

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸ ಪದಬಂಧ: 1.ಬರಡು-ಕೊರಡು 2.ಬೆರಳು-ಕೊರಳು 3.ನೀಡಿಕೆ-ಬೇಡಿಕೆ 4.ಸಗಣಿ-ತಗಣಿ 5.ಸಲಿಗೆ-ಸುಲಿಗೆ 6.ಬಗಲು-ಹಗಲು

ಜಾಣಪದ ಆಟ: 1.ಕಾಲುವೆ 2.ಮರಣ 3.ಗರಿಷ್ಠ 4.ಸರಳ 5.ಕರಡಿ 6.ಕೋವಿದ 7.ಪಟಗ 8.ಹರವಿ 9.ಮಾವುತ 10.ಕಿವಿರು

ಮೋಜಿನ ಇಂಗ್ಲಿಷ್: Near, Next, Noon, Nine, Name, Nest, None, Nose, Neat, Neem

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಸಿದ್ರಾಮರೆಡ್ಡಿ
ಗಬ್ಬೂರು



ಪೃಥ್ವಿ ಎನ್.
ತುಮಕೂರು




ಸಮೃದ್ಧಿ
ಬೆಂಗಳೂರು



ನಿಶ್ಚಿತ ಎಸ್.
ರಾಯಚೂರು



ನವನೀತ್ ಪಿಆರ್.
ಹೊಳೆಹೊನ್ನೂರು



ಆದ್ಯ ಎಚ್.ಎಂ.
ಮೈಸೂರು

ರಿಟರ್ನ್ಸ್ ಸಲ್ಲಿಕೆಗೆ 4 ದಿನ ಬಾಕಿ



ನವದೆಹಲಿ (ಪಿಟಿಐ): 2024–25ನೇ ಮೌಲ್ಯಮಾಪನ ವರ್ಷದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಗೆ ಜುಲೈ 31 ಕೊನೆಯ ದಿನವಾಗಿದೆ.

ಆಯಾ ವರ್ಷದ ರಿಟರ್ನ್ಸ್‌ಗಳನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 139(1)ರ ಅನ್ವಯ ಈ ಅವಧಿಯೊಳಗೆ ಸಲ್ಲಿಸಬೇಕಿದೆ. ಈ ಗಡುವು ಮೀರಿ ರಿಟರ್ನ್ಸ್ ಸಲ್ಲಿಸುವುದಿದ್ದರೆ ₹5,000 ದಂಡ ಪಾವತಿಸಬೇಕಾಗುತ್ತದೆ.

ಇಲ್ಲಿಯವರೆಗೆ ಇ–ಪೋರ್ಟಲ್‌ನಲ್ಲಿ 5 ಕೋಟಿಗೂ ಹೆಚ್ಚು ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದಾರೆ. ಕಳೆದ ಮೌಲ್ಯಮಾಪನ ವರ್ಷಕ್ಕೆ ಹೋಲಿಸಿದರೆ ಇಲ್ಲಿಯವರೆಗೆ ರಿಟರ್ನ್ಸ್ ಸಲ್ಲಿಕೆಯಲ್ಲಿ ಶೇ 8ರಷ್ಟು ಏರಿಕೆಯಾಗಿದೆ ಎಂದು ಆದಾಯ ತೆರಿಗೆ ಇಲಾಖೆಯು ಶನಿವಾರ 'ಎಕ್ಸ್'ನಲ್ಲಿ ತಿಳಿಸಿದೆ.

ಶುಕ್ರವಾರ ಒಂದೇ ದಿನ 28 ಲಕ್ಷ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಿದ್ದಾರೆ.

ಆದಾಯ ತೆರಿಗೆ ಪಾವತಿಗೆ ಬಳಸುವ ಐಟಿ ಪೋರ್ಟಲ್ ಅನ್ನು ಇನ್ಫೊಸಿಸ್ ಕಂಪನಿಯು ನಿರ್ವಹಣೆ ಮಾಡುತ್ತದೆ. ತೆರಿಗೆದಾರರಿಗೆ ಯಾವುದೇ ತಾಂತ್ರಿಕ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸುವಂತೆ ಕೇಂದ್ರವು ಕಂಪನಿಗೆ ಸೂಚಿಸಿದೆ. ಇ-ಫೈಲಿಂಗ್‌ನ ಗರಿಷ್ಠ ಅವಧಿಯಲ್ಲಿ ನಿರಂತರವಾಗಿ ಸೇವೆ ಒದಗಿಸುವುದಾಗಿ ಕಂಪನಿಯು ಭರವಸೆ ನೀಡಿದೆ.

'ಇಲಾಖೆಯೊಂದಿಗೆ ಇನ್ಫೊಸಿಸ್ ತಾಂತ್ರಿಕ ಸಹಭಾಗಿತ್ವ ಹೊಂದಿದ್ದು, ಪೋರ್ಟಲ್ ಅನ್ನು ನಿರ್ವಹಣೆ ಮಾಡುತ್ತಿದೆ. 2023–24ನೇ ಮೌಲ್ಯಮಾಪನ ವರ್ಷದಲ್ಲಿ 8.61 ಕೋಟಿ ರಿಟರ್ನ್ಸ್ ಸಲ್ಲಿಕೆಯಾಗಿದ್ದವು' ಎಂದು ಇಲಾಖೆಯು ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹500
12 ಕ್ಕೆ	₹70
ಮೈಸೂರು	
100ಕ್ಕೆ	₹500

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹207
ಗುಡ್ ಲಾಟ್	₹195

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹16000
ಎಸಿ	₹9660
ಆರ್‌ಪಿ	₹18500
ಆರ್‌ಸಿ	₹9880

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹220-445
ದ್ವಿತಳಿ (ಬಿ.ವಿ)	₹222-585

ನವೋದ್ಯಮ: ಕರ್ನಾಟಕಕ್ಕೆ ದ್ವಿತೀಯ ಸ್ಥಾನ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಸಕ್ತ ವರ್ಷದ ಜೂನ್ ಅಂತ್ಯಕ್ಕೆ ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯಿಂದ (ಡಿಪಿಐಐಟಿ) ಮಾನ್ಯತೆ ಪಡೆದಿರುವ 1.40 ಲಕ್ಷ ನವೋದ್ಯಮಗಳಿವೆ.


ಮಹಾರಾಷ್ಟ್ರವು ಮಾನ್ಯತೆ ಪಡೆದಿರುವ ಅತಿಹೆಚ್ಚು ನವೋದ್ಯಮಗಳನ್ನು ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆ ಪಡೆದಿದೆ. ಕರ್ನಾಟಕವು ಎರಡನೇ ಸ್ಥಾನದಲ್ಲಿದೆ.

2016ರ ಜನವರಿಯಲ್ಲಿ ನವೋದ್ಯಮಗಳ (ಸ್ಟಾರ್ಟ್‌ಅಪ್) ಅಭಿವೃದ್ಧಿಗೆ ಪೂರಕವಾದ ವಾತಾವರಣ ಕಲ್ಪಿಸಲು ಕೇಂದ್ರ ಸರ್ಕಾರವು ಹೊಸದಾಗಿ ಕ್ರಿಯಾ ಯೋಜನೆ ರೂಪಿಸಿತ್ತು. ಇದರಡಿ ಪ್ರೋತ್ಸಾಹಧನ ಮತ್ತು ಆದಾಯ ತೆರಿಗೆ ವಿನಾಯಿತಿ ಸೌಲಭ್ಯ ಪಡೆಯಲು ಈ ನವೋದ್ಯಮಗಳು ಅರ್ಹತೆ ಪಡೆದಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನವೋದ್ಯಮಗಳಿಗೆ ಪೂರಕವಾದ ಪರಿಸರ ವ್ಯವಸ್ಥೆ ರೂಪಿಸುವುದು ಹಾಗೂ ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡುವುದೇ ಈ ಯೋಜನೆಯ ಉದ್ದೇಶವಾಗಿತ್ತು. ಜೊತೆಗೆ, ನವೋದ್ಯಮಗಳಲ್ಲಿ ಬಂಡವಾಳ ಹೂಡಿಕೆಯ ಪ್ರಮಾಣ ಹೆಚ್ಚಿಸುವ ಗುರಿ ಹೊಂದಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶ ಸೃಷ್ಟಿಸುವ ಗುರಿಯನ್ನು ಸರ್ಕಾರ ಹೊಂದಿತ್ತು.

ನವೋದ್ಯಮಗಳಲ್ಲಿ ಹೂಡಿಕೆ ಹೆಚ್ಚಿಸಲು ಪರ್ಯಾಯ ಹೂಡಿಕೆ ನಿಧಿ ಯೋಜನೆ (ಎಐಎಫ್) ರೂಪಿಸಲಾಗಿದೆ. ಇದರಡಿ 2023ರಲ್ಲಿ 148 ನವೋದ್ಯಮಗಳಲ್ಲಿ ₹3,366 ಕೋಟಿ ಹೂಡಿಕೆಯಾಗಿದೆ. ಪ್ರಸಕ್ತ ವರ್ಷದ ಜೂನ್ ಅಂತ್ಯಕ್ಕೆ 96 ನವೋದ್ಯಮಗಳಲ್ಲಿ ₹805 ಕೋಟಿ ಹೂಡಿಕೆಯಾಗಿದೆ.

ಸಾಲ ಎಷ್ಟು?: ಕ್ರೆಡಿಟ್ ಗ್ಯಾರಂಟಿ ಯೋಜನೆಯಡಿ 2023ರಲ್ಲಿ 107 ನವೋದ್ಯಮಗಳಿಗೆ ಕೇಂದ್ರವು ₹271 ಕೋಟಿ ಸಾಲ ಸೌಲಭ್ಯ ಕಲ್ಪಿಸಿದೆ. ಪ್ರಸಕ್ತ ವರ್ಷದ ಜೂನ್ ಅಂತ್ಯಕ್ಕೆ 75 ನವೋದ್ಯಮಗಳಿಗೆ ₹154 ಕೋಟಿ ಸಾಲ ವಿತರಿಸಲಾಗಿದೆ.



ಏನಿದು ಸೀಡ್ ಫಂಡ್?

ಮಾರುಕಟ್ಟೆ ಪ್ರವೇಶಿಸುವ ನವೋದ್ಯಮಗಳು ಸ್ಥಿರತೆ ಕಾಯ್ದುಕೊಳ್ಳಲು 2ರಿಂದ 3 ವರ್ಷಗಳು (ಇನ್‌ಕ್ಯುಬೇಟರ್ ಹಂತ) ಬೇಕಿದೆ. ಈ ವೇಳೆ ಅವುಗಳಿಗೆ ಹೆಚ್ಚು ಆರ್ಥಿಕ ನೆರವಿನ ಅಗತ್ಯವಿದೆ.

ಹಾಗಾಗಿ, ಅವುಗಳಿಗೆ ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲು ಅನುವಾಗುವಂತೆ ಕೇಂದ್ರ ಸರ್ಕಾರವು 2021ರಲ್ಲಿ ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಯೋಜನೆಯನ್ನು ಜಾರಿಗೊಳಿಸಿದೆ. ಇದರಡಿ ₹50 ಲಕ್ಷದ ತನಕ ಆರ್ಥಿಕ ನೆರವು ಕಲ್ಪಿಸಲಾಗುತ್ತದೆ. ವಿವಿಧ ಹಂತದಲ್ಲಿ ಈ ನೆರವು ದೊರೆಯಲಿದೆ. ಈ ಯೋಜನೆಯಡಿ 2023ರಲ್ಲಿ 1,025 ನವೋದ್ಯಮಗಳಿಗೆ ₹186.19 ಕೋಟಿ ನೆರವು ಸಿಕ್ಕಿದೆ. ಪ್ರಸಕ್ತ ವರ್ಷದ ಜೂನ್ ಅಂತ್ಯದವರೆಗೆ 592 ನವೋದ್ಯಮಗಳಿಗೆ ₹90.52 ಕೋಟಿ ವಿತರಿಸಲಾಗಿದೆ.

ಏಂಜೆಲ್ ತೆರಿಗೆ ರದ್ದು

ನವೋದ್ಯಮಗಳಲ್ಲಿ ಬಂಡವಾಳ ತೊಡಗಿಸುವ ಹೂಡಿಕೆದಾರರ ಮೇಲೆ ಶೇ 30.9ರಷ್ಟು ಏಂಜೆಲ್ ತೆರಿಗೆ ವಿಧಿಸಲಾಗುತ್ತಿತ್ತು. ಷೇರು ಮಾರುಕಟ್ಟೆಗಳಲ್ಲಿ ನೋಂದಾಯಿತ ಆಗಿರದ ಕಂಪನಿಗಳು ಅಥವಾ ನವೋದ್ಯಮಗಳಲ್ಲಿ ಅವುಗಳ ನ್ಯಾಯಸಮ್ಮತ ಮಾರುಕಟ್ಟೆ ಮೌಲ್ಯಕ್ಕಿಂತ ಅಧಿಕ ಮಟ್ಟದಲ್ಲಿ ಮಾಡುವ ಹೂಡಿಕೆಗೆ ಈ ತೆರಿಗೆ ಅನ್ವಯವಾಗುತ್ತಿತ್ತು.

ಆದರೆ, 2016ರ ಏಪ್ರಿಲ್ ನಂತರ ಸ್ಥಾಪಿಸಲ್ಪಟ್ಟ ಹಾಗೂ ಡಿಪಿಐಐಟಿಯಿಂದ ಮಾನ್ಯತೆ ಪಡೆದಿರುವ ನವೋದ್ಯಮಗಳಿಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 (ಐಎಸಿ) ಅಡಿ ಈ ತೆರಿಗೆಯಿಂದ ವಿನಾಯಿತಿ ದೊರೆಯಲಿದೆ.

2024–25ನೇ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ಈ ತೆರಿಗೆಯನ್ನು ರದ್ದುಪಡಿಸಲಾಗಿದೆ. ದೇಶದಲ್ಲಿ ನವೋದ್ಯಮಗಳಿಗೆ ಪ್ರೋತ್ಸಾಹ ಹಾಗೂ ಹೂಡಿಕೆಗೆ ಉತ್ತೇಜನ ನೀಡಲು ಸರ್ಕಾರವು ಈ ಕ್ರಮಕೈಗೊಂಡಿದೆ.

'ಸಕ್ಕರೆ ಎಂಎಸ್‌ಪಿ ಶೀಘ್ರ ಹೆಚ್ಚಳ'

ಮುಂಬೈ (ಪಿಟಿಐ): 'ಕೇಂದ್ರ ಸರ್ಕಾರವು ಶೀಘ್ರವೇ ಸಕ್ಕರೆ ಮೇಲಿನ ಕನಿಷ್ಠ ಮಾರಾಟ ದರವನ್ನು (ಎಂಎಸ್‌ಪಿ) ಹೆಚ್ಚಿಸಲಿದೆ' ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ತಿಳಿಸಿದ್ದಾರೆ.

ಅಖಿಲ ಭಾರತೀಯ ಸಕ್ಕರೆ ವ್ಯಾಪಾರ ಸಂಘದಿಂದ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದರ ಹೆಚ್ಚಳ ಕುರಿತು ಚರ್ಚಿಸಲಾಗಿದೆ. ಮುಂಬರುವ ದಿನಗಳಲ್ಲಿ ಇದು ಕಾರ್ಯಗತಗೊಳ್ಳಲಿದೆ' ಎಂದು ಹೇಳಿದರು.

2019ರಲ್ಲಿ ಪ್ರತಿ ಕೆ.ಜಿಗೆ ಮಾರಾಟ ದರವನ್ನು ₹31ಕ್ಕೆ ಹೆಚ್ಚಿಸಲಾಗಿತ್ತು. ಅಂದಿನಿಂದ ಇಲ್ಲಿಯವರೆಗೂ ದರ ಏರಿಕೆ ಮಾಡಿಲ್ಲ. ಆದರೆ, ಕೇಂದ್ರ ಸರ್ಕಾರವು ರೈತರಿಗೆ ಅನುಕೂಲ ಕಲ್ಪಿಸಲು ಕಬ್ಬಿಗೆ ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರವನ್ನು (ಎಫ್‌ಆರ್‌ಪಿ) ಹೆಚ್ಚಿಸಿದೆ ಎಂದು ವಿವರಿಸಿದರು.

ಸಕ್ಕರೆ ಉತ್ಪಾದನಾ ವೆಚ್ಚವು ಏರಿಕೆಯಾಗುತ್ತಿದೆ. ಇದರಿಂದ ಕಾರ್ಖಾನೆಗಳ ನಿರ್ವಹಣೆಗೆ ತೊಂದರೆಯಾಗುತ್ತಿದೆ. ಹಾಗಾಗಿ, ಪ್ರತಿ ಕೆ.ಜಿಗೆ ₹42 ಎಂಎಸ್‌ಪಿ ಏರಿಕೆ ಮಾಡಬೇಕು ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಸಿಎಸ್‌ಎಫ್) ಒತ್ತಾಯಿಸಿದೆ.

ಕಬ್ಬು ನಾಟಿ ಎಷ್ಟು?: 2024–25ನೇ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಸಕ್ಕರೆ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಕಳೆದ ಮಾರುಕಟ್ಟೆ ವರ್ಷದಲ್ಲಿ ಇದೇ ಅವಧಿಯಲ್ಲಿ 57 ಲಕ್ಷ ಹೆಕ್ಟೇರ್‌ನಲ್ಲಿ ಕಬ್ಬು ನಾಟಿ ಮಾಡಲಾಗಿತ್ತು. ಈ ಬಾರಿ ಇಲ್ಲಿಯವರೆಗೆ 58 ಲಕ್ಷ ಹೆಕ್ಟೇರ್‌ನಲ್ಲಿ ನಾಟಿ ಕಾರ್ಯ ಪೂರ್ಣಗೊಂಡಿದೆ ಎಂದು ಚೋಪ್ರಾ ತಿಳಿಸಿದ್ದಾರೆ.

ದೇಶದಲ್ಲಿ 2022–23ರ ಮಾರುಕಟ್ಟೆ ವರ್ಷದಲ್ಲಿ 32.8 ದಶಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆಯಾಗಿತ್ತು. 2023–24ರಲ್ಲಿ 32 ದಶಲಕ್ಷ ಟನ್ ಉತ್ಪಾದನೆಯಾಗಿದೆ. ದೇಶೀಯ ಮಾರುಕಟ್ಟೆಯ ಬೇಡಿಕೆಯು 27 ದಶಲಕ್ಷ ಟನ್ ಆಗಿದೆ.

ಐಸಿಐಸಿಐ ಬ್ಯಾಂಕ್‌ಗೆ ₹11,696 ಕೋಟಿ ಲಾಭ

ಮುಂಬೈ (ಪಿಟಿಐ): ದೇಶದ ಖಾಸಗಿ ವಲಯದ ಎರಡನೇ ಅತಿದೊಡ್ಡ ಬ್ಯಾಂಕ್ ಆಗಿರುವ ಐಸಿಐಸಿಐ ಬ್ಯಾಂಕ್, 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹11,696 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹10,636 ಕೋಟಿ ಲಾಭವಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 9.96ರಷ್ಟು ಏರಿಕೆ ಆಗಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹38,763 ಕೋಟಿ ವರಮಾನಗಳಿಸಿತ್ತು. ಈ ಬಾರಿ ₹45,998 ಕೋಟಿ ಗಳಿಸಿದೆ. ವೆಚ್ಚದ ಪ್ರಮಾಣವು ₹29,973 ಕೋಟಿ ಆಗಿದೆ.

ಮುಂದಿನ ದಿನಗಳಲ್ಲಿ ಎದುರಾಗ ಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹1,292 ಕೋಟಿಯಿಂದ ₹1,332 ಕೋಟಿಗೆ ಏರಿಕೆಯಾಗಿದೆ.

ಮೂರೇ ತಿಂಗಳಲ್ಲಿ 3,009 ಟನ್ ವಶ

ಅಡಿಕೆ ಅಕ್ರಮ ಆಮದು ಹೆಚ್ಚಳ

ಪ್ರಜಾವಾಣಿ ವಾರ್ತೆ



ನವದೆಹಲಿ: 2024-25ನೇ ಆರ್ಥಿಕ ವರ್ಷದ ಜೂನ್ ಅಂತ್ಯದವರೆಗೆ ದೇಶದಲ್ಲಿ ಅಡಿಕೆ ಅಕ್ರಮ ಆಮದಿನ 84 ಪ್ರಕರಣಗಳನ್ನು ಪತ್ತೆಹಚ್ಚಿ 3,009 ಟನ್ ವಶಪಡಿಸಿಕೊಳ್ಳಲಾಗಿದೆ. ವರ್ಷದಿಂದ ವರ್ಷಕ್ಕೆ ಅಡಿಕೆ ಅಕ್ರಮ ಆಮದಿನ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ರಾಜ್ಯ ಸಚಿವ ಜಿತಿನ್ ಪ್ರಸಾದ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಸದಸ್ಯ ಡಿ. ವೀರೇಂದ್ರ ಹೆಗ್ಗಡೆ ಅವರ ಪ್ರಶ್ನೆಗೆ ಸಚಿವರು, ಲಿಖಿತ ಉತ್ತರ ನೀಡಿದ್ದಾರೆ.

'ಕೇಂದ್ರೀಯ ಪರೋಕ್ಷ ತೆರಿಗೆಗಳು ಹಾಗೂ ಕಸ್ಟಮ್ಸ್ ಮಂಡಳಿಯ ತನಿಖಾ ತಂಡವು 2020–21ರಲ್ಲಿ 278 ಪ್ರಕರಣಗಳನ್ನು ಪತ್ತೆ ಹಚ್ಚಿ 3,449 ಟನ್ ವಶಪಡಿಸಿಕೊಂಡಿತ್ತು. 2021–22ರಲ್ಲಿ 260 ಪ್ರಕರಣಗಳಲ್ಲಿ 3,388 ಟನ್, 2022–23ರಲ್ಲಿ 454 ಪ್ರಕರಣಗಳಲ್ಲಿ 3,400 ಟನ್ ಹಾಗೂ 2023–24ರಲ್ಲಿ 643 ಪ್ರಕರಣಗಳಲ್ಲಿ 12,881 ಟನ್ ಅಡಿಕೆ ವಶಪಡಿಸಿಕೊಂಡಿತ್ತು' ಎಂದು ಮಾಹಿತಿ ನೀಡಿದ್ದಾರೆ.

ತನಿಖಾ ತಂಡವು ವಿಮಾನ ನಿಲ್ದಾಣಗಳಲ್ಲಿ 2021–22ರಲ್ಲಿ 4 ಪ್ರಕರಣ ಪತ್ತೆಹಚ್ಚಿ 15,296 ಕೆ.ಜಿ, 2022–23ರಲ್ಲಿ 12 ಪ್ರಕರಣಗಳಲ್ಲಿ 14,188 ಕೆ.ಜಿ, 2023–24ರಲ್ಲಿ 3 ಪ್ರಕರಣಗಳಲ್ಲಿ 2,116 ಕೆ.ಜಿ, 2024–25ರಲ್ಲಿ ಜೂನ್‌ವರೆಗೆ 3 ಪ್ರಕರಣಗಳಲ್ಲಿ 10,000 ಕೆ.ಜಿ ಅಡಿಕೆಯನ್ನು ವಶಪಡಿಸಿಕೊಂಡಿದೆ ಎಂದು ಹೇಳಿದ್ದಾರೆ.

'ತನಿಖಾ ತಂಡವು ಅಡಿಕೆಯ ಅಕ್ರಮ ಸಾಗಣೆ ಮೇಲೆ ನಿಗಾ ಇಟ್ಟಿದೆ. ದೇಶದ ರೈತರ ಹಿತ ರಕ್ಷಿಸಲು ಬದ್ಧವಾಗಿದೆ' ಎಂದು ತಿಳಿಸಿದ್ದಾರೆ. 'ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಆಮದು ಪ್ರಮಾಣ ಹೆಚ್ಚಳ ಗಮನಿಸಿದ ಸಚಿವಾಲಯವು, ಅಡಿಕೆಯ ಆಮದಿನ ಕನಿಷ್ಠ ದರವನ್ನು ಪ್ರತಿ ಕೆ.ಜಿ.ಗೆ ₹251ಯಿಂದ ₹351ಕ್ಕೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಿದೆ. ರೈತರ ಹಿತರಕ್ಷಣೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಶೇ 100ರಷ್ಟು ಅಡಿಕೆ ಆಮದು ಸುಂಕ ವಿಧಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

ಪಿಎನ್‌ಬಿಗೆ ದುಪ್ಪಟ್ಟು ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ₹3,252 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಎರಡು ಪಟ್ಟು ಏರಿಕೆಯಾಗಿದೆ.

2023–24ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹1,255 ಕೋಟಿ ಲಾಭಗಳಿಸಲಾಗಿತ್ತು. ವಸೂಲಾಗದ ಸಾಲದ ಪ್ರಮಾಣದಲ್ಲಿ ಇಳಿಕೆಯಾಗಿದೆ. ಜೊತೆಗೆ, ಬಡ್ಡಿ ವರಮಾನದಲ್ಲಿ ಏರಿಕೆಯಾಗಿದೆ. ಹಾಗಾಗಿ, ಈ ತ್ರೈಮಾಸಿಕದಲ್ಲಿ ಲಾಭ ಹೆಚ್ಚಳವಾಗಿದೆ ಎಂದು ಬ್ಯಾಂಕ್, ಶನಿವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹28,579 ಕೋಟಿ ವರಮಾನ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹32,166 ಕೋಟಿ ಗಳಿಸಿದೆ. ಕಳೆದ ವರ್ಷ ₹25,145 ಕೋಟಿ ಬಡ್ಡಿ ವರಮಾನಗಳಿಸಿತ್ತು. ಈ ಬಾರಿ ₹28,556 ಕೋಟಿ ಗಳಿಸಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 7.73ರಿಂದ ಶೇ 4.98ಕ್ಕೆ ಕುಗ್ಗಿದೆ. ನಿವ್ವಳ ಎನ್‌ಪಿಎ ಶೇ 1.98ರಿಂದ ಶೇ 0.60ಕ್ಕೆ ಇಳಿಕೆಯಾಗಿದೆ.

ಮಾರುತಿ ಸುಜುಕಿಗೆ ನೋಟಿಸ್

ನವದೆಹಲಿ (ಪಿಟಿಐ): 2019–20ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ₹779 ಕೋಟಿ ತೆರಿಗೆ ಬಾಕಿ ಉಳಿಸಿಕೊಂಡಿರುವ ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್‌ಗೆ, ಆದಾಯ ತೆರಿಗೆ ಇಲಾಖೆಯು ಷೋಕಾಸ್ ನೋಟಿಸ್ ನೀಡಿದೆ.

'ತೆರಿಗೆ ಪಾವತಿ ಬಾಕಿ ಸಂಬಂಧ ಕಂಪನಿ ವಿರುದ್ಧ ದಂಡಾರ್ಹ ಪ್ರಕ್ರಿಯೆ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಈ ನೋಟಿಸ್ ನೀಡಲಾಗಿದೆ' ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಫ್ರಾನ್ಸ್: ಎರಡನೇ ದಿನವೂ ರೈಲು ಸಂಚಾರ ವ್ಯತ್ಯಯ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್‌ನಾದ್ಯಂತ ಸತತ ಎರಡನೇ ದಿನವೂ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ಸಾವಿರಾರು ಪ್ರಯಾಣಿಕರು ತೊಂದರೆ ಅನುಭವಿಸಿದ್ದಾರೆ.

ಸೋಮವಾರದ ವೇಳೆಗೆ ರೈಲು ಸಂಚಾರ ಸಹಜ ಸ್ಥಿತಿಗೆ ಬರಲಿದೆ ಎಂದು ಫ್ರಾನ್ಸ್‌ನಲ್ಲಿ ರೈಲ್ವೆ ಸಂಪರ್ಕವನ್ನು ನಿರ್ವಹಿಸುತ್ತಿರುವ ಎಸ್‌ಎನ್‌ಸಿಎಫ್ ರೈಲು ಕಂಪನಿಯ ಮುಖ್ಯಸ್ಥ ಜೀನ್ ಪಿಯೆರ್ ಫರಾಂಡೊ ಶನಿವಾರ ಹೇಳಿದ್ದಾರೆ. ರೈಲುಗಳು ರದ್ದಾಗಿರುವುರಿಂದ ವಾರಾಂತ್ಯದ ಅವಧಿಯಲ್ಲಿ 1.60 ಲಕ್ಷ ಪ್ರಯಾಣಿಕರು ತೊಂದರೆ ಅನುಭವಿಸಿದ್ದಾರೆ ಎಂದು ಸಾರಿಗೆ ಇಲಾಖೆಯ ಮೂಲಗಳು ಹೇಳಿವೆ.

ಫ್ರಾನ್ಸ್‌ನ ಉತ್ತರ, ಪಶ್ಚಿಮ ಮತ್ತು ಪೂರ್ವ ಭಾಗದ ಮಾರ್ಗಗಳಲ್ಲಿ ಸಂಚರಿಸಬೇಕಿದ್ದ ರೈಲುಗಳಲ್ಲಿ ಮೂರನೇ ಒಂದರಷ್ಟು ರೈಲುಗಳು ರದ್ದಾಗಿವೆ.

ಪ್ಯಾರಿಸ್– ಲಂಡನ್ ನಡುವಣ 'ಯೂರೊಸ್ಟಾರ್' ಹೈಸ್ಪೀಡ್ ರೈಲುಗಳಲ್ಲಿ ಕಾಲು ಭಾಗದಷ್ಟು ರೈಲುಗಳು ಶನಿವಾರ ಸಂಚಾರಿಸಲಿಲ್ಲ.

ಒಲಿಂಪಿಕ್ ಕೂಟದ ಉದ್ಘಾಟನಾ ಸಮಾರಂಭಕ್ಕೆ ಕೆಲವೇ ಗಂಟೆಗಳ ಮುನ್ನ ಶುಕ್ರವಾರ ಪ್ಯಾರಿಸ್‌ನ ವಿವಿಧೆಡೆ ರೈಲು ಸಂಪರ್ಕ ಜಾಲದ ಮೇಲೆ ಸಂಘಟಿತ ದಾಳಿ ನಡೆದಿತ್ತು. ಸಿಗ್ನಲ್ ಮೂಲಸೌಕರ್ಯ, ಕೇಬಲ್‌ಗಳು ಸೇರಿ ರೈಲ್ವೆಗೆ ಸೇರಿದ ಸ್ವತ್ತುಗಳಿಗೆ ಬೆಂಕಿ ಹಚ್ಚಲಾಗಿತ್ತು. ಇದರಿಂದ ಫ್ರಾನ್ಸ್‌ನಾದ್ಯಂತ ರೈಲು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ದಾಳಿಯ ಹೊಣೆಯನ್ನು ಯಾರೂ ಹೊತ್ತುಕೊಂಡಿಲ್ಲ. 'ಘಟನೆ ಬಗ್ಗೆ ತನಿಖೆ ಮುಂದುವರಿದಿದೆ. ವಿಧ್ವಂಸಕ ಕೃತ್ಯದ ಹಿಂದಿರುವವರ ಕುರಿತು ಕೆಲವೊಂದು ಸುಳಿವು ಲಭಿಸಿದ್ದು, ಅವರನ್ನು ಶೀಘ್ರದಲ್ಲೇ ಪತ್ತೆ ಮಾಡಲಾಗುವುದು' ಎಂದು ಫ್ರಾನ್ಸ್ ಒಳಾಡಳಿತ ಸಚಿವ ಜೆರಾಲ್ಡ್ ಡಾರ್ಮಾನಿನ್ ಹೇಳಿದ್ದಾರೆ.

ಅನುಮಾನಗಳಿಗೆ ತೆರೆ ಎಳೆದ ಎಫ್‌ಬಿಐ

ಗುಂಡೇಟಿನಿಂದಲೇ ಟ್ರಂಪ್‌ಗೆ ಗಾಯ

ವಾಷಿಂಗ್ಟನ್ (ಎಪಿ/ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಿವಿಗೆ ಗುಂಡೇಟಿನಿಂದಲೇ ಗಾಯ ಆಗಿದೆ ಎಂಬುದನ್ನು ಎಫ್‌ಬಿಐ ಶುಕ್ರವಾರ ದೃಢಪಡಿಸಿದ್ದು, ಈ ಬಗ್ಗೆ ಎದ್ದಿದ್ದ ಊಹಾಪೋಹಗಳಿಗೆ ಸುಮಾರು ಎರಡು ವಾರಗಳ ಬಳಿಕ ತೆರೆ ಎಳೆದಿದೆ.

'ಟ್ರಂಪ್ ಅವರ ಕಿವಿಗೆ ತಾಗಿರುವುದು ಗುಂಡು ಎಂಬುದು ಖಚಿತವಾಗಿದೆ. ದಾಳಿಕೋರನ ರೈಫಲ್‌ನಿಂದ ಸಿಡಿದ ಗುಂಡು ನೇರವಾಗಿ ಕಿವಿಯನ್ನು ಸವರಿಕೊಂಡು ಹೋಗಿದೆ ಅಥವಾ ಗುಂಡಿನ ಚೂರು ತಾಗಿ ಗಾಯ ಆಗಿದೆ' ಎಂದು ಎಫ್‌ಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿರುವ ಟ್ರಂಪ್ ಅವರು ಜುಲೈ 13 ರಂದು ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡುತ್ತಿದ್ದಾಗ ಗುಂಡಿನ ದಾಳಿ ನಡೆದಿತ್ತು. ಟ್ರಂಪ್ ಹತ್ಯೆಗೆ ಯತ್ನಿಸಿದ್ದ ಬಂದೂಕುಧಾರಿ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂಬಾತನನ್ನು ಅಮೆರಿಕದ ಸೀಕ್ರೆಟ್ ಸರ್ವೀಸ್‌ನ ಭದ್ರತಾ ಸಿಬ್ಬಂದಿ ಹತ್ಯೆಗೈದಿದ್ದರು.

'ಟ್ರಂಪ್ ಅವರ ಕಿವಿಗೆ ನಿಜವಾಗಿಯೂ ಗುಂಡು ತಗುಲಿದೆಯೇ ಎಂಬ ಬಗ್ಗೆ ಅನುಮಾನಗಳಿವೆ' ಎಂದು ಎಫ್‌ಬಿಐ ನಿರ್ದೇಶಕರ ಕ್ರಿಸ್ಟೋಫರ್ ರೇ ಕೆಲದಿನಗಳ ಹಿಂದೆ ಹೇಳಿದ್ದರು. ಇದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಅದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ಟ್ರಂಪ್, 'ಎಫ್‌ಬಿಐ ಅಮೆರಿಕದ ಜನರ ವಿಶ್ವಾಸವನ್ನು ಕಳೆದುಕೊಂಡರೂ ಅಚ್ಚರಿಯಿಲ್ಲ' ಎಂದಿದ್ದರು.

ಎಫ್‌ಬಿಐ ಮತ್ತು ಸೀಕ್ರೆಟ್ ಸರ್ವೀಸ್ ಸೇರಿದಂತೆ ಈ ಘಟನೆ ಬಗ್ಗೆ ತನಿಖೆಯಲ್ಲಿ ತೊಡಗಿರುವ ಸಂಸ್ಥೆಗಳ ಅಧಿಕಾರಿಗಳು ಟ್ರಂಪ್ ಅವರ ಗಾಯಕ್ಕೆ ಏನು ಕಾರಣ ಎಂಬ ಮಾಹಿತಿಯನ್ನು ಬಹಿರಂಗಪಡಿಸಲು ಇದುವರೆಗೂ ನಿರಾಕರಿಸುತ್ತಲೇ ಬಂದಿದ್ದರು. ಘಟನೆಯ ಬಳಿಕ ಟ್ರಂಪ್ ಅವರಿಗೆ ಎಲ್ಲಿ ಚಿಕಿತ್ಸೆ ನೀಡಲಾಗಿದೆ ಎಂಬ ಬಗ್ಗೆ ಅವರ ಪ್ರಚಾರ ತಂಡ ಕೂಡಾ ಯಾವುದೇ ಮಾಹಿತಿ ಒದಗಿಸಿರಲಿಲ್ಲ.

ಕಮಲಾ ಉಮೇದುವಾರಿಕೆ ಘೋಷಣೆ

ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ನವೆಂಬರ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ಶನಿವಾರ ಅಧಿಕೃತವಾಗಿ ತಮ್ಮ ಉಮೇದುವಾರಿಕೆಯನ್ನು ಘೋಷಿಸಿದರು. ನವೆಂಬರ್ 5ರಂದು ನಡೆಯಲಿರುವ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ನನ್ನ ಉಮೇದುವಾರಿಕೆಯನ್ನು ಅಧಿಕೃತವಾಗಿ ಘೋಷಿಸುವ ಫಾರ್ಮ್‌ಗಳಿಗೆ ಸಹಿ ಹಾಕಿದ್ದೇನೆ. ಪ್ರತಿಯೊಂದು ಮತ ಪಡೆಯಲು ನಾನು ಶ್ರಮಿಸುತ್ತೇನೆ' ಎಂದು 59 ವರ್ಷದ ಕಮಲಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕಮಲಾ ಹ್ಯಾರಿಸ್ ಕಟ್ಟಾ ಉದಾರವಾದಿ'

ಅಧ್ಯಕ್ಷೀಯ ಚುನಾವಣೆಯಲ್ಲಿ ತಮ್ಮ ಸಂಭವನೀಯ ಪ್ರತಿಸ್ಪರ್ಧಿಯಾಗಿರುವ ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ವಿರುದ್ಧ ಟ್ರಂಪ್ ಅವರು ವಾಗ್ದಾಳಿ ಮುಂದುವರಿಸಿದ್ದಾರೆ.

'ಕಮಲಾ ಅವರು ಆಯ್ಕೆಯಾದರೆ, ಅಮೆರಿಕದ ಇತಿಹಾಸದಲ್ಲೇ ಕಟ್ಟಾ ಉದಾರವಾದಿ ಅಧ್ಯಕ್ಷೆ ಎನಿಸಲಿದ್ದಾರೆ' ಎಂದು ಫ್ಲಾರಿಡಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಟೀಕಿಸಿದ್ದಾರೆ.

'ಹ್ಯಾರಿಸ್ ಅವರು ಇಡೀ ಸಂಸತ್ತಿನಲ್ಲಿ ತೀವ್ರ ಎಡಪಂಥೀಯ ಧೋರಣೆಯುಳ್ಳ ಸೆನೆಟರ್‌ಗಳಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವರು. ಅವರು ಅಧ್ಯಕ್ಷೆಯಾಗಿ ಆಯ್ಕೆಯಾದರೆ ಎಡಪಂಥೀಯ ಧೋರಣೆಯುಳ್ಳ ನೂರಾರು ನ್ಯಾಯಾಧೀಶರನ್ನು ನೇಮಿಸುತ್ತಾರೆ. ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ತಾವು ತಂದಿರುವ ಉದಾರವಾದಿ ನೀತಿಗಳನ್ನು ಇಡೀ ದೇಶದ ಮೇಲೆ ಬಲವಂತವಾಗಿ ಹೇರಲಿದ್ದಾರೆ' ಎಂದು ಆರೋಪಿಸಿದರು.

ಏರ್ ರೈಫಲ್: ಭಾರತದ ಪುರುಷರ, ಮಿಶ್ರ ವಿಭಾಗದಲ್ಲಿ ನಿರಾಸೆ

ಫೈನಲ್‌ಗೆ ಮನು ಭಾಕರ್

ಶಾತೊಹು (ಫ್ರಾನ್ಸ್), (ಪಿಟಿಐ): ಆತ್ಮವಿಶ್ವಾಸದಿಂದ ಕೂಡಿದ ಪ್ರದರ್ಶನ ನೀಡಿದ ಮನು ಭಾಕರ್ ಅತ್ಯುತ್ತಮ ಲಯದಲ್ಲಿದ್ದು ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಫೈನಲ್ ಪ್ರವೇಶಿಸಿದರು. ಶನಿವಾರ ನಡೆದ ದಿನದ ಇತರ ವಿಭಾಗಗಳಲ್ಲಿ ಭಾರತದ ಶೂಟರ್‌ಗಳು ನಿರಾಸೆ ಮೂಡಿಸಿದ್ದು, ಮನು ಅವರ ಸಾಧನೆ ಬೆಳ್ಳಿರೇಖೆಯಂತೆ ಇತ್ತು.

22 ವರ್ಷ ವಯಸ್ಸಿನ ಭಾಕರ್ ಕ್ವಾಲಿಫಿಕೇಷನ್ಸ್ ಸುತ್ತಿನಲ್ಲಿ 580 ಸ್ಕೋರ್ ಗಳಿಸಿ ಮೂರನೇ ಸ್ಥಾನ ಗಳಿಸಿ ಮೊದಲ ಬಾರಿ ಪದಕ ಸುತ್ತಿಗೆ ಮುನ್ನಡೆದರು. ಹಂಗೆರಿಯ ಅನುಭವಿ ಶೂಟರ್ ವೆರೋನಿಕಾ ಮೇಜರ್ (582) ಮೊದಲ ಸ್ಥಾಣ ಗಳಿಸಿದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಭಾರತದ ಮತ್ತೊಬ್ಬರಾದ ರಿದಂ ಸಾಂಗ್ವಾನ್ 573 ಸ್ಕೋರ್‌ನೊಡನೆ 15ನೇ ಸ್ಥಾನ ಗಳಿಸಿದರು.

ಈ ವಿಭಾಗದ ಫೈನಲ್ ಭಾನುವಾರ ನಿಗದಿಯಾಗಿದೆ.

ಟೋಕಿಯೊದಲ್ಲಿ ಮೊದಲ ಸಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದಾಗ ಅವರಿಗೆ ಪಿಸ್ತೂಲ್ ಕೈಕೊಟ್ಟು, ಕಣ್ಣೀರು ಹಾಕಿದ್ದರು. ತಮ್ಮ ಅಮೋಘ ಸಾಧನೆಗಳ ಪಟ್ಟಿಯಲ್ಲಿ ಒಲಿಂಪಿಕ್ ಪದಕ ಸೇರಿಸುವ ಅವಕಾಶ ಅವರಿಗೆ ಈಗ ಒದಗಿದೆ. 20 ವರ್ಷಗಳಲ್ಲಿ ಈ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಶೂಟರ್ ಎಂಬ ಹಿರಿಮೆಗೆ ಪಾತ್ರವಾದರು.

ಹದಿಹರೆಯದಲ್ಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದ ಮನು, ಈಗ ಟೋಕಿಯೊ ಒಲಿಂಪಿಕ್ಸ್ ಕಹಿನೆನಪನ್ನು ಅಳಿಸಿಹಾಕಿ, ಕ್ವಾಲಿಫಿಕೇಷನ್ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದರು.

ಸರಣಿ 1 ನಂತರ ಅವರು 97 ಪಾಯಿಂಟ್‌ಳೊಡನೆ ಉತ್ತಮ ಆರಂಭ ಮಾಡಿ ನಾಲ್ಕನೇ ಸ್ಥಾನದಲ್ಲಿದ್ದರು. ಎರಡನೇ ಸರಣಿ ನಂತರ ಹರಿಯಾಣದ ಶೂಟರ್ 97 ಸ್ಕೋರ್‌ನೊಡನೆ ಅದೇ ಸ್ಥಾನ ಉಳಿಸಿಕೊಂಡರು. ಮೂರನೇ ಸಿರೀಸ್ ನಂತರ 98 ಪಾಯಿಂಟ್ಸ್ ಗಳಿಸಿ ಅಗ್ರ ಎರಡರಲ್ಲಿ ಸ್ಥಾನ ಪಡೆದರು. ಐದನೇ ಸರಣಿಯಲ್ಲಿ (8 ಪಾಯಿಂಟ್) ಅವರಿಂದ ಗುರಿಗಳು ತಪ್ಪಿದವು. ಆದರೆ ಅದರಿಂದ ಸಮಸ್ಯೆಯಾಗಲಿಲ್ಲ.

ಸರಬ್ಜೋತ್‌ಗೆ ನಿರಾಸೆ: ಸರಬ್ಜೋತ್ ಸಿಂಗ್ ಮತ್ತು ಅರ್ಜುನ್ ಸಿಂಗ್ ಚೀಮಾ ಅವರು 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅಲ್ಲೊಮ್ಮೆ-ಇಲ್ಲೊಮ್ಮೆ ಕೌಶಲ ತೋರಿದರೂ, ಫೈನಲ್‌ಗೇರಲು ಅದು ಸಾಕಾಗಲಿಲ್ಲ. ಇದಕ್ಕೆ ಮೊದಲು ಏರ್ ರೈಫಲ್ ಮಿಶ್ರ ವಿಭಾಗದಲ್ಲಿ ಭಾರತದ ಎರಡೂ ತಂಡಗಳು ಕ್ವಾಲಿಫಿಕೇಷನ್ ಹಂತದಲ್ಲೇ ನಿರ್ಗಮಿಸಿದವು.

22 ವರ್ಷ ವಯಸ್ಸಿನ ಸರಬ್ಜೋತ್ ಕ್ವಾಲಿಫಿಕೇಷನ್ ಸುತ್ತಿನಲ್ಲಿ 577 ಸ್ಕೋರ್ ಮಾಡಿ ಒಂಬತ್ತನೇ ಸ್ಥಾನ ಪಡೆದರೆ, 23 ವರ್ಷ ವಯಸ್ಸಿನ ಅರ್ಜುನ್ 574 ಸ್ಕೋರ್‌ನಡೊನೆ 18ನೇ ಸ್ಥಾನಕ್ಕೆ ಸರಿದರು.


ಜರ್ಮನಿಯ ರಾಬಿನ್ ವಾಲ್ಟರ್ ಅವರೂ 577 ಅಂಕ ಪಡೆದರೂ, ಅವರ ಒಟ್ಟಾರೆ ಪ್ರದರ್ಶನ ಉತ್ತಮವಾಗಿದ್ದ ಕಾರಣ ಕೊನೆಯವರಾಗಿ ಅಂತಿಮ ಸುತ್ತಿಗೆ ಅರ್ಹತೆ ಪಡೆದರು.

ಸರಬ್ಜೋತ್ ಮತ್ತು ಚೀಮಾ ಕಳೆದ ವರ್ಷ ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ 10 ಮೀ. ಏರ್ ರೈಫಲ್ ತಂಡ ಚಿನ್ನ ಗೆದ್ದ ತಂಡದ ಭಾಗವಾಗಿದ್ದರು.

ರೈಫಲ್ ಮಿಶ್ರ ವಿಭಾಗದಲ್ಲಿ ನಿರಾಸೆ: ಇದಕ್ಕೆ ಮೊದಲು 10 ಮೀ. ಏರ್ ರೈಫಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾರತದ ಶೂಟರ್‌ಗಳು ಕ್ವಾಲಿಫಿಕೇಷನ್ ಹಂತದಲ್ಲಿ ಮುಗ್ಗರಿಸಿದರು.

ರಮಿತಾ ಜಿಂದಾಲ್ ಮತ್ತು ಅರ್ಜುನ್ ಬಬುತಾ 628.7 ಸ್ಕೋರ್‌ನೊಡನೆ ಆರನೇ ಸ್ಥಾನ ಪಡೆದರೆ, ಇಲವೆನಿಲ್ ವಾಳರಿವನ್ ಮತ್ತು ಸಂದೀಪ್ ಸಿಂಗ್ 626.3 ಸ್ಕೋರ್‌ನಡೊನೆ 12ನೇ ಸ್ಥಾನ ಗಳಿಸಿದರು.

ಒಂದು ಹಂತದಲ್ಲಿ ರಮಿತಾ ಮತ್ತು ಬಬುಟಾ ಉತ್ತಮ ಪೈಪೋಟಿ ನೀಡಿ, ಮೂರು ಶಾಟ್‌ಗಳಿರುವಾಗ ಐದನೇ ಸ್ಥಾನದಲ್ಲಿದ್ದರು. ಆದರೆ ಒಂದು ಪಾಯಿಂಟ್ ಕಡಿಮೆಬಿದ್ದು ಪದಕದ ಸುತ್ತಿನಿಂದ ಹೊರಬಿದ್ದರು.



ಭಾರತದ ಮನು ಭಾಕರ್ –ಎಪಿ/ ಪಿಟಿಐ ಚಿತ್ರ

ರೈಫಲ್ ಮಿಶ್ರ ತಂಡ ವಿಭಾಗ: ಚೀನಾಕ್ಕೆ ಕೂಟದ ಮೊದಲ ಚಿನ್ನ



ಚೀನಾದ ಹುವಾಂಗ್ ಯುಟಿಂಗ್ ಮತ್ತು ಶೆಂಗ್ ಲಿಹಾವೊ ಎಎಫ್‌ಪಿ ಚಿತ್ರ

ಶಾತೊಹು (ರಾಯಿಟರ್ಸ್): ಚೀನಾದ ಹುವಾಂಗ್ ಯುಟಿಂಗ್ ಮತ್ತು ಶೆಂಗ್ ಲಿಹಾವೊ ಅವರು 10 ಮೀ. ಏರ್‌ರೈಫಲ್ಸ್ ಮಿಶ್ರ ತಂಡ ವಿಭಾಗದಲ್ಲಿ ಶನಿವಾರ ಚಿನ್ನದ ಪದಕ ಗೆದ್ದರು. ಇದು ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳಲ್ಲಿ ನಿರ್ಧಾರವಾದ ಮೊದಲ ಚಿನ್ನ.

ಈ ಜೋಡಿ 16-12 ಅಂತರದಿಂದ ಕಿಯುಮ್ ಜಿ-ಹ್ಯೂನ್ ಮತ್ತು ಪಾರ್ಕ್ ಹಾ-ಜುನ್ (ದಕ್ಷಿಣ ಕೊರಿಯಾ) ವಿರುದ್ಧ ಜಯಗಳಿಸಿತು. ಕೊರಿಯಾ ಜೋಡಿ ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡರೆ, ಅಲೆಕ್ಸಾಂಡ್ರಾ ಲಿ ಮತ್ತು ಸತ್ಪಾಯೆವ್ (ಕಜಕಸ್ತಾನ) ಕಂಚಿನ ಪದಕ ಕೊರಳಿಗೇರಿಸಿಕೊಂಡರು.

ಜರ್ಮನಿಯ ಅನ್ನಾ ಯಾನ್ಸೆನ್- ಮ್ಯಾಕ್ಸಿಮಿಲನ್ ಉಲ್ರ್ಬ್ರಿಚ್ ಅವರನ್ನು ಕಜಕಸ್ತಾನದ ಸ್ಪರ್ಧಿಗಳು ಹಿಂದಕ್ಕೆ ಹಾಕಿ ತಂಡಕ್ಕೆ ಮೊದಲ ಪದಕ ಕೊಡಿಸಿದರು. ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಈ ವಿಭಾಗದ ಚಿನ್ನ ಚೀನಾವೇ (ಯಾಂಗ್ ಕ್ವಿಯಾನ್- ಯಾಂಗ್ ಹಾವೊರನ್) ಗೆದ್ದುಕೊಂಡಿತ್ತು.

‘ಪ್ರೇಮನಗರಿಯಲ್ಲಿ ಪ್ರಜ್ವಲಿಸಿದ ಕ್ರೀಡಾಜ್ಯೋತಿ’

ಪ್ಯಾರಿಸ್(ಎಪಿ) : ‘ಪ್ರೇಮನಗರಿ’ಯಲ್ಲಿ ಮಳೆ ಸುರಿದು ನಿಂತ ಮೇಲೆ ಒಲಿಂಪಿಕ್ ವೈಭವ ಗರಿಗೆದರಿತು. ಕ್ರೀಡಾಜ್ಯೋತಿಯು ಪ್ರಜ್ವಲಿಸಿತು.

ಆತಿಥೇಯ ಫ್ರಾನ್ಸ್‌ನ ಮಾಜಿ ಅಥ್ಲೀಟ್ ಮೇರಿ ಜೋಸ್ ಪೆರೆಸ್ ಮತ್ತು ಜುಡೊಕಾ ಟೆಡ್ಡಿ ರೈನರ್ ಅವರು ಬೃಹತ್ ಕಾಲ್ಡರನ್ (ಲೋಹದ ಕಡಾಯಿ)ನಲ್ಲಿ ಕ್ರೀಡಾಜ್ಯೋತಿಯನ್ನು ಬೆಳಗಿಸಿದರು. ಕಾಲ್ಡರನ್ ವಿಶೇಷ ವಿನ್ಯಾಸದೊಂದಿಗೆ ಗಮನ ಸೆಳೆಯುತ್ತಿದೆ. ಆಗಸ್ಟ್ 11ರವರೆಗೆ ನಡೆಯಲಿರುವ ಕೂಟದಲ್ಲಿ ಈ ಜ್ಯೋತಿಯು ಬೆಳಗಲಿದೆ. ಕಾಲ್ಡರನ್‌ಗೆ ದೊಡ್ಡದಾದ ಬಲೂನ್ ಅಳವಡಿಸಲಾಗಿದೆ. ಪ್ರತಿದಿನವೂ ಈ ಕಾಲ್ಡರನ್ ವೀಕ್ಷಿಸಲು 10 ಸಾವಿರ ಜನರಿಗೆ ಟಿಕೆಟ್ ನೀಡಲಾಗುತ್ತಿದೆ.

ಆಧುನಿಕ ಒಲಿಂಪಿಕ್ಸ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕ್ರೀಡಾಜ್ಯೋತಿಗೆ ಪಳೆಯುಳಿಕೆ ಇಂಧನವನ್ನು ಬಳಸಿಲ್ಲ. 40 ಎಲ್‌ಇಡಿ ಸ್ಪಾಟ್‌ಲೈಟ್‌ಗಳ ಮೂಲಕ ವಿದ್ಯುತ್ ದೀಪವನ್ನು ಬಳಸಿಕೊಳ್ಳಲಾಗಿದೆ. ಕ್ಲೌಡ್ ಮೂಲಕ 200 ಹೈಪ್ರೆಷರ್ ಮಿಸ್ಟಿಂಗ್ ನಾಜೆಲ್‌ಗಳನ್ನೂ ಅಳವಡಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.



ಪ್ಯಾರಿಸ್‌ನಲ್ಲಿ ಶುಕ್ರವಾರ ಒಲಿಂಪಿಕ್ ಕೂಟದ ಉದ್ಘಾಟನೆ ಸಮಾರಂಭದಲ್ಲಿ ಕ್ರೀಡಾಜ್ಯೋತಿಯು ಪ್ರಜ್ವಲಿಸಿತು. ಬೃಹತ್ ಗಾಳಿ ಬಲೂನ್ ಅಳವಡಿಸಿರುವ ಕ್ರೀಡಾ ಜ್ಯೋತಿಯ ಕಾಲ್ಡ್ರನ್ ಗಮನ ಸೆಳೆಯಿತು –ಎಎಫ್‌ಪಿ ಚಿತ್ರ



ಪ್ಯಾರಿಸ್‌ನಲ್ಲಿ ಶುಕ್ರವಾರ ನಡೆದ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದ ಅಂಗವಾಗಿ ಐಫೆಲ್ ಟವರ್‌ನಲ್ಲಿ ನಡೆದ ಚಿತ್ತಾಕರ್ಷಕ ಲೇಸರ್ ಲೈಟ್ ಶೋ



ಅಮೆರಿಕಾದ ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್ –ಎಎಫ್‌ಪಿ ಚಿತ್ರ



ಪ್ಯಾರಿಸ್‌ನಲ್ಲಿ ಶುಕ್ರವಾರ ನಡೆದ ಒಲಿಂಪಿಕ್ ಕೂಟದ ಉದ್ಘಾಟನೆ ಸಮಾರಂಭದಲ್ಲಿ ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಹಾಗೂ ಅವರ ಪತ್ನಿ, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯರೂ ಆಗಿರುವ ನೀತಾ ಅಂಬಾನಿ ಅವರು ಗಣ್ಯರ ಗ್ಯಾಲರಿಯಲ್ಲಿದ್ದರು. ಪ್ರಜಾವಾಣಿ ಚಿತ್ರಗಳು/ ಕೆ.ಎನ್. ಶಾಂತಕುಮಾರ್



ಭಾರತದ ಹರ್ಮೀತ್ ದೇಸಾಯಿ –ಎಪಿ/ಪಿಟಿಐ ಚಿತ್ರ

ಎರಡನೇ ಸುತ್ತಿಗೆ ಹರ್ಮೀತ್

ಪ್ಯಾರಿಸ್ (ಪಿಟಿಐ): ಚೊಚ್ಚಲ ಒಲಿಂಪಿಕ್ಸ್ ಆಡುತ್ತಿರುವ ಭಾರತದ ಹರ್ಮೀತ್ ದೇಸಾಯಿ ಅವರು ಟೇಬಲ್ ಟೆನಿಸ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿದರು.

31 ವರ್ಷದ ಹರ್ಮೀತ್ ಅವರು ಶನಿವಾರ 11-7, 11-9, 11-5, 11-5ರಿಂದ ಜೋರ್ಡಾನ್‌ನ ಝೈದ್ ಅಬೊ ಯಮನ್ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಮುನ್ನಡೆದರು.

30 ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಎದುರಾಳಿಯನ್ನು ಸೋಲಿಸಲು ಹರ್ಮೀತ್ ಹೆಚ್ಚಿನ ಪ್ರಯಾಸ ಅನುಭವಿಸಲಿಲ್ಲ.

ಹರ್ಮೀತ್ ಅವರು 2018 ಮತ್ತು 2022ರಲ್ಲಿ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ತಂಡದ ಭಾಗವಾಗಿದ್ದರು.

ಜೊಕೊವಿಚ್, ಅಲ್ಕರಾಜ್‌ಗೆ ಜಯ

ಪ್ಯಾರಿಸ್ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ಮೊದಲ ಸ್ವರ್ಣ ಗೆಲ್ಲುವ ಯತ್ನದಲ್ಲಿರುವ ನೊವಾಕ್ ಜೊಕೊವಿಚ್ ಶನಿವಾರ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರನ್ನು 6-0, 6-1 ರಿಂದ ಸೋಲಿಸಿ ಶುಭಾರಂಭ ಮಾಡಿದರು. ಆ ಮೂಲಕ ಎರಡನೇ ಸುತ್ತಿನಲ್ಲಿ ರಫೆಲ್ ನಡಾಲ್ ಜೊತೆ ಸಂಭವನೀಯ ಹೋರಾಟಕ್ಕೆ ಸಜ್ಜಾದರು.

ಮಳೆಯಿಂದ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕೆಲವು ಪಂದ್ಯಗಳು ಸಕಾಲಕ್ಕೆ ಆರಂಭವಾಗಲಿಲ್ಲ. ಆದರೆ ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ಛಾವಣಿಯಡಿ ಆಡಿದ ಜೊಕೊವಿಚ್ ಕೇವಲ 54 ನಿಮಿಷಗಳಲ್ಲಿ ಪಂದ್ಯ ಗೆದ್ದರು. ಕೆಲವು ಪಂದ್ಯಗಳು ಆರು ಗಂಟೆ ತಡವಾದವು. ಎರಡು ವಾರಗಳ ಹಿಂದೆ ವಿಂಬಲ್ಡನ್ ಫೈನಲ್‌ನಲ್ಲಿ ಜೊಕೊವಿಚ್ ಅವರನ್ನು ಸೋಲಿಸಿದ್ದ ಕಾರ್ಲೋಸ್ ಅಲ್ಕಾರೆಜ್ ಅವರು ಲೆಬನಾನ್‌ನ ಹದಿ ಹಬೀಬ್ ಅವರನ್ನು ಸುಲಭವಾಗಿ ಸೋಲಿಸಿದರು.

ಮಹಿಳೆಯರ ವಿಭಾಗದಲ್ಲಿ ಇಗಾ ಶ್ವಾಂಟೆಕ್, ಐರಿನಾ ಕ್ಯಾಮಿಲಿಯಾ-ಬೇಗು ಅವರನ್ನು ಸೋಲಿಸಿದರು.

ಮಹಿಳೆಯರ ರಿಕರ್ವ್ ತಂಡದ ಪದಕ ಸುತ್ತಿನ ಹಣಾಹಣಿ ಇಂದು

ಚೊಚ್ಚಲ ಪದಕದ ನಿರೀಕ್ಷೆಯಲ್ಲಿ ಬಿಲ್ಗಾರರು

ಪ್ಯಾರಿಸ್ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ಆರ್ಚರಿ ರಿಕರ್ವ್ ತಂಡಗಳು ಅರ್ಹತಾ ಸುತ್ತಿನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ. ಭಾನುವಾರ ಮಹಿಳಾ ತಂಡಗಳ ಪದಕ ಸುತ್ತಿನ ಸ್ಪರ್ಧೆಗಳು ನಡೆಯಲಿದ್ದು, ಆರ್ಚರಿಯಲ್ಲಿ ಭಾರತಕ್ಕೆ ಐತಿಹಾ ಸಿಕ ಒಲಿಂಪಿಕ್ಸ್ ಪದಕದ ನಿರೀಕ್ಷೆ ಹೆಚ್ಚಿಸಿದೆ.

1988ರ ಸೋಲ್ ಒಲಿಂಪಿಕ್ಸ್‌ನಿಂದ ಭಾರತದ ಬಿಲ್ಗಾರರು ಸ್ಪರ್ಧೆ ಮಾಡುತ್ತಿದ್ದಾರೆ. ಆದರೆ, ಈತನಕ ಪದಕ ಒಲಿದಿಲ್ಲ. 38 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಲು ಅವರು ಕಾತರದಿಂದ ಇದ್ದಾರೆ.

12 ವರ್ಷಗಳ ಬಳಿಕ ಮೊದಲ ಬಾರಿ ಆರು ಮಂದಿಯ ಭಾರತದ ಆರ್ಚರಿ ತಂಡವು ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದೆ. ಈ ಆರು ಮಂದಿ ಮಿಶ್ರ ತಂಡ, ಪುರುಷರ ಮತ್ತು ಮಹಿಳೆಯರ ತಂಡ ಹಾಗೂ ವೈಯಕ್ತಿಕ ವಿಭಾಗಗಳಲ್ಲಿ ಸ್ಪರ್ಧಿಸುತ್ತಿದ್ದಾರೆ.

ಧೀರಜ್ ಬೊಮ್ಮದೇವರ ಮತ್ತು ಅಂಕಿತಾ ಭಕತ್ ಅವರ ಅಮೋಘ ಗುರಿಯಿಂದಾಗಿ ಅರ್ಹತಾ ಸುತ್ತಿನಲ್ಲಿ ಪುರುಷರ ಮತ್ತು ಮಹಿಳೆಯರ ತಂಡಗಳು ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನದೊಂದಿಗೆ ನೇರವಾಗಿ ಎಂಟರ ಘಟ್ಟ ಪ್ರವೇಶಿಸಿವೆ. ಚೊಚ್ಚಲ ಪದಕಕ್ಕಾಗಿ ಇನ್ನು ಎರಡು ಸುತ್ತಿನ ಗೆಲುವಿನ ಅಗತ್ಯವಿದೆ.



ಅಂಕಿತಾ ಭಕತ್



ದೀಪಿಕಾ ಕುಮಾರಿ



ಭಜನ್ ಕೌರ್

ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ನಡುವಿನ ವಿಜೇತರನ್ನು ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ಮಹಿಳಾ ತಂಡ ಎದುರಿಸಲಿದೆ. ಅರ್ಹತಾ ಸುತ್ತಿನಲ್ಲಿ ಆತಿಥೇಯ ಫ್ರಾನ್ಸ್ ಐದನೇ ಸ್ಥಾನ ಪಡೆದಿದ್ದು, ಮುಂದಿನ ಸುತ್ತಿನಲ್ಲಿ ಭಾರತಕ್ಕೆ ಎದುರಾಳಿಯಾಗುವ ಸಾಧ್ಯತೆ ಹೆಚ್ಚು. ಭಾರತದ ಅಂಕಿತಾ ಭಕತ್, ಭಜನ್ ಕೌರ್ ಮತ್ತು ದೀಪಿಕಾ ಕುಮಾರಿ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಅರ್ಹತಾ ಸುತ್ತಿನಲ್ಲಿ 11ನೇ ಸ್ಥಾನ ಪಡೆದಿದ್ದ ಅಂಕಿತಾ ಮೇಲೆ ನಿರೀಕ್ಷೆ ಹೆಚ್ಚಿದೆ. ಫ್ರಾನ್ಸ್ ತಂಡದಲ್ಲಿ ಲಿಸಾ ಬಾರ್ಬೆಲಿನ್, ಅಮೆಲಿ ಕಾರ್ಡೊ ಮತ್ತು ಕ್ಯಾರೊಲಿನ್ ಲೋಪೆಜ್ ಇದ್ದಾರೆ.

ಪುರುಷರ ಸ್ಪರ್ಧೆ ನಾಳೆ: ಪುರುಷರ ತಂಡದ ಪದಕ ಸುತ್ತಿನ ಸ್ಪರ್ಧೆ ಸೋಮವಾರ ನಡೆಯಲಿದೆ. ಧೀರಜ್, ತರುಣ್‌ದೀಪ್ ರಾಯ್ ಮತ್ತು ಪ್ರವೀಣ್ ಜಾಧವ್ ಅವರನ್ನು ಒಳಗೊಂಡ ತಂಡವೂ ಇತಿಹಾಸ ಸೃಷ್ಟಿಸುವ ತವಕದಲ್ಲಿದೆ.

ಶಾಂಘೈ ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ಕೊರಿಯಾ ತಂಡವನ್ನು ಸೋಲಿಸಿ ಐತಿಹಾಸಿಕ ಚಿನ್ನ ಗೆದ್ದ ಭಾರತದ ತರುಣರು ಮತ್ತೊಂದು ಸಾಧನೆಯ ಹೊಸ್ತಿಲಲ್ಲಿದ್ದಾರೆ. ಅರ್ಹತಾ ಸುತ್ತಿನಲ್ಲಿ ಆರನೇ ಸ್ಥಾನ ಪಡೆದ ಟರ್ಕಿ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಎದುರಾಗುವ ಸಾಧ್ಯತೆಯಿದೆ.

ಧೀರಜ್ ಮತ್ತು ಅಂಕಿತಾ ಅವರನ್ನು ಒಳಗೊಂಡ ಮಿಶ್ರ ತಂಡವು ಅರ್ಹತಾ ಸುತ್ತಿನಲ್ಲಿ ಐದನೇ ಸ್ಥಾನ ಪಡೆದಿದ್ದು, ಮುಂದಿನ ಸುತ್ತಿನಲ್ಲಿ ಇಂಡೊನೇಷ್ಯಾ ತಂಡವನ್ನು ಎದುರಿಸಲಿದೆ. ಪದಕ ಸುತ್ತಿನ ಸ್ಪರ್ಧೆ ಆ.2ರಂದು ನಡೆಯಲಿದೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಆಸ್ಟ್ರೇಲಿಯಾ	2	1	0	3
ಚೀನಾ	2	0	0	2
ಫ್ರಾನ್ಸ್	1	1	1	3
ಬೆಲ್ಜಿಯಂ	1	0	1	2
ಜಪಾನ್	1	0	1	2
ಕಜಕಸ್ತಾನ	1	0	1	2
ಜರ್ಮನಿ	1	0	0	1
ಅಮೆರಿಕ	0	1	2	3
ಬ್ರಿಟನ್	0	1	1	2
ಇಟಲಿ	0	1	1	2

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಬ್ಯಾಡ್ಮಿಂಟನ್ (ಗುಂಪು ಹಂತ)

ಮಹಿಳೆಯರ ಸಿಂಗಲ್ಸ್
ಪಿ.ವಿ.ಸಿಂಧು- ಎಫ್.ಎನ್.ಅಬ್ದುಲ್ ರಝಾಕ್ (ಮಾಲ್ಡೀವ್ಸ್) ಮಧ್ಯಾಹ್ನ 12.50

ಪುರುಷರ ಸಿಂಗಲ್ಸ್
ಎಚ್.ಎಸ್.ಪ್ರಣಯ್ -ಫಾಬಿಯಾನ್ ರೋಥ್ (ಜರ್ಮನಿ) (ರಾತ್ರಿ 8)

ಶೂಟಿಂಗ್

ಇಲವೆನಿಲ್ ವಾಳರಿವನ್ (ಮಹಿಳೆಯರ 10 ಮೀ. ಏರ್ ರೈಫಲ್, ಅರ್ಹತಾ ಸುತ್ತು) ಮಧ್ಯಾಹ್ನ 12.45

ಸಂದೀಪ್ ಸಿಂಗ್, ಅರ್ಜುನ್ ಬಾಬುತಾ (ಪುರುಷರ 10 ಮೀ. ಏರ್ ರೈಫಲ್, ಅರ್ಹತಾ ಸುತ್ತು) ಮಧ್ಯಾಹ್ನ 2.45

ಮನು ಭಾಕರ್ (ಮಹಿಳೆಯರ 10 ಮೀ ಏರ್ ಪಿಸ್ತೂಲ್, ಫೈನಲ್) ಮಧ್ಯಾಹ್ನ 3.30

ರೋಯಿಂಗ್

ಬಾಲರಾಜ್ ಪನ್ವಾರ್ (ಪುರುಷರ ಸಿಂಗಲ್ಸ್ ಸ್ಕಲ್) ಮಧ್ಯಾಹ್ನ 1.18

ಟೇಬಲ್ ಟೆನಿಸ್ (ಎರಡನೇ ಸುತ್ತು)

ಮಹಿಳೆಯರ ಸಿಂಗಲ್ಸ್: ಶ್ರೀಜಾ ಅಕುಲಾ- ಕ್ರಿಸ್ಟಿನಾ ಕಾಲ್ಬರ್ಗ್ (ಸ್ವೀಡನ್)

ಮಣಿಕಾ ಬಾತ್ರಾ-ಅನ್ನಾ ಹುಸ್ಸೆಯ್ (ಬ್ರಿಟನ್) ಮಧ್ಯಾಹ್ನ 12.15ರಿಂದ

ಪುರುಷರ ಸಿಂಗಲ್ಸ್: ಶರತ್ ಕಮಾಲ್-ಡೆನಿ ಕೊಝುಲ್ (ಸ್ಲೊವೇನಿಯಾ) ಮಧ್ಯಾಹ್ನ 3

ಈಜು (ಹೀಟ್ಸ್)

ಪುರುಷರ 100ಮೀ ಬ್ಯಾಕ್‌ಸ್ಟ್ರೋಕ್ ಶ್ರೀಹರಿ ನಟರಾಜ್, ಮಧ್ಯಾಹ್ನ 3.16

ಮಹಿಳೆಯರ 200 ಮೀ. ಫ್ರೀಸ್ಟೈಲ್ ಧೀನಿಧಿ ದೇಸಿಂಗು, ಮಧ್ಯಾಹ್ನ 3.30

ಮಹಿಳೆಯರ ಆರ್ಚರಿ

ಕ್ವಾರ್ಟರ್ ಫೈನಲ್
(ಅಂಕಿತಾ ಭಕತ್, ಭಜನ್ ಕೌರ್ ಮತ್ತು ದೀಪಿಕಾ ಕುಮಾರಿ) ಸಂಜೆ 5.45

ಸೆಮಿಫೈನಲ್: ರಾತ್ರಿ 7.17
ಪದಕ ಸುತ್ತು: ರಾತ್ರಿ 8.18

ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್‌ಗೆ ನೇರ ಗೇಮ್‌ಗಳ ಜಯ

ಸಾತ್ವಿಕ್–ಚಿರಾಗ್ ಜೋಡಿ ಶುಭಾರಂಭ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪದಕ ಜಯದ ಭರವಸೆ ಮೂಡಿಸಿರುವ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೋಡಿಯು ಶನಿವಾರ ಇಲ್ಲಿ ನಡೆದ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್‌ನಲ್ಲಿ ಶುಭಾರಂಭ ಮಾಡಿತು. ಸಿಂಗಲ್ಸ್‌ನಲ್ಲಿಯೂ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲಿ ಗೆದ್ದು ಮುನ್ನಡೆದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಜೋಡಿ ಸಾತ್ವಿಕ್-ಚಿರಾಗ್ ಸಿ ಗುಂಪಿನ ಪಂದ್ಯದಲ್ಲಿ 21-17 21-14 ರಿಂದ ಆತಿಥೇಯ ಫ್ರಾನ್ಸ್ ಜೋಡಿ ಲೂಕಾಸ್ ಕಾರ್ವಿ ಮತ್ತು ರೊನಾನ್ ಲ್ಯಾಬರ್ ವಿರುದ್ಧ ಗೆದ್ದರು. ಸೋಮವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಭಾರತದ ಜೋಡಿಯು ಜರ್ಮನಿಯ ಮಾರ್ಕ್ ಲ್ಯಾಮ್ಸ್‌ಫಸ್ ಮತ್ತು ಮಾರ್ವಿನ್ ಸೀಡೆಲ್ ಅವರನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಸಾತ್ವಿಕ್ -ಚಿರಾಗ್ ಅವರಿಗೆ ಮೊದಲ ಗೇಮ್‌ನಲ್ಲಿ ತುಸು ಕಠಿಣ ಪೈಪೋಟಿ ಎದುರಾಯಿತು. ಆದರೆ ತಮ್ಮ ಹೊಂದಾಣಿಕೆಯ ಆಟ ಮತ್ತು ಚುರುಕಿನ ತಂತ್ರಗಾರಿಕೆ ಮೂಲಕ ಎದುರಾಳಿಗಳನ್ನು ಮಣಿಸಿದರು. ಎರಡನೇ ಗೇಮ್‌ನಲ್ಲಿಯೂ ಪಾರಮ್ಯ ಮೆರೆದರು.

ಸೇನ್‌ಗೆ ಮೊದಲ ಗೆಲುವು: ತಮ್ಮ ಕ್ರೀಡಾಜೀವನದ ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಆಡುತ್ತಿರುವ ಲಕ್ಷ್ಯ ಸೇನ್ ಅವರು ಸಿಂಗಲ್ಸ್ ವಿಭಾಗದ ಎ ಗುಂಪಿನ ಪಂದ್ಯದಲ್ಲಿ ಗ್ವಾಟೆಮಾಲಾದ ಕೆವಿನ್ ಕಾರ್ಡನ್ ಅವರನ್ನು ನೇರ ಗೇಮ್‌ಗಳಲ್ಲಿ ಸೋಲಿಸಿದರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಶನಿವಾರ ನಡೆದ ಪುರುಷರ ವಿಭಾಗದ ಬ್ಯಾಡ್ಮಿಂಟನ್ ಸಿಂಗಲ್ಸ್ ಮೊದಲ ಪಂದ್ಯದಲ್ಲಿ ಭಾರತದ ಲಕ್ಷ್ಯ ಸೇನ್ ಗೆಲುವು ಸಾಧಿಸಿದರು –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

22ರ ಹರೆಯದ ಸೇನ್ ಅವರು 42 ನಿಮಿಷಗಳ ಪಂದ್ಯದಲ್ಲಿ 21-8, 22-20ರ ಅಂತರದಲ್ಲಿ ಕಾರ್ಡನ್ ವಿರುದ್ಧ ಗೆದ್ದರು.

ಕುತೂಹಲ ಕೆರಳಿಸಿದ್ದ ಎರಡನೇ ಗೇಮ್‌ನಲ್ಲಿ ಕಾರ್ಡನ್ ತೀವ್ರ ಪೈಪೋಟಿ ಒಡ್ಡಿದರು. 20-20ರವರೆಗೂ ಸಮಬಲದ ಹೋರಾಟ ನಡೆಯಿತು. ಆದರೆ ಛಲಬಿಡದ ಲಕ್ಷ್ಯ ವಿಜೇತರಾದರು.

ಸೋಮವಾರ ನಡೆಯಲಿರುವ ಗುಂಪಿನ ಎರಡನೇ ಪಂದ್ಯದಲ್ಲಿ ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ಅವರನ್ನು ಎದುರಿಸಲಿದ್ದಾರೆ.

ರೋಯಿಂಗ್ ರಿಪೇಚ್‌ಗೆ ಪನ್ವರ್

ಚಾಟೆವುರಾಕ್ಸ್ ಫ್ರಾನ್ಸ್ (ಪಿಟಿಐ): ಭಾರತದ ಏಕೈಕ ಸ್ಪರ್ಧಿ ಬಾಲರಾಜ್ ಪನ್ವಾರ್ ಅವರು ಶನಿವಾರ ನಡೆದ ಪುರುಷರ ರೋಯಿಂಗ್ ಕ್ರೀಡೆಯ ಸಿಂಗಲ್ಸ್ ಸ್ಕಲ್ ವಿಭಾಗದ ಮೊದಲ ಹೀಟ್ಸ್ ನಾಲ್ಕನೇ ಸ್ಥಾನ ಪಡೆದರು. ಆದರೆ ಅವರಿಗೆ ಇನ್ನೂ ಪದಕ ಜಯಿಸುವ ಅವಕಾಶವೊಂದು ಉಳಿದಿದೆ. ಅವರು ರಿಪೇಚ್‌ನಲ್ಲಿ ಸ್ಪರ್ಧಿಸುವ ಅವಕಾಶ ಇನ್ನೂ ಇದೆ.

ಪನ್ವಾರ್ 7ನಿ, 7.11 ಸೆಕೆಂಡುಗಳಲ್ಲಿ ಗುರಿ ತಲುಪಿ ನಾಲ್ಕನೇ ಸ್ಥಾನ ಪಡೆದರು. ಪನ್ವಾರ್ ಅವರಿಗೆ ರಿಪೇಚ್ ಮೂಲಕ ಸೆಮಿ ಫೈನಲ್ ಅಥವಾ ಫೈನಲ್‌ಗೆ ಅರ್ಹತೆ ಪಡೆಯಲು ಇನ್ನೊಂದು ಅವಕಾಶವಿದೆ.

ಪ್ರೀತಿ ಪವಾರ್ ಪ್ರಿ ಕ್ವಾರ್ಟರ್‌ಗೆ

ಪ್ಯಾರಿಸ್ (ಪಿಟಿಐ): ಭಾರತದ ಬಾಕ್ಸರ್ ಪ್ರೀತಿ ಪವಾರ್ ಪ್ಯಾರಿಸ್ ಒಲಿಂಪಿಕ್ಸ್ ಬಾಕ್ಸಿಂಗ್ ಮಹಿಳೆಯರ 54 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಹಣಾಹಣಿಯಲ್ಲಿ ಅವರು 5-0ಯಿಂದ ವಿಯೆಟ್ನಾಂನ ವೋ ಥಿ ಕಿಮ್ ಅವರನ್ನು ಮಣಿಸಿದರು.

ಪ್ರೀತಿ ಅವರು ಮಂಗಳವಾರ ನಡೆಯಲಿರುವ 16ರ ಸುತ್ತಿನ ಹಣಾಹಣಿಯಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತೆ ಮಾರ್ಸೆಲಾ ಯೆನಿ ಅರಿಯಾಸ್ (ಕೊಲಂಬಿಯಾ) ಅವರನ್ನು ಎದುರಿಸಲಿದ್ದಾರೆ.

ನಿರಾಶ್ರಿತರ ಧ್ವನಿಯಾದ ಮಸೋಮಾ

ಪ್ಯಾರಿಸ್ (ಎಎಫ್‌ಪಿ): ‘ತಮ್ಮ ತಾಯ್ನೆಲವನ್ನು ಅನಿವಾರ್ಯವಾಗಿ ತೊರೆದು ಹೋದವರ ಸಮೂಹವನ್ನು ಪ್ರತಿನಿಧಿಸಲು ಹೆಮ್ಮೆಯೆನಿಸುತ್ತಿದೆ’ ಎಂದು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ರೆಫ್ಯೂಜಿ ತಂಡದ ಚೆಫ್ ಡಿ ಮಿಷನ್ ಆಗಿರುವ ಒಲಿಂಪಿಯನ್ ಸೈಕ್ಲಿಸ್ಟ್ ಮಸೋಮಾ ಅಲಿ ಝೂದಾ ಹೇಳಿದ್ದಾರೆ.

ಅಫ್ಗಾನಿಸ್ತಾನದ 28 ವರ್ಷದ ಮಸೋಮಾ ಅವರೂ ಕೆಲವು ವರ್ಷಗಳ ಹಿಂದ ನಿರಾಶ್ರಿತರ ಶಿಬಿರದ ಕಷ್ಟ, ನಷ್ಟಗಳನ್ನು ಅನುಭವಿಸಿದವರು. ಅಫ್ಗಾನಿಸ್ತಾನದಲ್ಲಿ ತಾಲಿಬಾನಿಗಳ ದಾಳಿಗೆ ನಲುಗಿ ಬಾಲ್ಯದಲ್ಲಿಯೇ ದೇಶ ಬಿಟ್ಟವರು. ಬೇರೆ ದೇಶದಲ್ಲಿ ಆಶ್ರಯ ಪಡೆದಿದ್ದರು. ಆದರೂ ಛಲ ಬಿಡದೇ ಸೈಕ್ಲಿಸ್ಟ್ ಆಗಿ ಬೆಳೆದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ರೆಫ್ಯೂಜಿ ತಂಡವನ್ನು ಪ್ರತಿನಿಧಿಸಿದರು. ಲಕ್ಷಾಂತರ ನಿರಾಶ್ರಿತರಿಗೆ ಸ್ಫೂರ್ತಿಯ ಸೆಲೆಯಾದರು.

ಈ ಬಾರಿಯ ಕೂಟದಲ್ಲಿ 11 ದೇಶಗಳ 36 ಅಥ್ಲೀಟ್‌ಗಳು ನಿರಾಶ್ರಿತರ ತಂಡದಲ್ಲಿದ್ದಾರೆ. 12 ಕ್ರೀಡೆಗಳಲ್ಲಿ ಸ್ಪರ್ಧಿಸುತ್ತಿದ್ದಾರೆ.

‘ವಿಶೇಷವಾಗಿರುವ ಈ ತಂಡವನ್ನು ಪ್ರತಿನಿಧಿಸುತ್ತಿರುವುದು ನನಗೆ ಲಭಿಸಿರುವ ದೊಡ್ಡ ಗೌರವ. ನನಗೆ ಬಹಳ ಕರಾಳ ಅನುಭವಗಳು ಆಗಿವೆ. ಅದರಿಂದಾಗಿಯೇ ನಾನು ಗೌರವಯುತವಾದ ಜೀವನ ಕಟ್ಟಿಕೊಳ್ಳಲು ಛಲದಿಂದ ಮುನ್ನುಗ್ಗಿದೆ. ನನ್ನನ್ನು ನಾನೇ ಕೆಲವು ಪ್ರಶ್ನೆಗಳನ್ನು ಕೇಳಿಕೊಂಡೆ. ಅವುಗಳಿಗೆ ಉತ್ತರ ಹುಡುಕುತ್ತ ಸಾಗಿದೆ’ ಎಂದರು.



ಮಸೋಮಾ ಅಲಿ ಝೂದಾ –ಎಎಫ್‌ಪಿ ಚಿತ್ರ

ಎಂಟು ವರ್ಷಗಳ ಹಿಂದೆ ಅವರು ಫ್ರಾನ್ಸ್‌ಗೆ ಬಂದ ಮೇಲೆ ಜೀವನದಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡಿದ್ದಾರೆ.

‘ಫ್ರಾನ್ಸ್‌ನಲ್ಲಿ ನಾನು ಸ್ವತಂತ್ರವಾಗಿ ಜೀವನ ಮಾಡಬಲ್ಲೆ. ಯಾವಾಗ ಬೇಕಾದರೂ, ಎಲ್ಲಿಗಾದರೂ ಹೋಗಬಹುದು. ಆದರೆ ನನ್ನ ತವರು ಅಫ್ಗಾನಿಸ್ತಾನದಲ್ಲಿ ಮಹಿಳೆಯರ ಪರಿಸ್ಥಿತಿ ಸರಿಯಿಲ್ಲ. ಅವರಿಗೆ ಬದುಕುವ ಮುಕ್ತ ವಾತಾವರಣವಿಲ್ಲ. ಅದಕ್ಕಾಗಿ ನನಗೆ ಬಹಳ ದುಃಖವಾಗಿದೆ’ ಎಂದು ಝುದಾ ಪತ್ರಕರ್ತರ ಮುಂದೆ ಬೇಸರ ವ್ಯಕ್ತಪಡಿಸಿದರು.

‘ಇಷ್ಟೆಲ್ಲದರ ನಡುವೆಯೂ ಈ ಒಲಿಂಪಿಕ್ಸ್‌ನಲ್ಲಿ ಅಫ್ಗಾನಿಸ್ತಾನದ ಮೂವರು ಮಹಿಳೆಯರು ಸ್ಪರ್ಧಿಸುತ್ತಿದ್ದಾರೆ. ಇದು ನಿಜಕ್ಕೂ ಸಂತಸ ಪಡುವ ವಿಚಾರ. ಅವರು ಪುರುಷರಿಗೆ ಸಮಬಲವಾಗಿದ್ದಾರೆ’ ಎಂದರು.

ದಕ್ಷಿಣ ಕೊರಿಯಾ ಕ್ಷಮೆ ಕೇಳಿದ ಐಒಸಿ

ಸೋಲ್ (ಎಎಫ್‌ಪಿ): ಪ್ಯಾರಿಸ್ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ದಕ್ಷಿಣ ಕೊರಿಯಾ ಅಥ್ಲೀಟುಗಳನ್ನು, ಉತ್ತರ ಕೊರಿಯಾದವರು ಎಂದು ಸಂಬೋಧಿಸಿ ಉಂಟಾದ ಮುಜುಗರಕ್ಕೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು (ಐಒಸಿ) ಶನಿವಾರ ದಕ್ಷಿಣ ಕೊರಿಯಾದ ಕ್ಷಮೆ ಕೇಳಿದೆ.

ದಕ್ಷಿಣ ಕೊರಿಯಾ ಅಥ್ಲೀಟುಗಳ ತಂಡ ಸೇನ್ ನದಿಯಲ್ಲಿ ಪಥಸಂಚಲನದ ವೇಳೆ ಹಾದುಹೋಗುತ್ತಿದ್ದಂತೆ ಆ ತಂಡದ ಹೆಸರನ್ನು ‘ರಿಪಬ್ಲಿಕ್ ಡೆಮಾಕ್ರಟಿಕ್ ಡಿ ಕೋರಿ’ ಎಂದು ಫ್ರೆಂಚ್ ಭಾಷೆಯಲ್ಲಿ, ‘ಡೆಮಾಕ್ರಟಿಕ್ ಪೀಪಲ್ಸ್ ರಿಪಬ್ಲಿಕ್ ಆಫ್ ಕೊರಿಯಾ’ ಎಂದು ಇಂಗ್ಲಿಷ್‌ನಲ್ಲಿ ಪರಿಚಯಿಸಲಾಯಿತು. ಇದು ಉತ್ತರ ಕೊರಿಯಾದ ಅಧಿಕೃತ ಹೆಸರು. ದಕ್ಷಿಣ ಕೊರಿಯಾದ ಅಧಿಕೃತ ಹೆಸರು ‘ರಿಪಬ್ಲಿಕ್ ಆಫ್ ಕೊರಿಯಾ’. ಆದರೆ ಉತ್ತರ ಕೊರಿಯಾವನ್ನು ಸರಿಯಾಗಿಯೇ ಪರಿಚಯಿಸಲಾಯಿತು.

‘ಉದ್ಘಾಟನಾ ಸಮಾರಂಭದಲ್ಲಿ ಪ್ರಸಾರ ಮಾಡುವಾಗ, ದಕ್ಷಿಣ ಕೊರಿಯಾ ತಂಡವನ್ನು ತಪ್ಪಾಗಿ ಪರಿಚಯಿಸಿದ್ದಕ್ಕೆ ನಾವು ಕ್ಷಮಾಪಣೆ ಕೇಳುತ್ತೇವೆ’ ಎಂದು ಕೊರಿಯನ್ ಭಾಷೆಯಲ್ಲಿ ಐಒಸಿ ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದೆ.



ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ಶನಿವಾರ ಪುರುಷರ ಹಾಕಿ ಪಂದ್ಯದಲ್ಲಿ ಭಾರತ ತಂಡದ ಆಟಗಾರ ವಿವೇಕ್ ಸಾಗರ್ ಪ್ರಸಾದ್ (ಬಲದಿಂದ ಎರಡನೇಯವರು) ನ್ಯೂಜಿಲೆಂಡ್ ಎದುರು ಗೋಲು ಗಳಿಸಲು ಮುಂದಾದ ಕ್ಷಣ –ಪ್ರಜಾವಾಣಿ ಚಿತ್ರ/ಕೆ.ಎನ್‌ ಶಾಂತಕುಮಾರ್

ಕೊನೆಯ ಕ್ಷಣದಲ್ಲಿ ಮಿಂಚಿದ ಹರ್ಮನ್‌ಪ್ರೀತ್, ಮನದೀಪ್, ವಿವೇಕ್

ಭಾರತಕ್ಕೆ ಮಣಿದ ನ್ಯೂಜಿಲೆಂಡ್

ಪ್ಯಾರಿಸ್ (ಪಿಟಿಐ): ಭಾರತ ಹಾಕಿ ತಂಡವು ಬಲಾಢ್ಯ ನ್ಯೂಜಿಲೆಂಡ್ ಪಡೆಯು ಒಡ್ಡಿದ್ದ ಕಠಿಣ ಪೈಪೋಟಿಯನ್ನು ಮೀರಿ ನಿಂತಿತು.

ಶನಿವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 3–2ರಿಂದ ನ್ಯೂಜಿಲೆಂಡ್ ಎದುರು ಜಯಿಸಿತು.

ಪಂದ್ಯದ ಎಂಟನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ನ್ಯೂಜಿಲೆಂಡ್ ತಂಡವು 1–0 ಗೋಲು ಮುನ್ನಡೆ ಸಾಧಿಸಿತು. ಸ್ಯಾಮ್ ಲೇನ್ ಗೋಲು ಹೊಡೆದರು. ಭಾರತ ತಂಡವು ಸತತ ಪ್ರಯತ್ನದ ಮೂಲಕ 24ನೇ ನಿಮಿಷದಲ್ಲಿ ತಿರುಗೇಟು ನೀಡಿತು. ಮನದೀಪ್ ಸಿಂಗ್ ಪೆನಾಲ್ಟಿ ಕಾರ್ನರ್‌ನಲ್ಲಿ ರಿಬೌಂಡ್ ಮಾಡಿ ಗೋಲು ಗಳಿಸಿದರು. ಇದರಿಂದ 1–1ರ ಸಮಬಲವಾಯಿತು. ಮೂರನೇ ಕ್ವಾರ್ಟರ್‌ನಲ್ಲಿ ವಿವೇಕ್ ಸಾಗರ್ ಅವರು ಹೊಡೆದ ಗೋಲು ಭಾರತಕ್ಕೆ ಮುನ್ನಡೆ ಒದಗಿಸಿತು.

ನ್ಯೂಜಿಲೆಂಡ್ ತಂಡದ ಸೈಮನ್ ಚೈಲ್ಡ್ ಅವರು 53ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ 2–2ರ ಸಮಬಲಕ್ಕೆ ಕಾರಣರಾದರು. ಇದರಿಂದಾಗಿ ನಂತರದ ಅವಧಿಯಲ್ಲಿ ಪಂದ್ಯವು ರೋಚಕ ತಿರುವು ಪಡೆಯಿತು.

ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಉಭಯ ತಂಡಗಳ ಆಟಗಾರರ ಪೈಪೋಟಿ ಹೆಚ್ಚಾಯಿತು. ಪಂದ್ಯದ ಮುಕ್ತಾಯದ ಹೂಟರ್ ಮೊಳಗಲು ಒಂದು ನಿಮಿಷ ಬಾಕಿಯಿದ್ದಾಗ ಸಿಕ್ಕ ಪೆನಾಲ್ಟಿ ಕಾರ್ನರ್‌ನಲ್ಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಗೋಲು ಗಳಿಸಿದರು. ಇದೇ ತಂಡಕ್ಕೆ ನಿರ್ಣಾಯಕ ಮುನ್ನಡೆ ಒದಗಿಸಿತು.

ಸೋಮವಾರ ನಡೆಯುವ ಎರಡನೇ ಪಂದ್ಯದಲ್ಲಿ ಭಾರತ ತಂಡವು ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ಕಂಚಿನ ಪದಕ ಜಯಿಸಿತ್ತು. 40 ವರ್ಷಗಳ ನಂತರ ಒಲಿಂಪಿಕ್ಸ್ ಪದಕ ಜಯಿಸಿದ ಸಾಧನೆ ಮಾಡಿತ್ತು.

ಮೊದಲ ಟಿ20 ಪಂದ್ಯ: ನಾಯಕ ಸೂರ್ಯಕುಮಾರ್ ಅರ್ಧಶತಕ

ಭಾರತ ಶುಭಾರಂಭ: ಲಂಕಾಗೆ ಸೋಲು

ಕ್ಯಾಂಡಿ (ಶ್ರೀಲಂಕಾ), (ಎಎಫ್‌ಪಿ): ನೂತನ ನಾಯಕ ಸೂರ್ಯಕುಮಾರ್ ಯಾದವ್ ಆಕ್ರಮಣಕಾರಿ ಅರ್ಧಶತಕ ಗಳಿಸಿದ ನಂತರ ಶ್ರೀಲಂಕಾ ತಂಡದ ಪ್ರತಿಹೋರಾಟಕ್ಕೆ ಭಾರತದ ಬೌಲರ್‌ಗಳು ತಡೆ ಹಾಕಿದರು. ಶನಿವಾರ ನಡೆದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಭಾರತ 43 ರನ್‌ಗಳಿಂದ ಜಯಗಳಿಸಿತು.

ಸೂರ್ಯಕುಮಾರ್ ಆ ಮೂಲಕ ನಾಯಕನಾಗಿ ಉತ್ತಮ ಆರಂಭ ಮಾಡಿದರು. ಅವರು ಕೇವಲ 26 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್‌ಗಳ ನೆರವಿನಿಂದ 58 ರನ್ ಹೊಡೆದರು. ಭಾರತ 20 ಓವರುಗಳಲ್ಲಿ 7 ವಿಕೆಟ್‌ಗೆ 213 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಉಪಯುಕ್ತ ಆಟವಾಡಿದ ವಿಕೆಟ್ ಕೀಪರ್ ರಿಷಭ್ ಪಂತ್ (49, 33 ಎಸೆತ) ಜೊತೆ ಸೂರ್ಯ ಮೂರನೇ ವಿಕೆಟ್‌ಗೆ 76 ರನ್ ಸೇರಿಸಿದ್ದರು.

ಶ್ರೀಲಂಕಾ ಉತ್ತಮ ಆರಂಭ ಮಾಡಿತು. ನಿಸಾಂಕ (79, 48 ಎಸೆತ) ಮತ್ತು ಕುಶಲ್ ಮೆಂಡಿಸ್ (45, 27ಎಸೆತ) ಲಂಕಾ ತಂಡಕ್ಕೆ ಕೇವಲ 8.4 ಓವರುಗಳಲ್ಲಿ 84 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ಒಂದು ಹಂತದಲ್ಲಿ 14 ಓವರುಗಳಲ್ಲಿ 1 ವಿಕೆಟ್‌ಗೆ 140 ರನ್ ಗಳಿಸಿದ್ದ ಆತಿಥೇಯರು ಗೆಲುವಿನತ್ತ ದಾಪುಗಾಲು ಹಾಕಿದ್ದರು. ಆದರೆ ನಂತರ ಭಾರತದ ಬೌಲರ್‌ಳು ತಿರುಗೇಟು ನೀಡಿದರು. ತಂಡ 19.2 ಓವರುಗಳಲ್ಲಿ 170 ರನ್ನಿಗೆ ಕುಸಿಯಿತು.



ಸೂರ್ಯಕುಮಾರ್ ಯಾದವ್ –ಎಕ್ಸ್ ಚಿತ್ರ

ಆರಂಭ ಆಟಗಾರರನ್ನು ಬಿಟ್ಟರೆ, ಕುಶಲ್ ಪೆರೇರಾ ಗಳಿಸಿದ 20 ರನ್‌ಗಳೇ ದೊಡ್ಡ ಮೊತ್ತ ಎನಿಸಿತು. ಉಳಿದ ಬ್ಯಾಟರ್‌ಗಳು ವಿಫಲರಾದರು. ಕೊನೆಯವರಾಗಿ ದಾಳಿಗಿಳಿದ ಲೆಗ್‌ಬ್ರೇಕ್ ಬೌಲರ್ ರಿಯಾನ್ ಪರಾಗ್ 5 ರನ್ನಿಗೆ 3 ವಿಕೆಟ್ ಪಡೆದು ಮಿಂಚಿದರು. ಅರ್ಷದೀಪ್ ಸಿಂಗ್ ಮತ್ತು ಅಕ್ಷರ್ ಪಟೇಲ್ ತಲಾ ಎರಡು ವಿಕೆಟ್‌ಗಳನ್ನು ಪಡೆದು ಲಂಕಾ ಕುಸಿತಕ್ಕೆ ಕಾಣಿಕೆ ನೀಡಿದರು.

ಟಾಸ್ ಗೆದ್ದ ಭಾರತಕ್ಕೆ ಯಶಸ್ವಿ ಜೈಸ್ವಾಲ್ (40) ಮತ್ತು ಶುಭಮನ್ ಗಿಲ್ (34) ಪವರ್‌ಪ್ಲೇ ಅವಧಿಯಲ್ಲಿ 74 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ನಂತರ ಸೂರ್ಯ ಮತ್ತು ಪಂತ್ ತಂಡಕ್ಕೆ ಆಧಾರವಾದರು.

ಸ್ಕೋರುಗಳು: ಭಾರತ: 20 ಓವರುಗಳಲ್ಲಿ 7 ವಿಕೆಟ್‌ಗೆ 213 (ಯಶಸ್ವಿ ಜೈಸ್ವಾಲ್ 40, ಶುಭಮನ್ ಗಿಲ್ 34, ಸೂರ್ಯಕುಮಾರ್ ಯಾದವ್ 58, ರಿಷಭ್ ಪಂತ್ 49; ಮಥೀಶ ಪತಿರಾಣ 40ಕ್ಕೆ4); **ಶ್ರೀಲಂಕಾ:** 19.2 ಓವರುಗಳಲ್ಲಿ 170 (ಪಥುಮ್ ನಿಸಾಂಕ 79, ಕುಶಲ್ ಮೆಂಡಿಸ್ 45, ಕುಶಲ್ ಪೆರೇರಾ 20; ಅರ್ಷದೀಪ್ ಸಿಂಗ್ 24ಕ್ಕೆ2, ಅಕ್ಷರ್ ಪಟೇಲ್ 38ಕ್ಕೆ2, ರಿಯಾನ್ ಪರಾಗ್ 5ಕ್ಕೆ3). **ಪಂದ್ಯದ ಆಟಗಾರ:** ಸೂರ್ಯಕುಮಾರ್ ಯಾದವ್.

ಸ್ಪರ್ಧೆಗಳಿಗೆ ಮಳೆ ಅಡಚಣೆ

ಪ್ಯಾರಿಸ್ (ರಾಯಿಟರ್ಸ್/ಎಪಿ): ಶುಕ್ರವಾರ ಸಂಜೆ ಮತ್ತು ಶನಿವಾರ ಬೆಳಿಗ್ಗೆ ಸುರಿದ ಮಳೆಯ ಕಾರಣ ಒಲಿಂಪಿಕ್ಸ್‌ನಲ್ಲಿ ಹಲವು ಸ್ಪರ್ಧೆಗಳಿಗೆ ಅಡಚಣೆಯಾಗಿದೆ.

ಶನಿವಾರ ನಡೆಯಬೇಕಿದ್ದ ಸ್ಕೇಟ್ ಬೋರ್ಡಿಂಗ್ ವಿಭಾಗದ ಮೊದಲ ಸ್ಪರ್ಧೆಯನ್ನು ಮುಂದಕ್ಕೆ ಹಾಕಲಾಗಿದೆ. ಟೆನಿಸ್ ಸ್ಪರ್ಧೆಗಳೂ ವಿಳಂಬವಾಗಿದೆ.

ಉದ್ಘಾಟನೆ ಸಮಾರಂಭಕ್ಕೆ ಮೊದಲು ಸುರಿದ ಮಳೆ ಯಿಂದ ಆಯೋಜಕರ ಉತ್ಸಾಹ ಸ್ವಲ್ಪ ಮಟ್ಟಿಗೆ ಕುಂದಿತ್ತು. ರಾತ್ರಿ 1.30ರ (ಭಾರತೀಯ ಕಾಲಮಾನ) ನಂತರ ಮಳೆಯ ಅಬ್ಬರ ತಗ್ಗಿದರೂ, ಹಲವು ದೇಶಗಳ ಕ್ರೀಡಾಪಟುಗಳು ದೋಣಿಗಳಲ್ಲಿ ನಡೆದ ಮೆರವಣಿಗೆಯಿಂದ ದೂರ ಉಳಿಸಿದ್ದರು.

ಸ್ಕೇಟ್‌ಬೋರ್ಡಿಂಗ್ ಸ್ಪರ್ಧೆಯನ್ನು ಹೊರಾಂಗಣ ತಾಣ ಡೆಲಾ ಕಂಕೋರ್ಡ್ ಅರ್ಬನ್ ಪಾರ್ಕ್‌ನಲ್ಲಿ ನಡೆಸಲಾಗುತ್ತದೆ. ಅಂಗಣ ತೇವವಾಗಿದ್ದ ಕಾರಣ ಪುರುಷರ ವಿಭಾಗದ ಸ್ಪರ್ಧೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ ಎಂದು ಕ್ರೀಡೆಯ ಆಡಳಿತ ನಿರ್ವಹಿಸುವ 'ವಿಶ್ವ ಸ್ಕೇಟ್' ತಿಳಿಸಿದೆ.

ಟೆನಿಸ್ ಸ್ಪರ್ಧೆಯ ಆರಂಭದ ದಿನವೇ ಅಭಿಮಾನಿಗಳನ್ನು ನಿರಾಸೆಗೊಳಿಸಿತು. ಚಾವಣಿಯ ಅಡಿಯಲ್ಲಿ ನಡೆಯುವ ಫಿಲಿಪ್ ಶಾಟಿಯೆ ಅಂಕಣ ಮತ್ತು ಸುಝೇನ್ ಲೆಂಗ್ಲೆನ್ ಅಂಕಣದಲ್ಲಿ ಸ್ಪರ್ಧೆಯು ಸಮಯಕ್ಕೆ ಪ್ರಾರಂಭವಾಯಿತು. ಆದರೆ, ಹೊರಾಂಗಣದಲ್ಲಿ ಸ್ಪರ್ಧೆಗಳು ವಿಳಂಬವಾದವು.

ಎಂಟನೇ ಪ್ರಶಸ್ತಿ ಮೇಲೆ ಭಾರತದ ಕಣ್ಣು

ಇಂದು ಲಂಕಾ ವಿರುದ್ಧ ಪಂದ್ಯ • ಅಜೇಯವಾಗಿರುವ ಉಭಯ ತಂಡಗಳು

ದಂಬುಲಾ, ಶ್ರೀಲಂಕಾ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ, ಮಹಿಳಾ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾನುವಾರ ಆತಿಥೇಯ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಈ ಬಾರಿ ಟೂರ್ನಿಯುದ್ದಕ್ಕೂ ಪ್ರಾಬಲ್ಯ ಮೆರೆದಿರುವ ಭಾರತ ಅದನ್ನು ಮುಂದುವರಿಸಿ ದಾಖಲೆ ಎಂಟನೇ ಬಾರಿ ಟ್ರೋಫಿ ಗೆಲ್ಲುವ ಗುರಿಯಲ್ಲಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಏಳು ವಿಕೆಟ್‌ಗಳ ಜಯ ಗಳಿಸಿದ ಭಾರತ ವನಿತೆಯರು, ನಂತರದ ಪಂದ್ಯಗಳಲ್ಲಿ ಯುಎಇ ವಿರುದ್ಧ 78ರನ್‌ಗಳಿಂದ, ನೇಪಾಳ ವಿರುದ್ಧ 82 ರನ್‌ಗಳಿಂದ ಮತ್ತು ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ವಿರುದ್ಧ 10 ವಿಕೆಟ್‌ಗಳ ಸುಲಭ ಗೆಲುವು ಪಡೆದಿರುವುದು ತಂಡದ ಮೇಲುಗೈಯನ್ನು ಸೂಚಿಸುತ್ತಿದೆ.

ಆರಂಭಿಕ ಬ್ಯಾಟರ್‌ಗಳಾದ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು 140ರ ಸ್ಟ್ರೈಕ್ ರೇಟ್‌ನಲ್ಲಿ 100ಕ್ಕೂ ಹೆಚ್ಚಿನ ರನ್ ಗಳಿಸಿದ್ದಾರೆ. ತಂಡಕ್ಕೆ ಬಿರುಸಿನ ಆರಂಭ ನೀಡಿದ್ದಾರೆ. ಹರ್ಮನ್‌ಪ್ರೀತ್ ಒಮ್ಮೆ ಅರ್ಧಶತಕ (66) ದಾಖಲಿಸಿದ್ದಾರೆ.

ಆದರೆ ತಂಡದ ಚಿಂತಕರ ಚಾವಡಿಗೆ ಖುಷಿಕೊಟ್ಟಿರುವುದು ದೀಪ್ತಿ ಶರ್ಮಾ ಮತ್ತು ರೇಣುಕಾ ಸಿಂಗ್ ಅವರ ಬೌಲಿಂಗ್ ಪ್ರದರ್ಶನ. ದೀಪ್ತಿ ಒಂಬತ್ತು ವಿಕೆಟ್‌ಗಳೊಡನೆ ಬೌಲರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.



ಭಾರತದ ರೇಣುಕಾ ಸಿಂಗ್ –ಪಿಟಿಐ ಚಿತ್ರ

ಮಹಿಳೆಯರ ಏಷ್ಯಾ ಕಪ್ 2024



ಚಾಮರಿ ಅಟಪಟ್ಟು

ಏಳು ವಿಕೆಟ್ ಉರುಳಿಸಿರುವ ರೇಣುಕಾ ಮೂರನೇ ಸ್ಥಾನದಲ್ಲಿದ್ದಾರೆ. ರಾಧಾ ಯಾದವ್ ಆರು ವಿಕೆಟ್ ಗಳಿಸಿದ್ದಾರೆ.

ಮತ್ತೊಂದೆಡೆ ಶ್ರೀಲಂಕಾ ಕೂಡಾ ಟೂರ್ನಿಯಲ್ಲಿ ಅಜೇಯವಾಗುಳಿದಿದೆ. ಶ್ರೀಲಂಕಾದ ಆಧಿಪತ್ಯಕ್ಕೆ ನಾಯಕಿ ಚಾಮರಿ ಅಟ್ಟಪಟ್ಟು ಅವರ ಉತ್ತಮ ಫಾರ್ಮ್ ಕಾರಣವಾಗಿದೆ. ಅವರು ಈ ಟೂರ್ನಿಯಲ್ಲಿ 243 ರನ್ ಗಳಿಸಿ ಯಶಸ್ವಿ ಬ್ಯಾಟರ್ ಎನಿಸಿದ್ದಾರೆ.

ಚಾಮರಿ ಅಟ್ಟಪಟ್ಟು ಅವರನ್ನು ಬಿಟ್ಟರೆ ತಂಡದ ಇತರ ಬ್ಯಾಟರ್‌ಗಳು ಅಷ್ಟೇನೂ ಯಶಸ್ಸು ಗಳಿಸಿಲ್ಲ. ರಶ್ಮಿ ಗುಣರತ್ನೆ ಅವರು 91ರನ್ ಗಳಿಸಿದ್ದು ತಂಡದ ಪರ ಎರಡನೇ ಗರಿಷ್ಠ ಮೊತ್ತವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3, ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಹಾಟ್‌ಸ್ಟಾರ್

ವಿಕೆಟ್‌ಕೀಪರ್ ಸಂಖ್ಯೆ ಹೆಚ್ಚಳ: ಕರೀಂ ಸಂತಸ

ಪೆಲೆಕೆಲೆ (ಪಿಟಿಐ): ಭಾರತ ತಂಡದಲ್ಲಿ ಈಗ ಉತ್ತಮ ವಿಕೆಟ್‌ಕೀಪರ್‌ಗಳ ಸಂಖ್ಯೆ ಹೆಚ್ಚಿದೆ. ಮೊದಲ ವಿಕೆಟ್‌ಕೀಪರ್ ಸ್ಥಾನಕ್ಕಾಗಿ ಪೈಪೋಟಿ ಬಲವಾಗಿದೆ. ಇದೊಂದು ಉತ್ತಮ ಬೆಳವಣಿಗೆ ಎಂದು ಕ್ರಿಕೆಟ್ ವೀಕ್ಷಕ ವಿವರಣೆಕಾರ ಸಬಾ ಕರೀಂ ಹೇಳಿದರು.

ಶ್ರೀಲಂಕಾ ಎದುರಿನ ಟಿ20 ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ರಿಷಭ್ ಪಂತ್ ಮತ್ತು ಸಂಜು ಸ್ಯಾಮ್ಸನ್ ಇದ್ದಾರೆ. ಏಕದಿನ ಸರಣಿಯಲ್ಲಿ ರಿಷಭ್ ಪಂತ್ ಹಾಗೂ ಕೆ.ಎಲ್. ರಾಹುಲ್ ಸ್ಥಾನ ಗಳಿಸಿದ್ದಾರೆ. ಭಾರತ ತಂಡದ ಮಾಜಿ ವಿಕೆಟ್ ಕೀಪರ್ ಕೂಡ ಆಗಿರುವ ಕರೀಂ ಈ ಕುರಿತು ಸಂತಸ ವ್ಯಕ್ತಪಡಿಸಿದ್ದಾರೆ. ಅವರು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದರು.

'ಕ್ರಿಕೆಟ್ ತಂಡದಲ್ಲಿ ವಿಕೆಟ್‌ಕೀಪರ್ ಸ್ಥಾನವು ಮಹತ್ವದ್ದು. ದೇಶದಲ್ಲಿ ಈ ವಿಭಾಗದಲ್ಲಿ ಉತ್ತಮ ಆಟಗಾರರು ಹೊರಹೊಮ್ಮುತ್ತಿರುವುದು ಆಶಾದಾಯಕ ಬೆಳವಣಿಗೆ. ಶ್ರೀಲಂಕಾ ವಿರುದ್ಧದ ಸರಣಿಯು ಮಹತ್ವದ್ದಾಗಿದೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಲ್ಲದ ಟಿ20 ತಂಡದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ಲಭಿಸಿದೆ. ಅವರು ತಮ್ಮ ಸಾಮರ್ಥ್ಯ ಮೆರೆಯಲು ಇದು ಸೂಕ್ತ ಸಮಯ. ಭವಿಷ್ಯದಲ್ಲಿ ಭಾರತ ತಂಡದ ಶಕ್ತಿಯಾಗುವಂತಹ ಆಟಗಾರರು ಇದರಲ್ಲಿದ್ದಾರೆ' ಎಂದರು.

'ಕೆ.ಎಲ್. ರಾಹುಲ್ ಏಕದಿನ ಸರಣಿಯಲ್ಲಿ ಆಡಲಿರುವುದು ಸೂಕ್ತವಾಗಿದೆ. ಅವರು ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದರು. ಅನುಭವ ಮತ್ತು ಪ್ರತಿಭೆ ಎರಡೂ ಅವರಲ್ಲಿದೆ. ತಂಡದ ಶಕ್ತಿಯಾಗುವ ಆಟಗಾರ ಅವರು' ಎಂದರು.